limit ಹಾಕಿ ಇದರ ಚರ್ಚೆಯನ್ನು ಮುಗಿಸಿಬಿಡೋಣ. ಏಕೆಂದರೆ, demands ಮೇಲೆಯೂ ಚರ್ಚೆ ಮಾಡಬೇಕಾಗಿದೆ.

ಶ್ರೀ ಸಿದ್ದರಾಮಯ್ಯ: ಈಗಲೇ ಇದನ್ನು convert ಮಾಡಿ, discussionಗೆ ಅನುಮತಿ ನೀಡಿದರೆ ನಂತರ ಸರ್ಕಾರ ಉತ್ತರ ಕೊಡಬಹುದು.

5. ಸಭಾಧ್ಯಕ್ಷರ ತೀರ್ಪು

ವಿಷಯ: ದಿನಾಂಕ 25–6–2009ರಂದು ರಾಜ್ಯ ಸರ್ಕಾರದ ಆದೇಶದ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಸುತ್ತೋಲೆಯನ್ನು ಹೊರಡಿಸಿರುವ ಬಗ್ಗೆ. ನಿಯಮ 60ರ ಅಡಿಯಲ್ಲಿ ನೀಡಿದ್ದ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ನಿಯಮ 69ಕ್ಕೆ ಪರಿವರ್ತಿಸಿ, ಚರ್ಚೆಗೆ ಅನುಮತಿ ನೀಡಿರುವ ಬಗ್ಗೆ

ಅಧ್ಯಕ್ಷರು: ನಾನು ಈ ನಿಲುವಳಿ ಸೂಚನೆಯನ್ನು Rule 69 ಗೆ convert ಮಾಡಿ ನಿಮಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಒಂದು ತಾಸಿನಲ್ಲಿ ಈ ಚರ್ಚೆ ಮುಗಿಯಬೇಕು.

6. ನಿಯಮ 69ರ ಮೇರೆಗೆ ಚರ್ಚೆ:

ವಿಷಯ: ದಿನಾಂಕ 25–6–2009ರಂದು ರಾಜ್ಯ ಸರ್ಕಾರದ ಆದೇಶದ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆ ಬಗ್ಗೆ

ಶ್ರೀ ಸಿದ್ದರಾಮಯ್ಯ: ಆಯಿತು, ಒಂದು ತಾಸಿನಲ್ಲೇ ಮುಗಿಸಿಬಿಡೋಣ.

ಶ್ರೀ ಎಸ್. ಸುರೇಶ್ ಕುಮಾರ್: ಒಂದು ತಾಸಿನಲ್ಲೇ ಮುಗಿಸಬೇಕು ಎಂದರೆ ಚರ್ಚೆ ಮುಗಿಸಬೇಕೇ ಅಥವಾ...

ಅಧ್ಯಕ್ಷರು: ಚರ್ಚೆ ಮತ್ತು ಉತ್ತರ ಎರಡೂ ಮುಗಿಯಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ಅಂದರೆ ಒಂದು ತಾಸಿನಲ್ಲಿ ಚರ್ಚೆ ಮತ್ತು ಉತ್ತರ ಎರಡನ್ನೂ ಮುಗಿಸಬೇಕು.

Sri Siddaramaiah: Let us put it like this, as quickly as possible.

Sri S. Suresh Kumar: That is the very relative term.

ಶ್ರೀ ಸಿದ್ದರಾಮಯ್ಯ: ಒಂದು ಗಂಟೆಯಲ್ಲೇ ಮುಗಿಸಲು ಪ್ರಯತ್ನ ಮಾಡೋಣ. ಇದು ಸರ್ಕಾರಕ್ಕಿಂಥ ಹೆಚ್ಚಾಗಿ ಮಾನ್ಯ ಅಧ್ಯಕ್ಷರ ತೀರ್ಮಾನಕ್ಕೆ ಬಿಟ್ಟಿದ್ದು.

ಅಧ್ಯಕ್ಷರು: ನಿಲುವಳಿ ಸೂಚನೆ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರು ಹಲವಾರು ವಿಷಯಗಳನ್ನು ಸದನಕ್ಕೆ ತೆಗೆದುಕೊಂಡು ಬರುತ್ತೀರಿ.

ನಿಮಗೆ ಆ ಹಕ್ಕು ಇದೆ. ಅದೇ ರೀತಿ, ಮಾನ್ಯ ರೇವಣ್ಣನವರೂ ಹಲವಾರು ವಿಷಯಗಳನ್ನು ತೆಗೆದುಕೊಂಡು ಬಂದಿದ್ದಾರೆ. ರೂಲ್ 69ರಲ್ಲಿ ಚರ್ಚೆಯಾಗುವಂಥ ಕೆಲವು ವಿಷಯಗಳು ಇನ್ನೂ ಅಜೆಂಡಾದಲ್ಲಿ ಉಳಿದಿವೆ. ಮತ್ತು ಬಜೆಟ್ ಮೇಲೆ ಚರ್ಚೆಯಾಗಬೇಕಾಗಿದೆ. Demands ಮೇಲೆ ಚರ್ಚೆ ಇನ್ನೂ ಪ್ರಾರಂಭವಾಗಲೇ ಇಲ್ಲ. ಈ ಮೊದಲು ನನ್ನ plan ಇದ್ದ ಪ್ರಕಾರ, ಚರ್ಚೆಗೆ ಇವತ್ತು ಮತ್ತು ನಾಳೆ ಅವಕಾಶ ಕೊಟ್ಟು, ಮೊದಲು ವಿರೋಧ ಪಕ್ಷದ ನಾಯಕರು ಮಾತನಾಡಿ ಆದ ಮೇಲೆ, ನಾಳೆ ಬೆಳಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ demands ಮೇಲೆ ಉತ್ತರ ಕೊಟ್ಟು, ನಾಳೆ ಮಧ್ಯಾಹ್ನದೊಳಗೆ demands ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಬೇಕು ಎನ್ನುವ ಒಂದು ವಿಚಾರ ನನ್ನದಿತ್ತು. ಆದರೆ demands ಮೇಲೆ ಚರ್ಚೆಯೇ ಇನ್ನೂ ಪ್ರಾರಂಭವಾಗಿಲ್ಲ. ಅದಕ್ಕೂ ನಾವು importance ಕೊಡಬೇಕಾಗಿದೆ. ನಿಲುವಳಿ ಸೂಚನೆಯ ಮುಖಾಂತರ ತರುವಂಥ ವಿಷಯಗಳಿಗೆ ಮಹತ್ವವಿಲ್ಲ ಎಂದು ನಾನು ಹೇಳುವುದಿಲ್ಲ. ಕೆಲವೊಂದು ವಿಷಯಗಳು ಹೇಗಿರುತ್ತವೆ ಎಂದರೆ, ಬಜೆಟ್ ಮೇಲೆ ಚರ್ಚೆ ಮಾಡುವಂಥ ಸಂದರ್ಭಗಳಲ್ಲಿ ಅವುಗಳನ್ನೂ ಚರ್ಚೆ ಮಾಡಬಹುದು. ಇವತ್ತು ಶೂನ್ಯ ವೇಳೆಯನ್ನು ಪ್ರಸ್ತಾಪ ಮಾಡಬೇಕೆಂದು ಹೇಳಿ ಬಹಳಷ್ಟು ವಿಷಯಗಳ ಬಗ್ಗೆ ಸದಸ್ಯರು ಪತ್ರಗಳನ್ನು ಕೊಟ್ಟಿದ್ದಾರೆ. ಅದರಲ್ಲಿರುವ ಕೆಲವು ವಿಷಯಗಳು, ಬಜೆಟ್ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿಯೇ ಅವುಗಳನ್ನೂ ಮಾನ್ಯ ಗೌರವನ್ವಿತ ಸದಸ್ಯರು ಪ್ರಸ್ತಾಪ ಮಾಡಲು ಅವಕಾಶವಿದೆ. ಅಂಥವುಗಳನ್ನು ಶಾಸಕರು ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡಲಿ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಗೌರವಾನ್ವಿತ ಸದಸ್ಯರು ಅದರ ಬಗ್ಗೆಯೂ ಗಮನ ಹರಿಸಬೇಕು. ಈ ವಿಷಯದ ಬಗ್ಗೆ time limitation ಹಾಕಿಕೊಂಡು, ನಂತರ demands ಮೇಲೆಯೂ ಆದಷ್ಟು ಬೇಗ ಚರ್ಚೆಯನ್ನು ಪ್ರಾರಂಭ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಈ ನಿಮಿಷದವರೆಗೆ ಬಜೆಟ್ ಮೇಲೆ ಚರ್ಚೆಯಾಗಿ ಏನು ಬೆಳಕನ್ನು ಚೆಲ್ಲುಬೇಕಾಗಿತ್ತೋ ಅದು ಆಗಲಿಲ್ಲ. ಆದ್ದರಿಂದ ನನ್ನ ಒಂದು ವಿನಂತಿ ಎಂದರೆ, ಗಿಲೋಟಿನ್‌ಗೆ ಹಾಕುವ ಬದಲು, ರಾತ್ರಿ ಎಂಟು ಗಂಟೆಯಾದರೂ ಪರವಾಗಿಲ್ಲ, ಪ್ರತಿ ಇಲಾಖೆಯ ಬಗ್ಗೆಯೂ ಚರ್ಚೆಯಾದರೆ, ನಮಗೂ ಸಹ ಎಲ್ಲಿ ಏನು ಕೊರತೆಗಳಿವೆ ಎನ್ನುವ ಬಗ್ಗೆ ಒಂದು ಜಾಗೃತಿ ಮೂಡಿಸುವುದಕ್ಕೆ ಸಹಾಯವಾಗುತ್ತದೆ. ಆ ದೃಷ್ಟಿಯಿಂದ,

ದಯಮಾಡಿ ಈ ವಿಷಯ ಚರ್ಚೆಯಾದ ಮೇಲಾದರೂ, ಸವಿಸ್ತಾರವಾಗಿ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ನೀವು ಅವಕಾಶವನ್ನು ಮಾಡಿಕೊಡಬೇಕು. ಅದನ್ನು ನಾನು ಸನ್ಮಾನ್ಯ ವಿರೋಧ ಪಕ್ಷದ ನಾಯಕರುಗಳಲ್ಲಿಯೂ ಮನವಿ ಮಾಡುತ್ತೇನೆ. ಇನ್ನುಳಿದಂಥದ್ದು ನಿಮಗೆ ಬಿಟ್ಟದ್ದು.

ಶ್ರೀ ಹೆಚ್.ಡಿ. ರೇವಣ್ಣ: ಕಳೆದ ಶುಕ್ರವಾರ ನಿಯಮ 69ರಲ್ಲಿ ಚರ್ಚೆ ಅರ್ಧ ಆಗಿತ್ತು. ಅದನ್ನು ಸೋಮವಾರ ಬೆಳಗ್ಗೆಯೇ ತೆಗೆದುಕೊಳ್ಳೋಣ ಎಂದು ತಾವು ಹೇಳಿದ್ದಿರಿ. ಎಲ್ಲ ಶಾಸಕರು ಊರುಗಳಿಗೆ ಹೋಗಬೇಕು ಎನ್ನುವ ಭಾವನೆಯನ್ನು ಮುಖ್ಯ ಸಚೇತಕರು ವ್ಯಕ್ತಪಡಿಸಿದ್ದರಿಂದ, ಸೋಮವಾರ ಬೆಳಗ್ಗೆ ತೆಗೆದುಕೊಳ್ಳೋಣ ಎಂದು ತಾವು ಹೇಳಿದ್ದಿರಿ. ಈಗ ಸಿದ್ದರಾಮಯ್ಯನವರು ನಿಯಮ 69ರಲ್ಲಿ ಚರ್ಚೆಯಾದ ಮೇಲೆ, ನಾನು ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ. ಅದಕ್ಕೆ ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು: Demands ಮೇಲಿನ ಚರ್ಚೆಯಲ್ಲಿ ಕೆಲವರಾದರೂ participate ಮಾಡಲಿ, ಆಮೇಲೆ ನೀವು ರೂಲ್ 69ರ ಅಡಿಯಲ್ಲಿ ಕೊಟ್ಟಿರುವಂಥದ್ದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಸಿದ್ದರಾಮಯ್ಯನವರದು ಆದ ಮೇಲೆ ದಯಮಾಡಿ ನನಗೆ ಅರ್ಧ ಗಂಟೆ ಅವಕಾಶ ಕೊಡಿ ಎಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, demands ಮೇಲೆ ಚರ್ಚೆ ಮಾಡಬೇಕು ಎಂದು ಹೇಳಿ ನಮ್ಮ ಬಹಳ ಜನ ಮಾನ್ಯ ಸದಸ್ಯರು ತಯಾರಾಗಿ ಬಂದಿದ್ದಾರೆ. ಎಲ್ಲ ಇಲಾಖೆಗಳ ಮೇಲೆ ಅವರ ಅಭಿಪ್ರಾಯವನ್ನು ಹೇಳಲಿಕ್ಕೆ, ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಮೊದಲ ದಿನದಿಂದಲೂ ಅವರು ತಯಾರಾಗಿ ಬರುತ್ತಿದ್ದಾರೆ. ಆದರೆ ಇಷ್ಟು ದಿನಗಳಾದರೂ ಕೂಡ ಚರ್ಚೆ ಮಾಡಲಿಕ್ಕೆ ಅವಕಾಶವೇ ಸಿಗಲಿಲ್ಲ. ಇವತ್ತು ಈ ನಿಲುವಳಿ ಸೂಚನೆಯಾದ ತಕ್ಷಣ ಚರ್ಚೆ ಮಾಡಬೇಕು ಎನ್ನತಕ್ಕಂಥದ್ದು ಬಹಳ ಜನ ಸದಸ್ಯರ ಅಭಿಪ್ರಾಯವಾಗಿದೆ. ಅದರಂತೆ ಚರ್ಚೆಯನ್ನು ಪ್ರಾರಂಭ ಮಾಡೋಣ. ಆದರೆ ಇದು ಏಕಿಷ್ಟು handicap ಆಗಿ ಹೋಯಿತು ಎಂದರೆ ಅನೇಕ ತುರ್ತು ವಿಚಾರಗಳ ಬಗ್ಗೆ ಸರ್ಕಾರದ ಗಮನ ಸೆಳೆಯಬೇಕಾದದ್ದು, ಸರ್ಕಾರದ ಉತ್ತರ ಕೇಳಬೇಕಾದಂಥ ಪರಿಸ್ಥಿತಿ ಉದ್ಭವವಾದ್ದರಿಂದ demands

ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶ ಸಿಕ್ಕಲಿಲ್ಲ. ಇದಕ್ಕೆ ಕಾರಣವೆಂದರೆ, ಬಹಳ ಪ್ರಮುಖವಾಗಿ, ಅಧಿವೇಶನವನ್ನು ಬಹಳ ಕಡಿಮೆ ದಿನಗಳ ಅವಧಿಗೆ ಕರೆದಂಥದ್ದು. ಈ ರೀತಿ demands ಇರತಕ್ಕಂಥ ಸಂದರ್ಭದಲ್ಲಿ ಕನಿಷ್ಠವೆಂದರೆ 30 ದಿನಗಳಾದರೂ ಸದನ ನಡೆದರೆ ಇಂಥ ಸಮಸ್ಯೆಗಳಿಗೆಲ್ಲ ಪರಿಹಾರ ಸಿಗಲಿಕ್ಕೆ ಸಾಧ್ಯವಾಗುತ್ತದೆ. ಅನೇಕ ಸಮಸ್ಯೆಗಳಿವೆ. ನಮ್ಮ ಹತ್ತಿರ ಅನೇಕ ಜನಗಳು ಬಂದು ಸಮಸ್ಯೆಗಳನ್ನು ಕೊಟ್ಟಿದ್ದಾರೆ. ಬಹಳಷ್ಟು ಸಮಸ್ಯೆಗಳನ್ನು ಪ್ರಸ್ತಾಪ ಮಾಡಲು ಸಾಧ್ಯವೇ ಆಗುತ್ತಿಲ್ಲ. ಕೆಲವು ಪ್ರಮುಖವಾದ ವಿಷಯಗಳನ್ನು ಮಾತ್ರ adjournment motion ಮೂಲಕ ಏಕೆ ಪ್ರಸ್ತಾಪ ಮಾಡುತ್ತಿದ್ದೇವೆ ಎಂದರೆ ಒಂದು ನಿರ್ದಿಷ್ಟವಾದಂಥ ವಿಚಾರಗಳು ಮತ್ತು ಇತ್ತೀಚೆಗೆ ಆಗಿರತಕ್ಕಂಥ ಘಟನೆಗಳಿಗೆ ಸರ್ಕಾರದಿಂದ ಸ್ಪಷ್ಟವಾದ ಉತ್ತರ ಬಯಸಿರುವುದರಿಂದ ಇವುಗಳನ್ನು ನಾವು adjournment motion ನಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಅಧಿವೇಶನ ಕರೆದಂಥ ಅವಧಿಯಲ್ಲಿ ನಾಲ್ಕು ದಿನಗಳು ಸುಮ್ಮನೆ ಹೊರಟು ಹೋದವು. ಆಕಸ್ಮಿಕವಾಗಿ ಗಂಗೂಬಾಯಿ ಹಾನಗಲ್‌ರವರು ಕಾಲವಾದರು, ಅವತ್ತೊಂದು ದಿನ ಹೋಯಿತು. ಅಧಿವೇಶನವನ್ನು 29ನೇ ತಾರೀಖಿಗೆ ಮುಗಿಸಬೇಕೆಂದು ನಾವೇನು ಅಂದುಕೊಂಡಿದ್ದೆವು, ಅದನ್ನು ಇನ್ನೂ ಒಂದೆರಡು ದಿನ ಮುಂದಕ್ಕೆ ಹಾಕಿದರೆ ಒಳ್ಳೆಯದು ಎಂದು ನಾನು ಅಂದುಕೊಂಡಿದ್ದೇನೆ. ದಯಮಾಡಿ ತಾವು ಆ ಸೂಚನೆಯನ್ನು ಕೊಡಬೇಕು.

ಇವತ್ತು ಬಹಳ ಮುಖ್ಯವಾಗಿ ನಾನು ಪ್ರಸ್ತಾಪ ಮಾಡಬೇಕಾಗಿರತಕ್ಕಂಥದ್ದು ಏನೆಂದರೆ, 25ನೇ ತಾರೀಖು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಅದರಲ್ಲಿ ಏನು ಹೇಳುತ್ತಾರೆ ಎಂದರೆ, "ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿರುವವರು ಆಡಳಿತಾತ್ಮಕ ವಿಷಯಗಳ ಸಂಬಂಧದಲ್ಲಿ ಸಭೆ ನಡೆಸಿ, ಸದರಿ ಸಭೆಗೆ ಇಲಾಖೆಯ ಸರ್ಕಾರದ ಅಧಿಕಾರಿಗಳನ್ನು ಕರೆಯುವ ಅಧಿಕಾರ ಹೊಂದಿರುವ ವಿಷಯವನ್ನು ವಿಧಾನಸಭೆ ಅಧ್ಯಕ್ಷರ... "ಈ ಸುತ್ತೋಲೆಯಲ್ಲಿ, ನಿಮ್ಮನ್ನೂ ಎಳೆದು ತಂದಿದ್ದಾರೆ, ಅನಗತ್ಯವಾಗಿ ನಿಮ್ಮ ಪ್ರಸ್ತಾಪ ಮಾಡಿದ್ದಾರೆ. "... ವಿಧಾನಸಭಾ ಅಧ್ಯಕ್ಷರ ಮತ್ತು ವಿಧಾನ ಪರಿಷತ್ತಿನ ಸಭಾಪತಿಗಳ ಸಮಾಲೋಚನೆಯೊಂದಿಗೆ ಸರ್ಕಾರದಲ್ಲಿ ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ... "ಎಂದು ಹೇಳುತ್ತಾ, ಮುಂದಕ್ಕೆ ಹೀಗೆ ಹೇಳಿದ್ದಾರೆ,"... ವಿರೋಧ ಪಕ್ಷದ ನಾಯಕರುಗಳು ಶಾಸಕಾಂಗದ

ಭಾಗವಾಗುತ್ತಾರೆ. ಮತ್ತು ಸದರಿಯವರು ಕಾರ್ಯಾಂಗದ ಭಾಗವಾಗಿರುವುದಿಲ್ಲ..." It is very clear. You have also admitted this, we are also agreeing to this. "... ಶಾಸಕಾಂಗದ ನಿಯಮಗಳನ್ವಯ ವಿಧಾನ ಮಂಡಲದ ಸದಸ್ಯರಿಗೆ ನೀಡುವ ಶಿಷ್ಟಾಚಾರಕ್ಕೆ ಮಾತ್ರ ಅರ್ಹರಾಗಿರುತ್ತಾರೆ. M.L.A.ಗಳಿಗೆ ಕೊಡತಕ್ಕಂಥ ಶಿಷ್ಟಾಚಾರಕ್ಕಷ್ಟಕ್ಕೇ ವಿರೋಧ ಪಕ್ಷದ ನಾಯಕರುಗಳು ಕೂಡ ಅರ್ಹರಾಗಿರುತ್ತಾರೆ ಎಂದು ಹೇಳಿದ್ದಾರೆ. "... ಆದ್ದರಿಂದ ವಿಧಾನ ಮಂಡಲದ ಸದಸ್ಯರಿಗೆ ಆಡಳಿತಾತ್ಮಕ ಮಾಹಿತಿಯನ್ನು ನೀಡುವ ಕುರಿತು ಈಗಾಗಲೇ ಸರ್ಕಾರ ಹೊರಡಿಸಿರುವ ಸುತ್ತೋಲೆ ಹಾಗೂ ಮಾರ್ಗ ಸೂಚಿಗಳನ್ವಯ ಮಾತ್ರ ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು ಮತ್ತು ಇತರ ಸರ್ಕಾರಿ ಅಧಿಕಾರಿಗಳು ಮಾಹಿತಿಯನ್ನು ವಿರೋಧ ಪಕ್ಷದ ನಾಯಕರಿಗೂ ಕೂಡ ನೀಡಬೇಕಾಗುವುದು. ವಿರೋಧ ಪಕ್ಷದ ನಾಯಕರಿಗೆ ಸಂಪುಟ ದರ್ಜೆಯ ಸಚಿವರ ವೇತನ, ಭತ್ಯೆ, ಮತ್ತಿತರ ಸೌಲಭ್ಯಗಳನ್ನು ನೀಡಲಾಗಿದೆಯೇ ಹೊರತು ಅವರು ಸರ್ಕಾರದ ಭಾಗವಾಗಿಲ್ಲದಿರುವುದರಿಂದ ಅವರಿಗೆ ಸಚಿವರಿಗಿರುವ ಆಡಳಿತಾತ್ಮಕ ಅಧಿಕಾರವನ್ನು ನೀಡಲಾಗಿಲ್ಲ. ಆದ್ದರಿಂದ ಸದರಿಯವರು ಸಚಿವ ಸಂಪುಟದ ಸಚಿವರಿಗೆ ನೀಡತಕ್ಕ ಶಿಷ್ಟಾಚಾರಕ್ಕೆ ಅರ್ಹರಾಗಿರುತ್ತಾರೆ ಮತ್ತು ಸರ್ಕಾರಕ್ಕೆ ಸಂಬಂಧಪಟ್ಟಂತೆ, ಬೇಕಾದ ಅಗತ್ಯ ಮಾಹಿತಿಯನ್ನು ಅವರು ಸದನದ ಮೂಲಕವಾಗಲೀ, ಸಭಾಧ್ಯಕ್ಷರ ಮೂಲಕವಾಗಲೀ, ಸಭಾಪತಿಗಳ ಮೂಲಕವಾಗಲೀ ಪಡೆಯತಕ್ಕದ್ದಾಗಿರುತ್ತದೆ. ವಿಧಾನಸಭೆ ಅಥವಾ ವಿಧಾನ ಪರಿಷತ್ತಿನ ಸದಸ್ಯರಿಗೆ ಸರ್ಕಾರದ ಅಗತ್ಯ ಮಾಹಿತಿ ಪಡೆಯುವ ರೀತಿಯೇ ಇವರಿಗೂ ಅಧಿಕಾರವಿರುತ್ತದೆ. ಅಧಿಕಾರಿಗಳ ಸಭೆ ಕರೆಯಲು ಸಚಿವರಿಗಿರುವ ಅಧಿಕಾರ ವಿರೋಧ ಪಕ್ಷದ ನಾಯಕರಿಗೆ ಇರುವುದಿಲ್ಲ. ಇದು ಯಾವುದೇ ರೀತಿಯಲ್ಲಿ ವಿರೋಧ ಪಕ್ಷದ ನಾಯಕರ ಘನತೆಗೆ ಕುಂದು ತರುವುದಿಲ್ಲ ಅಥವಾ ಅಗೌರವ ಸೂಚಕವೆಂದು ಪರಿಗಣಿಸಬಾರದು. ಈ ಅಂಶವನ್ನು ಜಿಲ್ಲಾಧಿಕಾರಿಗಳು ಸೇರಿದಂತೆ ಇತರೆ ಸರ್ಕಾರಿ ಅಧಿಕಾರಿಗಳು ಗಮನದಲ್ಲಿಡಬೇಕು." ಎಂದು ಹೇಳಿ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. The Leader of the opposition in the Lower House and the Leader of the opposition in the Upper House, ಇವು statutory positions. They are statutorily recognized under Law.

ನೀವು ನನಗೆ ಇಲ್ಲಿ ವಿರೋಧ ಪಕ್ಷದ ನಾಯಕನನ್ನಾಗಿ ಮಾಡತಕ್ಕಂಥ ಘೋಷಣೆಯನ್ನು ಮಾಡಿದಿರಿ. ನಮಗೆ ಸರ್ಕಾರ ಮಾಡುವುದಲ್ಲ. ನಮಗೆ ಕೊಡತಕ್ಕಂಥ privileges, immunities, rights ಸದನದಲ್ಲಿ, ಸದನದ ಹೊರಗಡೆ ನಮ್ಮನ್ನು ರಕ್ಷಣೆ ಮಾಡಬೇಕಾಗಿರುವಂಥದ್ದು ಇವೆಲ್ಲವೂ ಕೂಡ ವಿಧಾನ ಸಭಾಧ್ಯಕ್ಷರಾದ ತಾವು ಮಾಡುತ್ತೀರಿ. ಸರ್ಕಾರ ಏನಾದರೂ ನಮಗೆ ಸವಲತ್ತುಗಳನ್ನು ಕೊಟ್ಟಿದ್ದರೆ, ಏನೋ ಮುಲಾಜಿಗೋಸ್ಕರ ಕೊಟ್ಟಿದ್ದೇವೆ, ಅವರಿಗೆ ಈ ಸವಲತ್ತುಗಳನ್ನು ಅನುಭವಿಸಲಿಕ್ಕೆ ಸರ್ಕಾರ ಬಹಳ graceful ಆಗಿ ಕೊಟ್ಟಿದೆ ಎನ್ನತಕ್ಕಂಥ ಭಾವನೆ ಸರ್ಕಾರಕ್ಕಿರಬಾರದು. ಇದನ್ನು ಸಭಾಧ್ಯಕ್ಷರಾದ ತಾವು ಕೊಡುವುದು. ಏಕೆಂದರೆ, 1976ರಲ್ಲಿ ಕರ್ನಾಟಕ ರಾಜ್ಯದಲ್ಲಿ ವಿರೋಧ ಪಕ್ಷದ ನಾಯಕರಿಗೆ ಕೆಲವು ಸವಲತ್ತುಗಳನ್ನು ಕೊಡತಕ್ಕಂಥ ವಿಧೇಯಕ ಇಲ್ಲಿ pass ಆಯಿತು. 1976ರಲ್ಲಿ ಮಾನ್ಯ ದೇವೇಗೌಡರವರು ವಿರೋಧ ಪಕ್ಷದ ನಾಯಕರಾಗಿದ್ದು. ಶ್ರೀ ಎಸ್.ಎಂ. ಕೃಷ್ಣರವರು ಇದೇ ಸದನದಲ್ಲಿ ಆ ಕಾಲದಲ್ಲಿ ಸಂಸದೀಯ ಸಚಿವರಾಗಿ ಆ ಬಿಲ್ ಅನ್ನು move ಮಾಡಿ ವಿರೋಧ ಪಕ್ಷದ ನಾಯಕರಿಗೆ ಯಾವ ಸ್ಥಾನಮಾನವಿರಬೇಕು, ಅವರಿಗೆ ಸವಲತ್ತುಗಳು ಹೇಗಿರಬೇಕು ಎನ್ನುವುದನ್ನು ಮಾಡಿ ಅವರನ್ನೂ ಕೂಡ ಮಂತ್ರಿಗಳ ಸ್ಥಾನಮಾನಕ್ಕೆ ಗೌರವ ಕೊಡತಕ್ಕಂಥದ್ದು, ಮಂತ್ರಿಗಳಿಗಿರತಕ್ಕಂಥ ಸವಲತ್ತುಗಳಿಗೆ ಸಮಾನವಾಗಿ ಮಾಡತಕ್ಕಂಥ ಕಾಯ್ದೆಯನ್ನು ಈ ಸದನ ಮಾಡಿದೆ. ಅದನ್ನು ಈ Legislature pass ಮಾಡಿದೆ. ಇದೇ ರೀತಿ, Parliamentನಲ್ಲಿ 1977ರಲ್ಲಿ ಒಂದು Act Pass ಮಾಡಿದ್ದಾರೆ. 1976ರವರೆಗೆ ಕರ್ನಾಟಕ ರಾಜ್ಯದಲ್ಲಿ ಅನೇಕ ಜನ ವಿರೋಧ ಪಕ್ಷದ ನಾಯಕರ ಸ್ಥಾನದಲ್ಲಿ ಕುಳಿತುಕೊಂಡು ಇಲ್ಲಿ ಶಾಸನ ಸಭೆಯಲ್ಲಿ ಕೆಲಸ ಮಾಡಿದರೂ ಕೂಡ ಅವರಿಗೆ Minister ಗಳಿಗೆ ಕೊಡತಕ್ಕಂಥ ಸ್ಥಾನಮಾನಗಳು, ಸವಲತ್ತುಗಳು ಸಿಕ್ಕಿರಲಿಲ್ಲ. ಆದರೂ ಕೂಡ ಬಹಳ ಜನ ವಿರೋಧ ಪಕ್ಷದ ನಾಯಕರುಗಳು ಈ ಸದನದಲ್ಲಿ ಬಹಳ ಪರಿಣಾಮ ಕಾರಿಯಾಗಿ, ಬಹಳ ಜವಾಬ್ದಾರಿಯಿಂದ ಕೆಲಸ ಮಾಡಿದ್ದಾರೆ. ರಾಜ್ಯದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ರೀತಿಯಲ್ಲಿ ಅನೇಕ ಸಮಸ್ಯೆಗಳನ್ನು ಇಲ್ಲಿ ಚರ್ಚೆ ಮಾಡಿ ಅವುಗಳಿಗೆ ಪರಿಹಾರ ಕೊಡಿಸಲಿಕ್ಕೆ ಸರ್ಕಾರದ ಗಮನ ಸೆಳೆದು, ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟು, ಪ್ರಾಮಾಣಿಕ ಪ್ರಯತ್ನಗಳನ್ನು ಯಾವುದೇ ಸವಲತ್ತುಗಳಿಲ್ಲದಿದ್ದರೂ ಅವರು ಮಾಡಿದ್ದಾರೆ. ನನ್ನ ಪ್ರಕಾರ, ವಿರೋಧ ಪಕ್ಷದ ನಾಯಕರ ಹಕ್ಕುಗಳನ್ನು ಚ್ಯುತಿ ಮಾಡತಕ್ಕಂಥ, ಅವರ ಘನತೆಗೆ ಕುಂದು ಬರತಕ್ಕಂಥ, ಅವರಿಗಿರುವ ಹಕ್ಕನ್ನು ಮೊಟಕುಗೊಳಿಸತಕ್ಕಂಥ ಅಧಿಕಾರ

ಸರ್ಕಾರಕ್ಕಿಲ್ಲ. The Government has no powers. ನಮ್ಮ ಹಕ್ಕುಗಳಲ್ಲಿ interfere ಆಗಿ ಅದನ್ನು ಮೊಟಕುಗೊಳಿಸತಕ್ಕಂಥ ಅಧಿಕಾರ ಸರ್ಕಾರಕ್ಕಿಲ್ಲ. ಆದ್ದರಿಂದ, ಈ ಸುತ್ತೋಲೆ ಕಾನೂನುಬಾಹಿರವಾದುದು, ನಮ್ಮ ನಿಯಮಾವಳಿಗಳಿಗೆ ಬಾಹಿರವಾಗಿರತಕ್ಕಂಥದ್ದು, ನಾವೇ ಮಾಡಿಕೊಂಡಿರುವ ಕಾನೂನಿಗೆ ಇದು ವಿರುದ್ಧವಾಗಿರತಕ್ಕಂಥದ್ದು, ಸಂವಿಧಾನಕ್ಕೂ ಕೂಡ ವಿರುದ್ಧವಾಗಿರುವುದು ಎನ್ನುವುದು ನಿಮಗೆ ನನ್ನ ಮೊದಲನೆಯ ಮನವಿಯಾಗಿದೆ. ಬಹಳ ವರ್ಷಗಳಿಂದ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರ ಸಂಸದೀಯ ಪ್ರಜಾತಂತ್ರವನ್ನು ನಾವು ಒಪ್ಪಿಕೊಂಡು ಬಂದಿದ್ದೇವೆ. ನಮ್ಮ ಅನೇಕ ಪದ್ಧತಿಗಳ ಮೂಲಕ, ನಮ್ಮ ನಿರ್ಧಾರಗಳ ಮೂಲಕ, ನಮ್ಮ ನಡವಳಿಕೆಗಳ ಮೂಲಕ, ನಾವು ಮೌಲ್ಯಗಳನ್ನು ಪ್ರಸ್ತುತಪಡಿಸುವುದರ ಮೂಲಕ ಅದು ಇನ್ನಷ್ಟು ಸಂಪದ್ಭರಿತವಾಗಿ ಮಾಡಲಿಕ್ಕೆ ಪ್ರಯತ್ನಗಳನ್ನು ಮಾಡಿಕೊಂಡು ಬಂದಿದ್ದೇವೆ. ಒಳ್ಳೆಯ ಸಂಪ್ರದಾಯಗಳನ್ನು ಇಲ್ಲಿ ನೆಲೆಸಲಿಕ್ಕೆ ಕಾರಣ ಮಾಡುವುದರ ಮೂಲಕ ಎಲ್ಲ ಪ್ರಯತ್ನಗಳನ್ನೂ ಕೂಡ ಮಾಡಿಕೊಂಡು ಬಂದಿದ್ದೇವೆ. ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಜನರು ಅವರಿಗೂ ಓಟ್ ಕೊಟ್ಟು ಕಳುಹಿಸಿರುತ್ತಾರೆ, ನಮಗೂ ಓಟ್ ಕೊಟ್ಟು ಕಳುಹಿಸಿರುತ್ತಾರೆ. ಅವರು ಓಟ್ ಕೊಟ್ಟಿರುವುದರಿಂದಲೇ ನಾವಿಲ್ಲಿ ಬಂದು ಕುಳಿತಿರುವುದು. ಅವರಿಗೆ ನಮಗಿಂತ number ಜಾಸ್ತಿ ಇದೆ ಎಂದು ಆ ಕಡೆ ಕುಳಿತುಕೊಳ್ಳುತ್ತಾರೆ, ನಮಗೆ ಅವರಿಗಿಂತ number ಕಡಿಮೆ ಇದೆ ಎಂದು ನಾವಿಲ್ಲಿ ಕುಳಿತುಕೊಂಡಿದ್ದೇವೆ. That is the only difference. ಆದರೆ, ಅದು ಅವರಿಗೂ ಶಾಶ್ವತವಲ್ಲ, ಇದು ನಮಗೂ ಶಾಶ್ವತವಲ್ಲ. ಅವರಿಗೆ ಈಗ ಅಧಿಕಾರವಿದೆ, 113 ಜನ ಇದ್ದಾರೆ, 110 ಜನ ಗೆದ್ದಿದ್ದೇವೆ, ಅದಕ್ಕೋಸ್ಕರ number-wise we are more in number, ಆದ್ದರಿಂದ, we can do and undo anything, ನಾವು ಮಾಡಿದ್ದೇ ಕಾನೂನು, ನಾವು ಚಲಾಯಿಸಿದ್ದೇ ಅಧಿಕಾರ, ನಾವು ನಡೆದುಕೊಂಡಿದ್ದೇ ರೀತಿ ಎಂದು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಮಾಡುವುದಕ್ಕೆ ಬರುವುದಿಲ್ಲ. ನೆಹರೂರವರು ಸಂಸದೀಯ ವ್ಯವಸ್ಥೆಯ ಬಗ್ಗೆ ಅವರ ಅಭಿಪ್ರಾಯ ಹೇಳಿದ್ದಾರೆ, ಅದೇನೆಂದರೆ "The Parliamentary system of work requires not only stout opposition, not only forcible expression of opinions and views, but an essential basis of co-operation between the opposition and the Government-not in regard to any particular matter but the whole basis of approach is, after all a co-operative basis to carry the work of Parliament forward and in so

far as we succeed in doing that, we succeed in laying the foundations of Parliamentary work firmly". ಇದು ನೆಹರೂರವು Parliamentary system of Counseling ಬಗ್ಗೆ ಹೇಳಿರುವ ಮಾತುಗಳು. The great parliamentarian the country has seen ಆಮೇಲೆ, ಶ್ರೀ ಜಿ.ವಿ. ಮಾವಳಂಕರ್‌ರವರು ಲೋಕಸಭೆಯ ಮೊದಲನೇ Speaker ಆಗಿದ್ದರು, ಅವರು speaker ಆಗಿ, Parliament ಅಧ್ಯಕ್ಷರಾಗಿ ದೊಡ್ಡ ಹೆಸರನ್ನು ಮಾಡಿದಂಥವರು. ಇವತ್ತೂ ಕೂಡ ನಾವೆಲ್ಲ ಅವರನ್ನು ನೆನೆದುಕೊಳ್ಳುತ್ತೇವೆ, ಅವರ ತೀರ್ಪುಗಳನ್ನು, ಅವರು ಹಾಕಿಕೊಟ್ಟ ಮಾರ್ಗದರ್ಶನಗಳನ್ನು ಇವತ್ತಿಗೂ ಕೂಡ ನಾವು ಇಲ್ಲಿ ಬಳಸುತ್ತೇವೆ, Parliament ನಲ್ಲಿಯೂ ಕೂಡ ಬಳಸುತ್ತಾರೆ. ಅವರು ಏನು ಹೇಳುತ್ತಾರೆ ಅಂದರೆ: "For real democracy, one has to look not merely in the provisions of the Constitution, or the rules and regulations made for the conduct of business in the Legislatures, but one has to foster a real democratic spirit in those who form the Legislature. If this fundamental is borne in mind, it will be clear that though questions would be decided by majorities, the Parliamentary Government will not be possible if it is reduced to a mere counting of heads and hands." This is very important. "The parliamentary Government will not be possible if it is reduced to a mere counting of heads and hands. If we are to go merely by majority by fostering the seats of fascism, violence and revolt, if on the other hand, we could help to foster a spirit of tolerance, the spirit of freedom of discussion and a spirit of understanding we shall be fostering the spirit of democracy." ಇದು ಶ್ರೀ ಜಿ.ವಿ. ಮಾವಳಂಕರ್ ಹೇಳಿರುವ ಮಾತು. Kaul and Shakdhar ರವರ Practice and Procedure in the Parliament ಇದೆಯಲ್ಲಾ ಅದರ ಮುನ್ನುಡಿಯಲ್ಲಿ ಬಹಳ ಸ್ಪಷ್ಟವಾಗಿ ಇದನ್ನು ಹೇಳಿದ್ದಾರೆ. This is very clear. ನಮಗೆ majority ಇದೆಯೆಂದು ಪ್ರಜಾಪ್ರಭುತ್ವದಲ್ಲಿ ನಾವೇನು ಬೇಕಾದರೂ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎನ್ನುವುದನ್ನು ಅವರು ಹೇಳಿದ್ದಾರೆ. ನಮಗೆ head count ನಲ್ಲಿ, ಕೈ ಎತ್ತುವುದರ ಮೂಲಕ ತಲೆ ಎಣಿಸುವ ಮೂಲಕ ಏನು ಬೇಕಾದರೂ ಮಾಡಬಹುದು ಎಂದರೆ ಅದೇ ಪ್ರಜಾಪ್ರಭುತ್ವವಲ್ಲ. ಅದರ ಮೇಲೆಯೇ ಹೋದರೆ, ನಾವು fascism ಕಡೆಗೆ ಹೋಗಬೇಕಾದ ಪರಿಸ್ಥಿತಿಗೆ ಬಂದುಬಿಟ್ಟಿದೆ. ಅದಕ್ಕೋಸ್ಕರ Spirit of Democracy ತತ್ವದ ಕೆಳಗಡೆ ಪ್ರತಿಯೊಬ್ಬರೂ ಕೆಲಸ ಮಾಡಬೇಕೆನ್ನುವುದನ್ನು

ಬಹಳ ಸ್ಪಷ್ಟವಾಗಿ ಅವರು ಹೇಳಿರುವುದನ್ನು ನಾವೆಲ್ಲರೂ, ಅಧಿಕಾರ ದಲ್ಲಿರುವವರು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅಧಿಕಾರ ಶಾಶ್ವತವಾಗಿ ಇರುವುದಿಲ್ಲ. ಇದು ಇಡೀ ಸದನದ ಸದಸ್ಯರಿಗೆ ಯಾವುದೇ ಸರ್ಕಾರ ಬರಲಿ ಯಾರೇ opposition ನಲ್ಲಿರಲಿ, ಇದು ಎಲ್ಲರಿಗೂ ಕೂಡ ಅನ್ವಯವಾಗುವ ವಿಚಾರವಾಗಿದೆ. ಮಾನ್ಯ ಸಭಾಧ್ಯಕ್ಷರಾದ ತಾವು ವಿರೋಧ ಪಕ್ಷದ ನಾಯಕರಾಗಿ 5 ವರ್ಷಗಳ ಕಾಲ ಕೆಲಸ ಮಾಡಿದ್ದೀರಿ, ಮಂತ್ರಿಗಳಾಗಿಯೂ ಕೆಲಸ ಮಾಡಿದ್ದೀರಿ. ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಈಗ ಮುಖ್ಯಮಂತ್ರಿಯಾಗಿದ್ದಾರೆ. ಬಂಗಾರಪ್ಪನವರು ಇಲ್ಲಿ Leader of the Opposition ಆಗಿದ್ದಾಗ ಒಂದು ಸಲ ಚರ್ಚೆಯಾಗುತ್ತದೆ. ಆಗ ಯಡಿಯೂರಪ್ಪನವರು ಸಹ ಆ debate ನಲ್ಲಿ ಭಾಗವಹಿಸಿ ಮಾತನಾಡಿದ್ದಾರೆ.

ಅಧ್ಯಕ್ಷರು: ಆ ಚರ್ಚೆಯನ್ನು ನಾನು ನೋಡಿದ್ದೇವೆ. ಅದು limited ವಿಷಯಕ್ಕೆ ಸಂಬಂಧಿಸಿದಂತೆ ಇದೆ.

ಶ್ರೀ ಸಿದ್ದರಾಮಯ್ಯ: ಇದನ್ನು ಉದಾಹರಣೆಗೋಸ್ಕರ mention ಮಾಡುತ್ತೇನೆ. I will not go into the detail of it.

ಅಧ್ಯಕ್ಷರು: ಅದರಲ್ಲಿ entire ಚರ್ಚೆ ಆಗಲಿಲ್ಲ. ಅದರಲ್ಲಿ limited purpose ಗೋಸ್ಕರ ಚರ್ಚೆಯಾಯಿತು. ಆಗ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು.

ಶ್ರೀ ಸಿದ್ದರಾಮಯ್ಯ: ಅದನ್ನೇ ಹೇಳುವುದಕ್ಕೆ ಬರುತ್ತಿದ್ದೆ. ನೀವು ಓದಿಕೊಂಡು ಬಂದಿರುವುದರಿಂದ ನಮಗೆ ಅನುಕೂಲವಾಯಿತು. ಆಗ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು. ಬಂಗಾರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದರು. ಯಡಿಯೂರಪ್ಪನವರೂ ವಿರೋಧ ಪಕ್ಷದಲ್ಲಿದ್ದರು. ಆಗ ಒಂದು ಸಲ P.S. ಬಗ್ಗೆ ಚರ್ಚೆಯಾಗಿದೆ. ನಾವಿಲ್ಲಿ ನಮ್ಮ ಸವಲತ್ತುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಬಂದಿಲ್ಲ. ನಮಗೆ ಸವಲತ್ತು ಕೊಡಿ, ಅದು ಕೊಡಿ, ಇದು ಕೊಡಿ, ಹೆಚ್ಚಿಗೆ ನಮಗೆ ಸವಲತ್ತುಗಳನ್ನು ಕೊಡಿ ಎಂದು ಕೇಳುವುದಕ್ಕೆ ನಾನು ಇಲ್ಲಿ ನಿಂತಿಲ್ಲ. They are not very important. ಕಾನೂನು ಪ್ರಕಾರ ಕೆಲವು ಸವಲತ್ತುಗಳನ್ನು ನಮಗೆ ಕೊಟ್ಟಿದ್ದಾರೆ, ಅದನ್ನು ನೀವು ನಮಗೆ ಕಾನೂನು ಪ್ರಕಾರವಾಗಿ ಕೊಡುತ್ತೀರಿ. ಅದನ್ನು ನೀವು ಕೊಡುವುದು. 1976 ರಿಂದ ಈಚೆಗೆ ವಿರೋಧ ಪಕ್ಷದ ನಾಯಕರಿಗೆ ಏನು

ಸವಲತ್ತು ಕೊಡಬೇಕೆನ್ನುವುದಿದೆ. ಅದನ್ನು ನೀವು ಕೊಡುತ್ತಾ ಬಂದಿದ್ದೀರಿ. ಆದ್ದರಿಂದ, I am part of the Legislature. You have recognized me as Leader of the Opposition. ಆವತ್ತಿನಿಂದ ನಾವು statutory recognized. ನಮಗೆ ಶಾಸನಬದ್ಧವಾದ ಮನ್ನಣೆ ಸಿಕ್ಕಿದೆ. ಆದರೆ, ಅವರು ಇಲ್ಲಿ ಇವರಿಗೆ ಶಾಸನಬದ್ಧವಾದ ಮನ್ನಣೆ ಇಲ್ಲವೆಂದು ಹೇಳಿದ್ದಾರೆ. It is totally wrong. Kaul and Shakdharನ 5th Editionನ page 142ನಲ್ಲಿ Leader of the Opposition ಎನ್ನುವುದರ ಬಗ್ಗೆ ಬರೆದಿದ್ದಾರೆ. "In a system of Government, there will always be struggle for power. Those who are not in the office will constantly try to oust those who form the Government for the time being. such struggle can take place in various ways. For forcible seizure of power, revolution or elect the process. The parliamentary system of Government makes it obligatory for the opposing forces to struggle for power on the floor of the House by recognized parliamentary methods. One of the biggest parliamentary achievements of the present century is that the role of the opposition has been formally recognized and is given a due place in the parliamentary system. The Leader of the Opposition is thus an important person." ಅಧ್ಯಕ್ಷರೆ, ಇದನ್ನು ನೀವು ಮಾಡಿರುವುದು. ಅವರಲ್ಲ. He is a shadow Prime Minister. Because, ನಮ್ಮ ದೇಶದ ಸಂಸತ್ ಇರಬಹುದು, ರಾಜ್ಯಗಳ ಶಾಸನ ಸಭೆಗಳಿರಬಹುದು, ಎಲ್ಲವೂ ಕೂಡ ನಮ್ಮ ದೇಶದ ಸಂಸತ್. ಬ್ರಿಟಿಷ್ ಸಂಸತ್ತಿನ Rules and Regulations, ಸಂಪ್ರದಾಯಗಳು, ಪದ್ಧತಿಗಳು, ಅಲ್ಲಿ ಏನೇನು ಮಾಡಿಕೊಂಡು ಬಂದಿದ್ದಾರೆ ಅದೆಲ್ಲವನ್ನೂ ಹೆಚ್ಚು ಕಡಿಮೆ ನಾವು ಇಲ್ಲಿ ಅಳವಡಿಸಿಕೊಂಡಿದ್ದೇವೆ. ಅನೇಕ ಸಾರಿ ವಿವಾದಗಳು ಬಂದಾಗ ಬ್ರಿಟಿಷ್ ಸಂಸತ್‌ನಲ್ಲಿ ನಡೆದಿರತಕ್ಕಂಥ ಘಟನೆಗಳು ಅಲ್ಲಿರುವ ತೀರ್ಮಾನಗಳನ್ನು ನಾವು ಉದಾಹರಣೆಗಳನ್ನಾಗಿ ಕೊಡುವುದನ್ನು ನೋಡಿಕೊಂಡು ಬಂದಿದ್ದೇವೆ. ಪಾರ್ಲಿಮೆಂಟ್‌ನಲ್ಲಿ ಕೂಡ ಇದನ್ನೇ ಯಥೇಚ್ಛವಾಗಿ ಮಾಡುತ್ತಾರೆ. ಇಲ್ಲಿಯೂ ಕೂಡ ಮಾಡುತ್ತೇವೆ. ಪಾರ್ಲಿಮೆಂಟ್‌ನಲ್ಲಿ ಏನು ಅನುಸರಿಸುತ್ತಾರೆ ಅದನ್ನೇ ನಾವು ಇಲ್ಲಿ ರಾಜ್ಯದ ಶಾಸನಸಭೆಗಳಲ್ಲೂ ಮಾಡಿಕೊಂಡು ಬಂದಿದ್ದೇವೆ. "He is a shadow Prime

Minister and he has to be prepared to take up the responsibility of forming a Government if his party secures a majority at an election or if the Government resigns or is defeated." Why he is very important ಎನ್ನುವುದಕ್ಕೆ ಅವರು ಇದರಲ್ಲಿ ಹೇಳುತ್ತಾರೆ. Why the Leader of the Opposition is very important? ಅದಕ್ಕೋಸ್ಕರವೇ Leader of the Opposition ಬಗ್ಗೆ ಪಾರ್ಲಿಮೆಂಟ್‌ನಲ್ಲಿ ನಾವು ಏನೆಂದು ಮಾಡಿಕೊಂಡು ಬಂದಿದ್ದೇವೆಂದರೆ, "He is a shadow Prime Minister. The team of the Leader of the Opposition is a shadow. Government Stateನಲ್ಲಿ Leader of the Opposition is a shadow Chief Minister. Our team is a shadow Government. In case, this Government resigns for any reason,.. I don't wish it. I must be ready to take over it. That is the practice and procedure followed in the Parliament or in England. ಈ ತರಹ ಪರಿಸ್ಥಿತಿ ಇರುವಾಗ ಅನ್ನು, it is not Siddaramaiah or Mr. Yeddyurappa. He is the Leader of the House. I am the leader of the Opposition, for the entire opposition. Though we are in minority, we have got every right in the Parliamentary system of Government, to find fault with the Government and to give suggestion to the Government. The Leader of the Opposition is the watchdog in the Legislature. The Leader of the Opposition is always vigilant. These are the things. Leader of the Opposition ಏನೇನು ಕರ್ತವ್ಯಗಳು ಮಾಡಬೇಕೆಂದು ಇದರಲ್ಲಿ ನಾವು ಬಹಳ ಸ್ಪಷ್ಟವಾಗಿ ನೋಡುತ್ತಿದ್ದೇವೆ. ಇದು ಎಲ್ಲಿಯವರೆಗೆ ಹೋಗುತ್ತದೆ ಎಂದರೆ, "If the Leader of the Opposition lets the Prime Minister govern, he in turn is permitted to oppose. On certain matters such as foreign relations, defense policy, the Prime Minister may, t times consult the Leader of the Opposition before making a commitment." This is also very important. "And in times of grave national crisis, the Leader of the Opposition usually underline the unity of the nation or a particular issue by openly headed by himself with the Government. The Leader of the Opposition is officially the

spokesman of the minority or the minorities and to that end he jealously watches any encroachment on their rights." ಅಂದರೆ, all the members belonging to opposition. "It is, though not so difficult as that of a Prime Minister, is of sufficiently great public importance because he has to maintain indeed a shadow cabinet, ready to take over administration. In performing his duties and obligations the Leader of the Opposition has to take into account not only what he is today but what he hopes to be tomorrow". British Prime Minister ರವರದು ಒಂದು observationಇದೆ. ಅವರ ಹೆಸರು Harold Macmillan."

"There is, I suppose, no position more difficult and in some ways more unrewarding than that of a Leader of an Opposition to criticize, to find fault, and at the same time, of course, to develop his own proposals and policies without the power to implement them. It is in a sense unrewarding, because any man who is conscious of administrative capacity and the desire of operate his own plans must feel all the time a sense of frustration." ಇದೆನ್ನೆಲ್ಲಾ ನಾನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕೆಂದು Kaul & Shakdar ಪುಸ್ತಕದಲ್ಲಿ, Leader of the Opposition ಬಗ್ಗೆ ಏನು ಹೇಳಿದ್ದಾರೆ ಅದನ್ನು ನಾನು ನಿಮ್ಮ ಗಮನಕ್ಕೆ ತಂದಿದ್ದೇನೆ. ಇಲ್ಲಿ ಎಲ್ಲಾ ಡಿಮ್ಯಾಂಡ್ಸ್ ಮಂಡಿಸಿದ್ದಾರೆ. ಸುಮಾರು ಐವತ್ತೆಂಟು ಸಾವಿರ ಕೋಟಿ ರೂಪಾಯಿ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಖರ್ಚು ಮಾಡುವುದಕ್ಕೆ ಒಪ್ಪಿಗೆ ಕೊಡಬೇಕೆಂದು ಸದನದಲ್ಲಿ ಮಂಡಿಸಿದ್ದಾರೆ. ಪ್ರತಿ ಇಲಾಖೆಗೂ ಬೇರೆ ಬೇರೆ ಕಾರ್ಯಕ್ರಮಗಳು ಇರುತ್ತವೆ. ಆ ಕಾರ್ಯಕ್ರಮಗಳಿಗೆ ನಾವು ಇಂತಿಷ್ಟು ಹಣ ಖರ್ಚು ಮಾಡಬೇಕೆಂದು ಇಲ್ಲಿ ಒಪ್ಪಿಗೆ ಕೊಡುತ್ತೇವೆ. ಒಪ್ಪಿಗೆ ಕೊಟ್ಟ ಮೇಲೆ, it is not only the responsibility of the Government, ಅವರೊಬ್ಬರದೇ ಜವಾಬ್ದಾರಿ ಅಲ್ಲ, it is the responsibility of the members of the opposition. ಏಕೆಂದರೆ, ನಾವು ಎಲ್ಲರೂ ಕೂಡ ಒಪ್ಪಿಗೆ ಕೊಟ್ಟಿರುತ್ತೇವೆ. ಆ ಹಣ ಸುಖೀ ರಾಜ್ಯ ನಿರ್ಮಾಣ ಮಾಡುವುದಕ್ಕೆ, ಇಲ್ಲಿ ಏನು ಬಜೆಟ್‌ನಲ್ಲಿ ಹೇಳಿದ್ದೇವೆ, inclusive growth, justice to all ಎಂದು, ಅದು ಎಲ್ಲರಿಗೂ

ಸಿಗಬೇಕು, ಯಾರು ಫಲಾನುಭವಿಗಳು ಇದ್ದಾರೆ, ಹಣ ನ್ಯಾಯವಾಗಿ ತಲುಪಿದೆಯೋ, programme implement ಆಗಿದೆಯೋ, ಅದು ದುರುಪಯೋಗ ಆಗದೇ ಎಲ್ಲರಿಗೂ ತಲುಪಿದೆಯೇ ಎಂದು ನೋಡಿಕೊಳ್ಳತಕ್ಕಂಥ ಜವಾಬ್ದಾರಿ. Because they are in the Government, Treasure Bench. But at the same time, it is the responsibility of the members of the opposition also. ಜನಗಳಿಗೆ ತಲುಪಿದೆಯೋ ಇಲ್ಲವೋ ಎಂದು ನಾವು ನೋಡಿಕೊಳ್ಳಬೇಕು. ಆ ದುಡ್ಡು ಸದುಪಯೋಗ ಆಗಿದೆಯೋ ದುರುಪಯೋಗ ಅಗಿದೆಯೋ ಈ ಕೌಲ್ ಅಂಡ್ ಶಕ್ದರ್ ನಲ್ಲಿ ಲಿಜಿಸ್ಲೇಚರ್ ಮತ್ತು ಆಫೀಸರ್ಸ್ ಸಂಬಂಧಗಳು ಏನು ಎಂಬುದನ್ನು ಕೂಡ ಹೇಳುತ್ತಾರೆ. ಲೆಜಿಸ್ಲೇಚರ್ ಮತ್ತೆ ಸಿವಿಲ್ ಸರ್ವೆಂಟ್ಸ್ ಇವರ ಸಂಬಂಧಗಳು ಹೇಗೆ ಎಂದು ಹೇಳುತ್ತಾರೆ. ನಾವು ಇಲ್ಲಿ ಯಾವುದೇ ಇಲಾಖೆಗೆ ಹಣ ಪಾಸ್ ಮಾಡಿದ ಮೇಲೆ, say for example, Rural Development. ನಾವು ಇಲ್ಲಿ ಎಷ್ಟು ಹಣ ಖರ್ಚು ಮಾಡುತ್ತೇವೆ, the Head of the Department of the Rural Development or the Secretary, will be the custodian of the entire money. He is answerable to this legislature. The concerned Minister is answerable in turn for every pie we are going to pass. ಮತ್ತೆ ಇದನ್ನು ನೋಡಿಕೊಳ್ಳಬೇಕಾದರೆ, ಇದನ್ನು ನಾವು ಎಷ್ಟು ಜವಾಬ್ದಾರಿಯಿಂದ ನಿರ್ವಹಿಸಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ವಿರೋಧ ಪಕ್ಷದ ನಾಯಕರಿಗೆ, ವಿರೋಧ ಪಕ್ಷದವರಿಗೆ ಕೆಲವು work, privileges, immunities, freedom, rights, ಇವೆಲ್ಲವೂ ಇರಬೇಕೆನ್ನುವ ಕಾರಣಕ್ಕಾಗಿಯೇ ನೀವು ಇವೆಲ್ಲಾ ನಮಗೆ ಮಾನ್ಯ ಮಾಡಿ recognize ಮಾಡಿರತಕ್ಕಂಥದ್ದು. It is not new. ಇದು ನಾನು ಬಂದ ಮೇಲೆ ಮಾಡಬೇಕೆಂದಲ್ಲ. ಸ್ವತಂತ್ರ ಭಾರತದಲ್ಲಿ 60 ವರ್ಷಗಳಿಂದ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. It is not the first time. ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಇದನ್ನು ಮಾಡಿಕೊಂಡು ಬಂದಿದ್ದಾರೆ. ಸಂಬಂಧಪಟ್ಟಂತ ಶಾಸನ ಸಭೆಯ ಅಧ್ಯಕ್ಷರು, ಅವರಿಗೆ ರಕ್ಷಣೆ ಮಾಡಿಕೊಂಡು ಅವರ ಹಕ್ಕುಗಳು ಮೊಟಕಾಗದಂತೆ, ಅವರಿಗೆ breach of privilege ಆಗದ ರೀತಿಯಲ್ಲಿ ನೋಡಿಕೊಂಡು ಬಂದಿರತಕ್ಕಂಥದ್ದು ನಮ್ಮ ಈ ಮನೆಯಲ್ಲಿ ಇತಿಹಾಸವಿದೆ. ದೊಡ್ಡ ಸಂಪ್ರದಾಯಗಳು, ಪದ್ಧತಿಗಳಿವೆ. ನಾವು ಅವುಗಳನ್ನು ಎಲ್ಲಾ ರೀತಿಯಿಂದಲೂ ಗೌರವಿಸಿಕೊಂಡು ನಾವು ಮುಂದೆನೂ ಆ ಗೌರವಕ್ಕೆ, ಆ

ಸಂಪ್ರದಾಯಕ್ಕೆ ಚ್ಯುತಿ ಆಗದ ರೀತಿಯಲ್ಲಿ ಸತ್ಸಂಪ್ರದಾಯಗಳನ್ನು ನಾವು ಇಲ್ಲಿ establish ಮಾಡತಕ್ಕಂಥ, ಉಳಿಸತಕ್ಕಂಥ ಕೆಲಸ ಮಾಡಿಕೊಂಡು ಹೋಗಬೇಕಾಗುತ್ತದೆ. ಸತ್ಸಂಪ್ರದಾಯಗಳು, ಯಾವುದೇ ಸತ್ಸಂಪ್ರದಾಯಗಳಿಗೆ ಅಗೌರವ ಆದರೆ ನನಗೆ ಅಗೌರವ ಅಲ್ಲ. ಆ ಹಕ್ಕುಗಳಿಗೆ ಮೊಟಕಾದರೆ ಅಗೌರವ ನಮಗಲ್ಲ, ಅದು ಯಾವುದಕ್ಕೆ ಆಗುತ್ತದೆ ಎಂದರೆ, ಈ institution ಇದೆಯಲ್ಲ Leader of the Opposition ಎನ್ನತಕ್ಕಂಥ institution ಗೆ ಅಗೌರವ ಆದ ಹಾಗೆ ಆಗುತ್ತದೆ. ಅದಕ್ಕೆ ಅವಮಾನ ಮಾಡಿದ ಹಾಗೆ ಆಗುತ್ತದೆ. ಆ institution ಗೆ ಅಗೌರವ ಮಾಡಿದ ಹಾಗೆ ಆಗುತ್ತದೆ. Degradation of the institution ಆಗಬಾರದು, ನಾವು ಅದಕ್ಕೆ ಅವಕಾಶ ಮಾಡಿಕೊಡಕೂಡದು.

ನಾವು ಇಲ್ಲಿ ಇರುತ್ತೇವೆಯೋ ಅಥವಾ ಇನ್ನೊಬ್ಬರು ಬರುತ್ತಾರೆಯೋ ಅಥವಾ ಮುಂದೆ ಏನೇನು ಆಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅಂದರೆ, ಈ ಕಾಲಗರ್ಭದಲ್ಲಿ ಮುಂದೆ ಏನೇನು ಆಗುತ್ತದೆಂದು ಹೇಳುವುದಕ್ಕೆ ಬರುವುದಿಲ್ಲ. ಹಿಂದೆ ಏನಾಗಿದೆ ಎಂದು ನೋಡಿಕೊಂಡು ಮುಂದೆ ಹೊಸ ಸತ್ಸಂಪ್ರದಾಯಗಳನ್ನು ನಿರ್ಮಾಣ ಮಾಡತಕ್ಕಂಥ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮಾಡುತ್ತಾ ಹೋಗಬೇಕಾಗಿರುವುದು ಆ ಕಡೆ ಮತ್ತು ಈ ಕಡೆ ಇರುವ ಸದಸ್ಯರೆಲ್ಲರ ಮೇಲೆ ಇರತಕ್ಕಂಥ ಜವಾಬ್ದಾರಿ. Head of the Department is the Custodian of the money that we are going to approve. ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು is going to be the Custodian. He is answerable to the people's representative. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಈ ಮನೆಯ ಸದಸ್ಯರುಗಳಿಗೆ ಅವರವರ ಕ್ಷೇತ್ರದಲ್ಲಿ ರಿವ್ಯೂ ಮಾಡುವ ಅಧಿಕಾರವನ್ನು ಕೊಟ್ಟಿದ್ದೇವೆ. ಅಂದರೆ, ಮಿನಿಸ್ಟರ್‌ಗಳಿಗೆ ಅಷ್ಟೇ ಅಲ್ಲದೆ ಶಾಸಕರು ಸಹ ರಿವ್ಯೂ ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದೇವೆ. ಪ್ರತಿ ಮೂರು ತಿಂಗಳಿಗೊಮ್ಮೆ ಕೆಡಿಪಿ ಸಭೆಯಲ್ಲಿ ಶಾಸಕರು ಭಾಗವಹಿಸಿ ಚರ್ಚೆ ಮಾಡುತ್ತಾರೆ. ಮತ್ತೆ ಇಲ್ಲಿನ ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ರಿವ್ಯೂ ಮಾಡತಕ್ಕಂಥ ಅಧಿಕಾರ ಲೋಕಸಭಾ ಸದಸ್ಯರಿಗೂ ಸಹ ಇದೆ. ಬಹುಶಃ ಇವರು ವಿರೋಧ ಪಕ್ಷದಲ್ಲಿದ್ದಾಗ ಮಾಡಿದ್ದಾರೆ ಮತ್ತೆ ಅನೇಕ ಜನ ಶಾಸಕರು ಈಗಲೂ ಕೂಡ ಮಾಡುತ್ತಾರೆ. ಆಡಳಿತಾತ್ಮಕ ವಿಷಯಗಳಿಗೆ ಇವರು interfere ಆಗಬಾರದೆಂದು ನೋಟಿಸ್‌ನ್ನು ಕೊಟ್ಟಿದ್ದಾರೆ. ಅಂದರೆ, ಮಂತ್ರಿಗಳು ಮಾತ್ರ ಮೀಟಿಂಗ್ ಮಾಡಬೇಕಾ? ಮತ್ತೆ ನಮಗೆ ಇರತಕ್ಕಂಥ privileges ಕೇವಲ Leader of the Opposition ಅಷ್ಟೆ. ಶಾಸಕರು ಅವರ ಕ್ಷೇತ್ರಕ್ಕೆ

ಸಂಬಂಧಪಟ್ಟಂತೆ ಕೆ.ಡಿ.ಪಿ. ಸಭೆ ಮಾಡಿ ಅಲ್ಲಿಗೆ ಅನುಷ್ಠಾನಾಧಿಕಾರಿಗಳನ್ನು ಕರೆದು ಏನೇನು progress ಆಗಿದೆ ಅಥವಾ ಆಗಿಲ್ಲ ಎಂಬುದರ ಬಗ್ಗೆ ಮತ್ತು ಏಕೆ ಪ್ರೋಗ್ರೆಸ್ ಆಗಿಲ್ಲ ಎಂಬ ಬಗ್ಗೆ ಕೂಡ ಕೇಳುತ್ತಾರೆ. ಅಂದರೆ ಇವರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. All the Taluk level officers, they have to attend the KDP meeting in that review meeting. ಹಾಗೆಯೇ ಜಿಲ್ಲಾ ಮಟ್ಟದಲ್ಲಿಯೂ ಕೂಡ ಕೆಡಿಪಿ ಮೀಟಿಂಗ್‌ಗಳು ನಡೆಯುತ್ತವೆ. ಇಲ್ಲಿ ಜಿಲ್ಲಾ ಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. ಆ ಸಭೆಯಲ್ಲಿ ಈ ಮನೆಯ ಶಾಸಕರು, ಲೋಕಸಭಾಸದಸ್ಯರು, ಎಂ.ಎಲ್.ಸಿ.ಗಳು ಸಹ ಇರುತ್ತಾರೆ. ಈ ಸಭೆಯಲ್ಲಿಯೂ ಕೂಡ ಅಧಿಕಾರಿಗಳನ್ನು ಪ್ರಶ್ನೆ ಮಾಡುತ್ತೇವೆ. ಕಾರ್ಯಕ್ರಮಗಳನ್ನು ಸರಿಯಾಗಿ ಮಾಡಿದ್ದಾರೆಯೋ ಅಥವಾ ಇಲ್ಲವೋ ಎಂಬುದನ್ನು ಆ ಸಭೆಯಲ್ಲಿ ನೋಡುತ್ತೇವೆ. ಮತ್ತೆ inspection ಮಾಡುವುದಲ್ಲದೇ ಕಮಿಟಿಯನ್ನು ಸಹ ರಚನೆ ಮಾಡುತ್ತೇವೆ. ಹಾಗೆಯೇ ಜಿಲ್ಲಾ ಮಟ್ಟದಲ್ಲಿ ತನಿಖೆ ಕೂಡ ಆಗುತ್ತವೆ. ಹಾಗಾದರೆ, ಇವರು ನಮ್ಮ ಆಡಳಿತದಲ್ಲಿ interfere ಆಗುತ್ತಿದ್ದಾರೆಂದು ಅರ್ಥವೇ? Is it an interference with the Executive ಎಂದು ಅರ್ಥವೇ? Can we call it as interference with the Executive? Does it amount to interference with the Executive? Not at all. ಮಾನ್ಯ ಅಧ್ಯಕ್ಷರೆ, ತಾವು ಇಲ್ಲಿ standing committee ಗಳಿಗೆ ಮೆಂಬರ್‌ಗಳನ್ನು ಮಾಡುತ್ತೀರಿ. Who are the members? The members of the Ruling Party and the members of the opposition, not the ministers for every committee. ಈ ಸಭೆಗಳಿಗೆ including Chief Secretary summon ಮಾಡುತ್ತೇವೆ. Does it amount to interference with the Executive? How could it be constructed as an interference with the Executive? Not at all. It is you, ನೀವು ಆ ಕಮಿಟಿಗಳನ್ನು constitute ಮಾಡಿ ಅದಕ್ಕೆ ಛೇರ್ಮನ್ ಮತ್ತು ಮೆಂಬರ್‌ಸ್ನ್ನು ಆಯ್ಕೆ ಮಾಡಿ ಇವರಿಗೆಲ್ಲಾ ಪವರ್ಸ್‌ನ್ನು ನೀವು ಕೊಡುತ್ತೀರಿ. It doesn't mean the Legislature is interfering with the Executive? Why all these powers have been given to the Members of Legislature, if really it is an interference with Executive? Leader of Opposition ಬಗ್ಗೆ ನಾನು ಈಗಾಗಲೇ ಕೌಲ್ ಅಂಡ್ ಶಕ್ಧರ್ ಪುಸ್ತಕದಲ್ಲಿರುವ ಬಗ್ಗೆ ಹೇಳಿದ್ದೇನೆ. ಅಂದರೆ, how he is an important person ಎಂದು ಇರುವಾಗ, ಅವರಿಗೇಕೆ ಕಾರು, ಮನೆ ಮತ್ತು ಸಿಬ್ಬಂದಿಗಳೆಲ್ಲವನ್ನು ಕೊಟ್ಟಿದ್ದೀರಿ? ಅವರು

ವಿಧಾನಸಭೆಯಿಂದ ಮನೆಗೆ ಮತ್ತು ಮನೆಯಿಂದ ವಾಪಸ್ಸು ಇಲ್ಲಿಗೆ ಬರುವುದಕ್ಕೆ ಮಾತ್ರ ಕೊಟ್ಟಿದ್ದೀರಾ? ಅವರ ಜಿಲ್ಲೆಗಳಿಗೆ ಪ್ರವಾಸ ಮಾಡುವುದಕ್ಕೆ ಅವಕಾಶ ಇದೆ. For instance ಈಗ ಎಲ್ಲಾ ಕಡೆ ಪ್ರವಾಹ ಇದೆ. ಪ್ರವಾಹ ಇರುವ ಕಡೆ ನಾನು ಹೋಗುತ್ತೇನೆ. ನಾನು ಅಲ್ಲಿಗೆ ಹೋಗಿ ಕೇವಲ ಕಾವೇರಿ ನೀರು ನೋಡಿಕೊಂಡು ವಾಪಸ್ಸು ಬರುವುದೇ? ಹಾಗಾದರೆ, ಅವರಿಗೆ ಇರುವ protocol ಆದರು ಏನು? ಅವರಿಗೆ ಮಿನಿಸ್ಟರ್ ಸ್ಟೇಟಸ್ ಏಕೆ ಕೊಟ್ಟಿದ್ದೀರಿ? ಮಾನ್ಯ ಅಧ್ಯಕ್ಷರೆ, ತಾವು ನನಗೆ ಈ ಅಧಿಕಾರವನ್ನು ಕೊಟ್ಟಿದ್ದೀರಿ. ಅವರು ನಮಗೆ ಕೊಟ್ಟಿಲ್ಲ. ಈ ರೀತಿಯಾದರೆ ಇವೆಲ್ಲಾ ಏಕೆ ಬೇಕು? ಯಾವ ಅಧಿಕಾರಿಗಳ ಜೊತೆಯು ಮಾತನಾಡಬಾರದು? ಚರ್ಚೆಯನ್ನು ಮಾಡದೆ ಸುಮ್ಮನೆ ಅಲ್ಲಿಗೆ ಹೋಗಿ ಎಲ್ಲೆಲ್ಲಿ ನೀರು ಬಂದಿದೆ ಎಂಬುದನ್ನು ನೋಡಿಕೊಂಡು ವಾಪಸ್ಸು ಬರಬೇಕೆ? ಅಲ್ಲಿ ಏನಾಗಿದೆ ಎಂದು ಕೇಳುವ ಹಾಗಿಲ್ಲವೆ? ಯಾವ ಅಧಿಕಾರಿಗಳ ಜೊತೆ interaction ಮಾಡುವಾಗಿಲ್ಲ. ಇದು ಎಷ್ಟು ಅಸಂಬದ್ಧವಾಗಿದೆ ನೋಡಿ? ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದು ಹಾನಿಕಾರಕವಾದ ನಡವಳಿಕೆ. It is a blow to the functioning of the Parliamentary system of Democracy. It will curtail the rights of the representative of the people. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೀವಾ ಅಥವಾ fascism system ನಲ್ಲಿದ್ದೀವಾ? Why the Parliamentary system of Democracy?.. ತಾವು ನನಗೆ Leader of the opposition ಎಂದು ಇಲ್ಲಿ ಮನ್ನಣೆ ಮಾಡಿದ ಮೇಲೆ ಅನೇಕ ಜಿಲ್ಲೆಗಳಿಗೆ ಪ್ರವಾಸ ಮಾಡಿದ್ದೇನೆ. ಆ ಪ್ರವಾಸದ ಸಂದರ್ಭಧಲ್ಲಿ ಅಧಿಕಾರಿಗಳ ಜೊತೆ ಚರ್ಚೆ ಎಂದು ನಾನು ಹೇಳಿದ್ದೆ ಅಷ್ಟೆ. ರಿವ್ಯೂ ಮೀಟಿಂಗ್ ಕರೆಯಿರಿ ಎಂದು ನಾನು ಯಾರಿಗೂ ಹೇಳಿಲ್ಲ. ಅಥವಾ ರಿವ್ಯೂ ಮೀಟಿಂಗ್ ಮಾಡುತ್ತೇವೆಂದು ಯಾರಿಗೂ ಸಹ ಹೇಳಿಲ್ಲ. ಅಧಿಕಾರಿಗಳ ಜೊತೆ ಚರ್ಚೆ ಎಂದು ಹೇಳಿದ್ದೆಯಷ್ಟೆ. ನಾವು ಸದನದಲ್ಲಿ ಮಂಜೂರು ಮಾಡಿದಂಥ ಹಣ ಸರಿಯಾಗಿ ಖರ್ಚು ಆಗಿದೆಯೋ ಅಥವಾ ಇಲ್ಲವೋ ಎಂದು ನೋಡುವುದಕ್ಕೋಸ್ಕರ ಮತ್ತು ನಿಗದಿ ಮಾಡಿರುವ ಕಾರ್ಯಕ್ರಮಗಳಿಗೆ ಈ ಹಣ ಹೋಗಿದೆಯೋ ಅಥವಾ ಇಲ್ಲವೋ ಎಂದು ಮತ್ತು ಜನರಿಗೆ ಈ ಕಾರ್ಯಕ್ರಮದ ಲಾಭ ತಲುಪಿದೆಯೋ ಅಥವಾ ಇಲ್ಲವೋ ಎಂದು ನೋಡುವಂಥ ಅಧಿಕಾರ ನನಗೆ ಇಲ್ಲದಿದ್ದ ಮೇಲೆ, how can I discharge my duties effectively on the floor of the House? ಮಾಡುವುದಕ್ಕೆ ಆಗುತ್ತದೆಯೇ ಎಂದು ಮಾನ್ಯ ಅಧ್ಯಕ್ಷರೆ ತಾವೇ ಹೇಳಿ? ಏಕೆಂದರೆ, ತಾವು

ಕೂಡ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ನಾನು 1983ರಲ್ಲಿ ಇಲ್ಲಿಗೆ ಶಾಸಕನಾಗಿ ಬಂದ ಮೇಲೆ ಅಧಿಕಾರದಲ್ಲಿದಂಥ ಸಂದರ್ಭದಲ್ಲಿ ಅನೇಕ ಜನ ವಿರೋಧ ಪಕ್ಷದ ನಾಯಕರನ್ನು ನೋಡಿದ್ದೇನೆ. ಮಾನ್ಯ ಯಡಿಯೂರಪ್ಪನವರು ಕೂಡ ಇಲ್ಲಿದ್ದರು. ಮಾನ್ಯ ಬಂಗಾರಪ್ಪ, ಮಾನ್ಯ ವೀರಪ್ಪಮೊಯಿಲಿ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಸಹ ಈ ಸ್ಥಾನದಲ್ಲಿದ್ದಂಥದ್ದನ್ನು ನಾನು ನೋಡಿದ್ದೇನೆ. ಮಾನ್ಯ ಟಿ.ಬಿ. ಜಯಚಂದ್ರರವರು ಸಹ ಇಲ್ಲಿ ಡೆಪ್ಯೂಟಿ ಲೀಡರ್ ಆಗಿ ಕೆಲಸ ಮಾಡಿದಂಥದ್ದನ್ನು ಸಹ ನೋಡಿದ್ದೇನೆ. ಇಲ್ಲಿ ಮಾನ್ಯ ದೇಶಪಾಂಡೆಯವರು, ಮಾನ್ಯ ಚಂದ್ರೇಗೌಡರು, ಮಾನ್ಯ ಧರ್ಮಸಿಂಗ್‌ರವರು ಇಲ್ಲಿದ್ದು ಕೆಲಸ ಮಾಡಿರುವಂಥದ್ದನ್ನು ನಾನು ಮಂತ್ರಿಯಾಗಿ ಮತ್ತು ಶಾಸಕನಾಗಿಯೂ ಕೂಡ ನೋಡಿದ್ದೇನೆ. ಮಾನ್ಯ ದೇವೇಗೌಡರು ಇಲ್ಲಿದ್ದಾಗ ನಾನು ಬಂದಿರಲಿಲ್ಲ.

ನಾನು ಅವರೆಲ್ಲರ ಜೊತೆಯಲ್ಲಿ ಚರ್ಚೆ ಮಾಡಿದೆ. ಎಲ್ಲಾ ಕಾಲದಲ್ಲಿಯೂ ಕೂಡ ಮಾನ್ಯ ಯಡಿಯೂರಪ್ಪನವರು ಮಾಡಿರಬಹುದು. I don't know. ಅಧಿಕಾರಿಗಳ ಜೊತೆಯಲ್ಲಿ interaction ಮಾಡತಕ್ಕಂಥ ಕೆಲಸ ಎಲ್ಲಾ Leader of the Opposition ಎಲ್ಲಾ ಕಾಲದಲ್ಲಿಯೂ ಕೂಡ ಮಾಡಿದ್ದಾರೆ. ನಾವು ಪತ್ರ ಬರೆದು information ತೆಗೆದುಕೊಳ್ಳಿ, Right to Information ಇದೆ. ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಪತ್ರ ಬರೆಯಿರಿ, ಸಂಬಂಧಪಟ್ಟಂಥ ಮಂತ್ರಿಗಳಿಗೆ ಪತ್ರವನ್ನು ಬರೆಯಿರಿ. Don't interact with the officers ಎನ್ನತಕ್ಕಂಥ ದೋರಣೆ ಇದೆಯಲ್ಲಾ, ಅದು ಪ್ರಜಾಪ್ರಭುತ್ವದ ವಿರೋಧಿ ಧೋರಣೆ. ಎಲ್ಲಾ ಸತ್ಸಂಪ್ರದಾಯಗಳನ್ನು ಇಲ್ಲಿ ಹಾಕಿದ್ದಾರೆ ಅವೆಲ್ಲಕ್ಕೂ ಕೂಡ ಮಂಗಳ ಹಾಡತಕ್ಕಂಥ ಧೋರಣೆ ಅದು. ಅದೆಲ್ಲಕ್ಕೂ ತಿಲಾಂಜಲಿಯನ್ನು ಇಡತಕ್ಕಂಥ ದೋರಣೆ ಅದು. ಈ ಬೆಳವಣಿಗೆ ಪ್ರಜಾಪ್ರಭುತ್ವದ ಯಶಸ್ವಿಗೆ ಇಂತಹ ನಡವಳಿಕೆಗಳಿಂದ ಇವು ಕಾರಣವಾಗುತ್ತವೆ. ನಾನು ಯಾವ ಸರ್ಕಾರಗಳನ್ನು ಕೂಡ ನೋಡಿರಲಿಲ್ಲ. ನೀವು ಅಧಿಕಾರಿಗಳ ಜೊತೆಯಲ್ಲಿ interact ಮಾಡಬೇಡಿ ಎಂದು. All my predecessors as Leader of the Opposition ಎಲ್ಲರೂ ಕೂಡ ಮಾಡಿದ್ದಾರೆ. ಅದಕ್ಕೋಸ್ಕರ, Kaul and Shekdharನಲ್ಲಿ Parliamentary Practice and Procedure ಇದೆಯಲ್ಲಾ Parliamentನಲ್ಲಿ Leader of the Opposition ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿರುವುದು. ಸರ್ಕಾರ ಅಂದರೆ ಹೇಗೆ ಇರಬೇಕು? Leader of the Oppossion ಅಂದರೇನು? ಅವರ institution ಅಂದರೇನು? ಅವರ

ಸ್ಥಾನಮಾನಗಳು ಏನು? ಎಂದು ಎಲ್ಲಾ ಹೇಳಿದ್ದಾರೆ. ಇಂಗ್ಲೆಂಡ್‌ನಲ್ಲಿ ಒಂದು ಕೇಸ್ ಆಗಿತ್ತು ಅದನ್ನು ನಾನು ಮರೆತು ಬಿಟ್ಟಿದ್ದೇನೆ. ನಾನು ಅದನ್ನು ಬಹಳ ಹಿಂದೆ ಓದಿದ್ದೆ. ಒಬ್ಬ Under Secretary, Leader of the Opposition ಜೊತೆ ಮಾತನಾಡಿ ಕರೆದು interact ಮಾಡಿ information ತೆಗೆದುಕೊಳ್ಳುತ್ತಾರೆ. ಅದರ ಬಗ್ಗೆ Parliamentನಲ್ಲಿ ದೊಡ್ಡ ಗಲಾಟೆಯಾಗಿ, Leader of the Opposition has got every right to interact ಎನ್ನತಕ್ಕಂಥದ್ದು ಕೂಡ establishment ಆಗಿದೆ. ನಾವು ಬಹಳ ಗೌಪ್ಯವಾದ ವಿಚಾರವನ್ನು ಕೇಳುವುದಕ್ಕೆ ಹೋಗುತ್ತೇವೆಯೇ? ನೀವು ಬಹಳ ದೊಡ್ಡದಾಗಿ ನಿಮ್ಮ ಸರ್ಕಾರ ಪಾರದರ್ಶಕ ಎಂದು ಹೇಳುತ್ತೀರಿ? ನಾನು ಡಿ.ಸಿ. ಅಥವಾ ಇನ್ನಾವುದೋ ಅಧಿಕಾರಿಯ ಜೊತೆಯಲ್ಲಿ interact ಮಾಡುವುದರಿಂದ ಅದು ಪಾರದರ್ಶಕತೆಗೆ ಧಕ್ಕೆಯಾಗುತ್ತದೆಯೋ ಅಥವಾ ಪೂರಕವಾಗುತ್ತದೆಯೋ? ಅವರು ಏನೇನು ಮಾಡುತ್ತಿದ್ದೇವೆಂದು secrey ಬಿಟ್ಟು ಕೊಡುತ್ತಾರಾ? ಸಾರ್ವಜನಿಕ ಹಣ ಹೇಗೆ ಖರ್ಚು ಮಾಡಿದ್ದೀರಿ ಎಂದು ಕೇಳುವುದು ಅಷ್ಟೆ? Information collection ಅಷ್ಟೆ? ನಾಳೆ ಅಲ್ಲಿ ಹೋಗಿ ಆದೇಶ ಮಾಡುವುದಕ್ಕಾಗುವುದಿಲ್ಲ ಅದು ನನಗೂ ಗೊತ್ತಿದೆ. I know my limitations. ನಾನು ಕೂಡ ಈ ಸದನದಲ್ಲಿ ಸುಮಾರು 25 ವರ್ಷಗಳ ಕಾಲ ನೋಡಿದ್ದೇನೆ. ನಾನು Deputy Chief Minister ಆಗಿ, ಹಣಕಾಸು ಮಂತ್ರಿಯಾಗಿ, ಮಂತ್ರಿಯಾಗಿ, ಶಾಸಕನಾಗಿ ಎಲ್ಲಾ ನೋಡಿದ್ದೇನೆ. I know my limitations. I cannot pass orders. I cannot give directions. But, I have got every right to get the information regarding implementation of the programmes.

ಅಧ್ಯಕ್ಷರು: ಉತ್ತರ ಸೇರಿ ಒಂದು ತಾಸಿನಲ್ಲಿ ಮುಗಿಸಬೇಕೆಂದು ನಾವು ಮಾಡಿದ್ದೆವು. ನಿಮ್ಮದು ಇನ್ನು ಒಂದು ತಾಸ್ ಆದರೂ ಮುಗಿದಿಲ್ಲ.

ಶ್ರೀ ಸಿದ್ದರಾಮಯ್ಯ: ನೀವು convince ಆಗಿದ್ದೇನೆಂದು ಬಿಟ್ಟರೆ ನಾನು ಮಾತನಾಡುವುದನ್ನು ನಿಲ್ಲಿಸಿ ಬಿಡುತ್ತೇನೆ. ಅವರು convince ಆಗುವುದಿಲ್ಲ ಬಿಡಿ. ಇದಕ್ಕೆಲ್ಲಾ ನೀವು ರೂಲ್ಸ್ ಮಾಡಬೇಕಾಗುತ್ತದೆ. 1976ರಲ್ಲಿ ಏನು ಆಕ್ಟ್ ಆಯಿತು, ಅದಕ್ಕೆ ರೂಲ್ಸ್‌ಗಳನ್ನು ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇಲ್ಲಿ ಆ ರೂಲ್ಸ್‌ಗಳನ್ನು ಮಾಡಬೇಕು. ಒಂದು ಸುತ್ತೋಲೆಯನ್ನು ಹೊರಡಿಸಿ ವಿರೋಧ ಪಕ್ಷದ ನಾಯಕರ ಸ್ಥಾನಮಾನಗಳನ್ನು ಕಿತ್ತುಕೊಳ್ಳುವುದು ಇದೆಯಲ್ಲಾ ಏಕೆ? ನಾನು interact ಮಾಡುವುದರಿಂದ ಇವರ ಸರ್ಕಾರಕ್ಕೆ ಆಗತಕ್ಕಂಥ

ತೊಂದರೆ ಏನು? I want to know. ಇವರ Executiveಗೆ ಅದು interference ಆಗುತ್ತದೆಯಾ? ನಾನು ಇವರ ಸ್ಥಾನದಲ್ಲಿ ಕುಳಿತುಕೊಂಡು ಆದೇಶ ಮಾಡುವುದಕ್ಕೆ ಬರುತ್ತದೆಯೇ? ಅಥವಾ ಇಲ್ಲಿ ಪಾಸ್ ಆಗಿರುವಂಥದ್ದನ್ನು ಏನೋ ಬದಲಾವಣೆ ಮಾಡುವುದಕ್ಕೆ ಬರುತ್ತದೆಯೇ? ಇರುವ programme ನ್ನು ಬದಲಾವಣೆ ಮಾಡಿ ಬೇರೆ programmeಗೆ ಹಣವನ್ನು deviate ಮಾಡಿ ಎಂದು ಹೇಳುವುದಕ್ಕೆ ಬರುತ್ತದೆಯೇ? Not at all. ಮಾಡುವುದಕ್ಕೆ ಸಾಧ್ಯವೇ ಇಲ್ಲ, ಮಾಡುವುದಕ್ಕೆ ಬರುವುದಿಲ್ಲ. ಹಣ ಹೆಚ್ಚು ಕಡಿಮೆ ಮಾಡಬೇಕಾದರೆ ಅದು ಇಲ್ಲಿಗೆ ಬರಬೇಕು, ಈ ಸದನವೇ ಮಾಡಬೇಕು.

The House is supreme. This highest forum in the State Legislature. ಇಲ್ಲಿಯೇ ತೀರ್ಮಾನ ಆಗಬೇಕು. ಎಲ್ಲರನ್ನೂ ಕೂಡ ಜನರು ಆಯ್ಕೆ ಮಾಡಿದ್ದಾರೆ. ಈ ರಾಜ್ಯದ ಒಟ್ಟಾರೆ ಹಿತ ಕಾಪಾಡಬೇಕು. ರಾಜ್ಯದ ಜನರ ಬದುಕನ್ನು ಹಸನು ಮಾಡಬೇಕು. ಈ ರಾಜ್ಯವನ್ನು ಸುಖಿ ರಾಜ್ಯ ಮಾಡುವುದಕ್ಕೆ ಹೋಗಬೇಕು. ಸಾಮಾಜಿಕ ನ್ಯಾಯದ ಆಧಾರದ ಮೇಲೆ ನಾಡು ಮತ್ತು ದೇಶವನ್ನು ಕಟ್ಟಬೇಕು ಎನ್ನುವ ತೀರ್ಮಾನಕ್ಕೋಸ್ಕರ ನಾವೆಲ್ಲರೂ ಇಲ್ಲಿ ಬಂದಿರುವುದು. ಅದಕ್ಕೆ ಚ್ಯುತಿಯಾಗದ ರೀತಿಯಲ್ಲಿ ನೋಡಿಕೊಳ್ಳಬೇಕಾದುದು ಈ Legislatureನ ಆ ಕಡೆ ಈ ಕಡೆ ನಾವೆಲ್ಲರೂ ಸದಸ್ಯರು ಇರಬಹುದು. ಎಲ್ಲರ ಹಕ್ಕುಗಳನ್ನು ರಕ್ಷಣೆ ಮಾಡತಕ್ಕಂಥ ನಮ್ಮ ಗೌರವವನ್ನು ಕಾಪಾಡತಕ್ಕಂಥ ಕೆಲಸವನ್ನು ಇವತ್ತು ನಾವು ಮಾಡಬೇಕು. ಈ circular issue ಮಾಡಿದ್ದಾರೆ. According to me, they have no powers. ನನ್ನ ಅಧಿಕಾರವನ್ನು ಮೊಟಕು ಮಾಡುವುದಕ್ಕೆ ಇವರಿಗೆ ಏನು ಅಧಿಕಾರ ಇದೆ? They have not given that power. ನನ್ನ ಅಧಿಕಾರವನ್ನು ಮೊಟಕು ಮಾಡುವುದಕ್ಕೆ ಜನರು ಅಧಿಕಾರವನ್ನು ಇವರಿಗೆ ಕೊಟ್ಟಿಲ್ಲ. ಅದನ್ನು ಸಂವಿಧಾನದಲ್ಲೂ ಕೂಡ ಎಲ್ಲೂ ಹೇಳಿಲ್ಲ. ನಾವು ಮಾಡಿರತಕ್ಕಂಥ rules and regulations ನಲ್ಲಿಯೂ ಕೂಡ ಎಲ್ಲಿಯೂ ಕೂಡ ಮಾಡಿಲ್ಲ. I don't know why they are afraid? ಅವರಿಗೆ ಏಕೆ ಹೆದರಿಕೆ? ನಾವು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದರೆ ಅದೊಂದು ಕೆಟ್ಟ ಸಂಪ್ರದಾಯವಾಗುತ್ತದೆಯೇ? ಪ್ರಜಾಪ್ರಭುತ್ವಕ್ಕೆ ಕಪ್ಪು ಚುಕ್ಕೆ ಆಗಿ ಬಿಡುತ್ತದೆಯೇ? ಇನ್ನು ಪ್ರಜಾಪ್ರಭುತ್ವ ಬೆಳೆಯಲಿಕ್ಕೆ ಯಶಸ್ವಿಯಾಗಲಿಕ್ಕೆ ಕಾರಣವಾಗುತ್ತದೆ. ನಾವು ಇಲ್ಲಿ ಬಂದು ಬಹಳ ಎಫೆಕ್ಟಿವ್ ಆಗಿ ಜವಾಬ್ದಾರಿಯಿಂದ ಪರಿಣಾಮಕಾರಿಯಾಗಿ ಜನರ

ಸಮಸ್ಯೆ ಮತ್ತು ಅಭಿಪ್ರಾಯಗಳನ್ನು ಹೇಳುವುದಕ್ಕೆ ಅದು ಪೂರಕವಾಗುತ್ತದೆ ಮತ್ತು ಅನುಕೂಲವಾಗುತ್ತದೆ. ಅದಕ್ಕೋಸ್ಕರ ಇವೆಲ್ಲಾ ಆಗಲೇ ಬೇಕಾಗಿರುವಂಥದ್ದು. ಅದಕ್ಕೋಸ್ಕರ Leader of the Oppositionನ್ನು ಒಂದು statutory position ಎಂದು ಹೇಳಿ statutory institution ಎಂದು ಹೇಳಿ, ಅದನ್ನು recognize ಮಾಡಿರತಕ್ಕಂಥದ್ದು. ನೀವು ನಮಗೆ ಇಲ್ಲಿ ಈ ಎಲ್ಲಾ ಸೌಲತ್ತುಗಳನ್ನು ಕೊಡುವುದಕ್ಕೆ ಮಾಡಿರುವಂಥದ್ದು. ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟಂತೆ rules and regulations ಗಳನ್ನು ನೀವು ಮಾಡಬೇಕು. ಅವರು ಅಲ್ಲ ಮಾಡುವುದು. ವಿರೋಧ ಪಕ್ಷದವರನ್ನು ಹತ್ತಿಕ್ಕುವುದರಿಂದ ಅವರ ಬಾಯಿ ಮುಚ್ಚಿಸಿ ಬಿಡಬಹುದು ಎಂದು ಏನಾದರೂ ಅಂದುಕೊಂಡಿದ್ದರೆ ಅವರು ಭ್ರಮಾ ಲೋಕದಲ್ಲಿದ್ದಾರೆಂದು ಹೇಳಬೇಕಾಗುತ್ತದೆ. ಎಂಎಲ್‌ಎಗಳ ಬಾಯಿ ಮುಚ್ಚಿಸಿ ಬಿಡಬಹುದು, ಅವರನ್ನು ಹತ್ತಿಕ್ಕಿ ಬಿಡಬಹುದು. ಇಲ್ಲಿ ನಾವು ಹಣ ಮಂಜೂರು ಮಾಡುವುದು. ಎಲ್ಲಾ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಆಗಬೇಕು, ಎಲ್ಲಾ ಕಡೆ ಹಣ ಸಮಾನವಾಗಿ ಹಂಚಿಕೆ ಆಗಬೇಕೆಂದು ಇಲ್ಲಿ ಪಾಸ್ ಮಾಡುವುದು. ಒಂದು ಇಲಾಖೆಗೆ ಅಷ್ಟು ಹಣವನ್ನು ಖರ್ಚು ಮಾಡುವುದು. But ಇಲ್ಲಿ ಏನಾಗುತ್ತದೆಂದರೆ, ಕೆಲವು ಕೆಲವು ಕ್ಷೇತ್ರಗಳಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ಪ್ರಾರಂಭ ಮಾಡಿ ಬಿಟ್ಟಿದ್ದಾರೆ.

I tell you that it is a very bad approach. ಒಂದು ಕಡೆ ಡಾ: ನಂಜುಂಡಪ್ಪನವರ ವರದಿಯನ್ನು ಜಾರಿ ಮಾಡುತ್ತೇವೆಂದು ಹೇಳಿ, ಅದನ್ನು ಒಪ್ಪಿಕೊಂಡು ಜಾರಿ ಮಾಡುತ್ತೇವೆಂದು ಜನರಿಗೆ, ಎಲ್ಲರಿಗೂ ಹೇಳುವುದು. ಡಾ: ನಂಜುಂಡಪ್ಪನವರ ವರದಿಯ ಬಗ್ಗೆ ಸರ್ಕಾರ ಬಹಳ ದೊಡ್ಡದಾಗಿ ಭಾಷಣವನ್ನು ಮಾಡುವುದು. ಎಲ್ಲಿ ನಂಜುಂಡಪ್ಪನವರ ವರದಿಯಲ್ಲಿ ಹಿಂದುಳಿದ ತಾಲ್ಲೂಕೆಂದು ಗುರುತಿಸಿಲ್ಲವೋ ಆ ತಾಲ್ಲೂಕುಗಳಿಗೆ ಚೆನ್ನಾಗಿ ಹಣವನ್ನು ಬಿಡುಗಡೆ ಮಾಡುತ್ತಾರೆ. ಇದು regional imbalance ನ್ನು ತೆಗೆದು ಹಾಕುವಂತಹ ಕ್ರಮವೇ? ವಿರೋಧ ಪಕ್ಷದಲ್ಲಿದ್ದು ನಾವು ಗೆದ್ದು ಬಂದಿದ್ದೇವೆಂದು ಆ ಕಾರಣಕ್ಕೋಸ್ಕರ ಅವರ ಕ್ಷೇತ್ರದಲ್ಲಿ ಹಣವನ್ನು ಬಿಡುಗಡೆ ಮಾಡಬಾರದು, ಅವರ ಕ್ಷೇತ್ರಗಳು ಅಭಿವೃದ್ಧಿಯಾಗಬಾರದು ಎಂಬ ಧೋರಣೆ ಇದೆಯಲ್ಲಾ, ಆ ಧೋರಣೆ ಖಂಡನೀಯವಾದ ಧೋರಣೆಯಾಗಿದೆ. ನಮ್ಮ ruling partyಯವರಿಗೆ ಮಾತ್ರ ಹಣವನ್ನು ಖರ್ಚು ಮಾಡಿಕೊಳ್ಳುತ್ತೇವೆ ಎನ್ನುವುದಾದರೆ, ನಾವು ಏತಕ್ಕೆ ಇಲ್ಲಿಗೆ ಬರಬೇಕು? ಜನರು ನಮಗೆ ಏಕೆ

ಓಟನ್ನು ಕೊಟ್ಟು ಕಳುಹಿಸಿದ್ದಾರೆ. ನಾವು ಏಕೆ ಹಣವನ್ನು ಮಂಜೂರು ಮಾಡುವುದಕ್ಕೆ ಒಪ್ಪಿಕೊಳ್ಳಬೇಕು. ನೀವು without the opposition you can pass, you can approve the demands, majority ಇದೆ ಎಂದು ಮಾಡಿಕೊಂಡು ಹೊರಟು ಹೋಗಿಬಿಡಿ. Houseನ್ನು ಕರೆಯುವುದೇ ಬೇಡ. ಇಲ್ಲಿ ಏಕೆ ನಾವು ಬಂದು ಚರ್ಚೆ ಮಾಡಬೇಕು. ಹೊಸ ಸಂಪ್ರದಾಯವನ್ನು ಮಾಡುವುದಕ್ಕೆ ಶುರು ಮಾಡಿ, ಹೊಸ ಪದ್ಧತಿಗಳನ್ನು ಮಾಡಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಈ ಸರ್ಕಾರ ಅಸಮಾನತೆಯನ್ನು ಮಾಡುವುದರ ಮೂಲಕ ಡಾ: ನಂಜುಂಡಪ್ಪನವರು ಏನು ವರದಿಯನ್ನು ಕೊಟ್ಟು ಸಮಾನತೆಯನ್ನು ತರಬೇಕು, ಹಿಂದುಳಿದ ಪ್ರದೇಶವನ್ನು ಮುಂದೆ ತರಬೇಕು ಎನ್ನುವ ಯೋಜನೆ ಇತ್ತು, ಅದಕ್ಕೆ ಅವಮಾನ ಮಾಡಿದಂತಾಗಿದೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಿಮಗೆ ಅಧಿಕಾರವಿದೆ, ಶಾಶ್ವತವಾಗಿ ನೀವು ಅಧಿಕಾರದಲ್ಲಿ ಇರುವುದಿಲ್ಲ ಮತ್ತು ನಾವು ಶಾಶ್ವತವಾಗಿ ವಿರೋಧ ಪಕ್ಷದಲ್ಲಿ ಇರುವುದಿಲ್ಲ. ಕೆಟ್ಟ ಸಂಪ್ರದಾಯ ಪ್ರಾರಂಭವಾದರೆ. ಅದು ಮುಂದುವರಿಯುತ್ತದೆ. ನಾನೂ ಕೂಡ 6 ವರ್ಷಗಳ ಕಾಲ ಹಣಕಾಸಿನ ಮಂತ್ರಿಯಾಗಿದ್ದೆ. ನಾನು ಎಲ್ಲಾದರೂ ಒಂದು ಕಡೆ ಹಣಕಾಸಿನ ಮಂತ್ರಿಯಾಗಿರುವಾಗ ಒಬ್ಬ ಶಾಸಕನಿಗೆ ವಿಶೇಷವಾಗಿ ಅನುದಾನವನ್ನು ಕೊಟ್ಟಿರುವುದು ತೋರಿಸಲಿ ನೋಡೋಣ. ನಾನು ಸಹ ತೆಗೆದು ಕೊಂಡಿರುವುದಿಲ್ಲ. ನಾವು ಆ ರೀತಿ ಮಾಡಿಲ್ಲ. ಮಾನ್ಯ ಉಮೇಶ್ ಕತ್ತಿಯವರು ಇದ್ದರು ಅವರಿಗೆ ಈ ಬಗ್ಗೆ ಗೊತ್ತಿರಬೇಕು.

ಶ್ರೀ ಉಮೇಶ್ ಕತ್ತಿ (ಮಾನ್ಯ ತೋಟಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಇವರು ಹಣಕಾಸಿನ ಮಂತ್ರಿಗಳಾಗಿದ್ದಾಗ ಇದ್ದದ್ದನ್ನೆ ಕೊಟ್ಟಿಲ್ಲ. ವಿಶೇಷವಾಗಿ ಕೊಡುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ): ಅಷ್ಟು ಬಿಗಿಯಾಗಿ ಹಣಕಾಸಿನ ನಿರ್ವಹಣೆಯನ್ನು ಮಾಡಿದರೆಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: You must appreciate ಅಲ್ವಾ. PWD Minister ಆಗಿದ್ದಾಗ ನಿಮಗೆ ಹೆಚ್ಚಾಗಿ ಕೊಡಿ ಎಂದು ಹೇಳುತ್ತಿದ್ದೇವಾ?

ಶ್ರೀ ಉಮೇಶ್ ವಿ. ಕತ್ತಿ: ಇಲ್ಲಾ, ಇಲ್ಲಾ, ಇಲಾಖೆಗಳಿಗೆ ಕೊಟ್ಟಿದ್ದೀರಿ ಅದರ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ ಶಾಸಕರ ಅನುದಾನದಲ್ಲಿ ಇರುವುದನ್ನೇ ಕೊಡುವುದಕ್ಕಾಗಲಿಲ್ಲ ಮುಂದೆ ಹೊಸದಾಗಿ ಕೊಡುವಂತಹ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದೆ.

ಶ್ರೀ ಸಿದ್ದರಾಮಯ್ಯ: ಅದರ ಬಗ್ಗೆ ಮತ್ತೆ ಚರ್ಚೆ ಮಾಡೋಣ. Separate ಆಗಿ ಬರುತ್ತೇನೆ, ಖಜಾನೆಯ ಹಣ ಇದರ ಬಗ್ಗೆ ಇನ್ನೊಂದು ದಿನ ಚರ್ಚೆ ಮಾಡೋಣ. ಈಗ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಖಜಾನೆ ಪರಿಸ್ಥಿತಿ ಏನಾಗಿದೆ. ಹಣಕಾಸು ಪರಿಸ್ಥಿತಿ ಏನಾಗಿದೆ. resources ಏನಾಗಿದೆ ಅದರ ಬಗ್ಗೆ ಇನ್ನೊಂದು ಸಲ ಮಾತನಾಡೋಣ. ಈಗ ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇದರಿಂದ ಬಹಳ ಜನರಿಗೆ ಅಸಮಾಧಾನವಿದೆ. ಈಗ ನಾವುಗಳು ಜಿಲ್ಲೆಗೆ ಹೋಗುತ್ತೇವೆ. ಜನರು ಬಂದು grievances ಅನ್ನು ಹೇಳುತ್ತಾರೆ. ಸಾರ್ವಜನಿಕರು ಬಂದು grievances ಹೇಳುತ್ತಾರೆ. ನಾವು ಅದನ್ನೆಲ್ಲವನ್ನು ಹರಿದು ಬಿಸಾಡಿ ಬಂದು ಬಿಡುವುದೇ. ಅಲ್ಲಿಂದ ಬಂದ ತಕ್ಷಣವೇ ನಾಳೆ ಇಲ್ಲಿ ಸದನವಿರುತ್ತದೆಯೇ ಇಲ್ಲಿ ಬಂದು ಹೇಳುವುದಕ್ಕೆ, ನಾವು ಯಾವುದೋ ಜಿಲ್ಲೆಗೆ ಪ್ರವಾಸ ಮಾಡುತ್ತೇವೆ. ತಾಲ್ಲೂಕುಗಳಿಗೆ ಹೋಗಿರುತ್ತೇವೆ. ಜನಗಳು grievances ಅನ್ನು ಕೊಡುತ್ತಾರೆ. ನಾವು ಏನು ಮಾಡಬೇಕು? ಸಂಬಂಧಪಟ್ಟಂತಹ ಅಧಿಕಾರಿಗಳ ಜೊತೆಯಲ್ಲಿ ಕೇಳುವುದಕ್ಕೂ ನಾವು ಅಧಿಕಾರವನ್ನು ಕಿತ್ತುಕೊಳ್ಳುತ್ತೇನೆಂದರೆ ಇದನ್ನು democracy ಎಂದು ಕರೆಯಬೇಕೆ? ಇದನ್ನು ನೀವು democratic spirit ನಿಂದ ಕೆಲಸವನ್ನು ಮಾಡುತ್ತಿದ್ದೀರೆಂದು ಹೇಳಬೇಕೆ? ನಿಮಗೆ democracy ಯಲ್ಲಿ ನಂಬಿಕೆ ಇದೆ ಎಂದು ಹೇಳಬೇಕೇ? ಈ ತರಹ ತಾರತಮ್ಯ ಮಾಡತಕ್ಕಂತಹ ಧೋರಣೆ ಇದೆಯಲ್ಲಾ ಈ ಧೋರಣೆಯನ್ನು ಈಗಲೇ end ಮಾಡಿ ಅದು ಮುಂದುವರಿಯಬಾರದು. ಅದು ಒಳ್ಳೆಯ ಸಂಪ್ರದಾಯವೂ ಅಲ್ಲ ಅದು ರಾಜ್ಯದ ಸಮಾನ ಬೆಳವಣಿಗೆಗೆ ಪೂರಕವು ಅಲ್ಲ. ಸಾಮಾಜಿಕ ನ್ಯಾಯಕ್ಕೆ ಪೂರಕವು ಅಲ್ಲ ಇದು ಆಗಬಾರದು.

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, Operation Kamala ಆಯಿತು. ಈಗ Operating Democracy.

ಶ್ರೀ ಸಿದ್ಧರಾಮಯ್ಯ: correct ನಾವು ಪ್ರಜಾಪ್ರಭುತ್ವದ ಮೇಲೆ ಚೆಲ್ಲಾಟವನ್ನು ಆಡಬಾರದು. ಪ್ರಜಾಪ್ರಭುತ್ವಕ್ಕೆ ವಿರುದ್ಧವಾದಂತಹ ನೀತಿಯನ್ನು ನಾವೆಲ್ಲರೂ

ಇಲ್ಲಿರುವಂತಹ 225 ಜನ ಶಾಸಕರು ಕೂಡ ಖಂಡಿಸಬೇಕು. ಸರ್ಕಾರದಲ್ಲಿದ್ದೇವೆ ಇದಕ್ಕೋಸ್ಕರವಾಗಿ ಸರ್ಕಾರದ ಪರವಾಗಿ ಮಾತನಾಡಬೇಕು. ನಾವು ವಿರೋಧ ಪಕ್ಷದಲ್ಲಿದ್ದೇವೆ ಅದಕ್ಕೋಸ್ಕರವಾಗಿ ವಿರೋಧವಾಗಿ ಮಾತನಾಡಬೇಕೆಂದು ಹೇಳುವುದಲ್ಲ. ಪ್ರಜಾಪ್ರಭುತ್ವಕ್ಕೆ ಅಪಾಯ ಬಂದಾಗ, ಸಂಸದೀಯ ವ್ಯವಸ್ಥೆಗೆ ಅಪಾಯ ಬಂದಾಗ ಎಲ್ಲರೂ ಕೂಡ ಒಕ್ಕೋರಲಿನಿಂದ ಅದನ್ನು ವಿರೋಧ ಮಾಡತಕ್ಕಂತದ್ದು ನಮ್ಮ ಕರ್ತವ್ಯವಾಗಬೇಕು. ಅವರದು ಕರ್ತವ್ಯವಾಗಬೇಕು, ನಮ್ಮ ಕರ್ತವ್ಯವೂ ಕೂಡ ಅಗಬೇಕು. ಮಾನ್ಯ ಅಧ್ಯಕ್ಷರೆ ಇದನ್ನು ನೀವು ರಕ್ಷಣೆ ಮಾಡಬೇಕು. ಇದು ಅಂತಿಮವಾಗಿ ನಿಮ್ಮ ಕೈಯಲ್ಲಿ ಇದೆ. It is with you, the power is vested with you, not with the Government to take away our right, our privileges. Protect our interest, you have to protect our interest. ಇದು ಮೂಲಭೂತವಾದಂತಹ ವಿಚಾರ. ಇವರು ಏನು ಜೂನ್ 25ನೇ ತಾರೀಖು ಮುಖ್ಯ ಕಾರ್ಯದರ್ಶಿಗಳ ಮೂಲಕವಾಗಿ Circular ಮಾಡಿಸಿದ್ದಾರಲ್ಲಾ ಇದು most un-democratic, un-constitutional and against the spirit of democracy. ಇವತ್ತು ನಾವು ಪ್ರಜಾತಂತ್ರವನ್ನು ಎತ್ತಿ ಹಿಡಿಯಬೇಕು, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಳ್ಳೆಯ ಸತ್ಸಂಪ್ರದಾಯಗಳು ಆಗಬೇಕು. ಸಂಸತ್ತಿನ ಒಳ್ಳೆಯ ಸಂಪ್ರದಾಯಗಳು ಇಲ್ಲಿ ನಿರ್ಮಾಣವಾಗಬೇಕು. ಹಿಂದೆ ಆಗಿರುವಂತಹದ್ದಕ್ಕೆ ತಿಲಾಂಜಲಿಯನ್ನು ಇಡಬಾರದು, ಹೊಸ ಸಂಪ್ರದಾಯದ ಕಡೆಗೆ ಹೋಗಬಾರದು ಎನ್ನುವುದಕ್ಕೆ ತಾವು ದಯಮಾಡಿ ಆಸ್ಪದವನ್ನು ಕೊಡಕೂಡದು. ನಾನು ನಿಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ ಮತ್ತು ಮನವಿಯನ್ನು ಮಾಡುತ್ತೇನೆ. ದಯಮಾಡಿ ಇದಕ್ಕೆ ಅವಕಾಶವನ್ನು ಕೊಡಬಾರದು. ಇಲ್ಲಿ ನಾನು ಬರುತ್ತೇನೆ, ಇನ್ನೊಬ್ಬರು ಯಾರಾದರೂ ಬರುತ್ತಾರೆ. ಆದರೆ institution ಉಳಿಯಬೇಕು. Institution ಗೌರವ ಉಳಿಯಬೇಕು. Institution ಸ್ಥಾನಮಾನಕ್ಕೆ ಗೌರವವು ಉಳಿಯಬೇಕು. ಅದು ಬಹಳ ಮುಖ್ಯವಾದ ವಿಚಾರ. ನಿಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಈ ತರಹ ಮಾಡುವುದರಿಂದ ಈ ಸರ್ಕಾರ ದುರುದ್ದೇಶದಿಂದ ವಿರೋಧ ಪಕ್ಷದವರ ಬಾಯಿ ಮುಚ್ಚಿಸುತ್ತೇವೆಂದು ಹೇಳಿ, ಬಾಯಿ ಮುಚ್ಚಿಸುವುದಕ್ಕೆ ಆಗುತ್ತದೆಯೇ? ಒಂದು ಸಂಸ್ಥೆಗೆ ಅಗೌರವ ಮಾಡುತ್ತೀರಷ್ಟೇ. ಬಾಯಿ ಮುಚ್ಚಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಇಲ್ಲಿರತಕ್ಕಂಥಹವರ ಬಾಯಿ ಮುಚ್ಚಿಸುವುದಕ್ಕಾಗುತ್ತದೆಯೇ, ಅದು

ಸಾಧ್ಯವೇ ಇಲ್ಲ. ಈ ತರಹದ ನಿಮ್ಮ ವಾಮಮಾರ್ಗಗಳ ಮೂಲಕ ನಿಮಗೆ ಜನರು ಕೊಟ್ಟಿರುವಂತಹ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ವಿರೋಧ ಪಕ್ಷದವರನ್ನು ಬಾಯಿಮುಚ್ಚಿಸುತ್ತೇವೆಂದು ಹೇಳಿ ಕನಸನ್ನು ಕಂಡು ಕೊಂಡಿದ್ದರೆ, ಭ್ರಮೆಯಲ್ಲಿದ್ದರೆ ಅದು ಬರಿ ಭ್ರಮೆಯಾಗುತ್ತದೆ. ಜನರು ನಿಮ್ಮನ್ನು ಕ್ಷಮಿಸುವುದಿಲ್ಲ. ಜನರು ನಿಮ್ಮನ್ನು ನೋಡುತ್ತಿದ್ದಾರೆ. ಇದು ಸಾರ್ವಜನಿಕ issue ಆಗಿ ಬಿಟ್ಟಿದೆ. ಎಲ್ಲರೂ ಮಾಡಿಕೊಂಡು ಬರುತ್ತಿದ್ದಾರೆ ಸಿದ್ದರಾಮಯ್ಯನವರು ಬಂದಾಗ ಏಕೆ ಹೀಗೆ ಮಾಡಿದ್ದಾರೆ? ಅಲ್ಲಿ ಮೇಲ್ಮನವಿಯಲ್ಲಿ ಉಗ್ರಪ್ಪ ಅವರು ಬಂದಾಗ ಏಕೆ ಹೀಗೆ ಆಗಿದೆ? ಹಿಂದೆ ಯಾವ ಸರ್ಕಾರವು ಕೂಡ ಮಾಡಿರಲಿಲ್ಲ. ಬಿಜೆಪಿಯವರು ಬಂದ ಮೇಲೆ ಏಕೆ ಹೀಗೆ ಮಾಡಿದ್ದಾರೆ ಎಂದು ಜನರು ಚರ್ಚೆ ಮಾಡುತ್ತಿದ್ದಾರೆ. ಇಲ್ಲಿ ಮಾನ್ಯ ಯಡಿಯೂರಪ್ಪನವರು ಕುಳಿತಿದ್ದಾಗ ನಾನು ನೋಡಿದ್ದೇನೆ. ಎಷ್ಟು ವೀರಾವೇಶದಿಂದ, ಆಕ್ರೋಶದಿಂದ ಮಾತನಾಡುತ್ತಿದ್ದರು. ಅವರು ಇಲ್ಲಿ ಕುಲಿತುಕೊಂಡು ಒಂದು ದಿವಸವೂ ಕೂಡ ನಗುನಗುತ್ತಾ ಇರುವುದನ್ನು ನಾನು ನೋಡಿಯೇ ಇಲ್ಲ. ಯಾವಾಗಲೂ ಮುಖವನ್ನು ಕೆಂಪಗೆ ಮಾಡಿಕೊಂಡು ಕುಳಿತಿರುತ್ತಿದ್ದರು. ಸ್ವಲ್ಪ ಹಿಂದಿನ ಅವರ ಭಾಷಣಗಳನ್ನು ತರಿಸಿಕೊಂಡು ಇಲ್ಲಿ ಕುಳಿತುಕೊಂಡಿದ್ದಾಗ ಏನೇನು ಮಾತನಾಡಿದ್ದಾರೆಂದು ಒಂದು ಸಲ ಓದಿಕೊಂಡು ಬಂದರೆ ಒಳ್ಳೆಯದು. ಒಂದು ತರಹ ಯುದ್ಧಕ್ಕೆ ಬಂದವರ ತರಹ ಇಲ್ಲಿಗೆ ಬಂದು ಕುಳಿತುಕೊಂಡು ಬಿಡುತ್ತಿದ್ದರು. ಏನು ಮಾನ್ಯ ಕತ್ತಿಯವರೇ ನೀವು ಕೂಡ ಅಲ್ಲಿ ಕುಳಿತುಕೊಂಡು ನೋಡಿದ್ದೀರಲ್ಲವೇ. ಮಾನ್ಯ ಉದಾಸಿಯವರು ಕೂಡ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನೋಡಿದ್ದಾರೆ. ಬಹಳ ಜನರು ನೋಡಿದ್ದಾರೆ. ಅವೆಲ್ಲವನ್ನು ಈಗ ಮರೆತು ಬಿಟ್ಟು ನಮಗೆ ಅಧಿಕಾರ ಸಿಕ್ಕಿದೆ ಎಂದು ಹೇಳಿ ನಾವು ಮಾಡಿರುವುದೇ ಸರಿ ಎಂದು ಹೊರಟರೆ ಜನರು ನಿಮಗೆ ಮುಂದೆ ತಕ್ಕ ಪಾಠವನ್ನು ಕಲಿಸುತ್ತಾರೆ. ನೀವು ಹುಷಾರಾಗಿರಬೇಕು. ನಾವು ಲೋಕಸಭೆ ಚುನಾವಣೆಯಲ್ಲಿ 19 ಸೀಟನ್ನು ಗೆದ್ದಿದ್ದೇವೆ, ಯಾರು ಏನು ಮಾಡುತ್ತಾರೆಂದು ನೀವು ಹೇಳಬಹುದು. 2/3rd ಸ್ಥಾನವನ್ನು ಗೆದ್ದವರ ಗತಿ ಏನಾಗಿದೆ, ಈ ರಾಜ್ಯದ ಇತಿಹಾಸ, ಈ ದೇಶದ ಇತಿಹಾಸಗಳನ್ನು ತಾವು ನೋಡಿಕೊಳ್ಳಬೇಕು. 0–180 ಸೀಟು ಗೆದ್ದವರ ಗತಿ ಏನಾಗಿದೆ. Operation Kamala ಮಾಡಿಕೊಂಡು ನೀವು ಅಲ್ಲಿ ಕುಳಿತಿರುವುದು. Operation Kamala ಇಲ್ಲದೆ ಇದ್ದರೆ ನಿಮಗೆ majority ಯೇ ಇಲ್ಲ. ನೀವು 110 ಸೀಟಿ ಮಾತ್ರ

ಗೆದ್ದಿರುವುದು. ಇನ್ನು 3 ಸೀಟು shortage ಇತ್ತು. Operation Kamala ಮಾಡಿಕೊಂಡು ಇವತ್ತು 114 ಸೀಟು ಮಾಡಿಕೊಂಡು ಕುಳಿತಿದ್ದೀರಿ. ನೀವು ವ್ಯವಸ್ಥೆಯನ್ನು ಹಾಳು ಮಾಡುವುದಕ್ಕೆ ಹೋಗಬೇಡಿ. ವಿಕೇಂದ್ರೀಕರಣ ವ್ಯವಸ್ಥೆಯನ್ನು ಹಾಳು ಮಾಡುವುದು, ಪ್ರಜಾತಂತ್ರದ ವ್ಯವಸ್ಥೆಯನ್ನು ಹಾಳು ಮಾಡುವುದು, ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯನ್ನು ಹಾಳು ಮಾಡುವುದು. ಇವೆಲ್ಲವನ್ನು ಮಾಡುವುದಕ್ಕೆ ಹೋಗಬೇಡಿ. ಅಮೇಲೆ ಪಾಪ ಹೆಚ್ಚಾಗಿ ಹೋಗುತ್ತಾ ಪಾಪದ ಕೊಡ ತುಂಬುವುದಕ್ಕೆ ಶುರು ಮಾಡಿದರೆ ಬಹಳ ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳುತ್ತೀರಿ. Operation J.D.S. ಶುರು ಮಾಡಿದ್ದೀರಾ?

ಶ್ರೀ ಉಮೇಶ್ ವಿ. ಕತ್ತಿ: ನೀವು ಈಗ Operation J.D.S. ಮಾಡುತ್ತಿದ್ದೀರಿ? ಸೀಟು ಹೊಂದಾಣಿಕೆಗೆ Operation J.D.S. ಮಾಡುತ್ತಿದ್ದೀರಿ. ಅದನ್ನು ತಾವು ಹೇಳಿ.

ಶ್ರೀ ಸಿದ್ಧರಾಮಯ್ಯ: ಅದು Operation ಆಗಲ್ಲ ಬಿಡಪ್ಪಾ:

ಶ್ರೀ ಉಮೇಶ್ ವಿ. ಕತ್ತಿ: Operation J.D.S.ಗೆ ಒಳಗಾಗಿರುವವರೇ ಇದರ ಬಗ್ಗೆ ಮಾತನಾಡುತ್ತಿರುವುದು. Operation J.D.S...

ಶ್ರೀ ಸಿದ್ಧರಾಮಯ್ಯ: ಬರೀ Operationಗೆ ನಿಂತಿಲ್ಲ. abortion ಕಡೆಗೆ ಹೊರಟು ಹೋಗಿದ್ದೀರಿ ಹುಷಾರಾಗಿರಿ. Abortion ಆಗುತ್ತದೆ. ಅಪರೇಷನ್ ಮಾಡಿ ಮಾಡಿ, ನಿಮಗೆ ಅಬಾರ್ಷನ್ ಆಗಿ ಬಿಡುತ್ತದೆ. ನಿಮಗೆ ಕೇವಲ ಅಪರೇಷನ್ ಕಮಲಗಳಿಂದಲೇ sustainability ಇರುವುದಿಲ್ಲ. ನೀವು ಹೋಗುವುದಿಲ್ಲ. ಹಾಗೆಂದು ನಮ್ಮ ಜೊತೆ ಮಾತನಾಡಿದ್ದೀರಿ, ಬಿಡಿ. ಅಧ್ಯಕ್ಷರೆ, ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ, ದಯಮಾಡಿ this is a very very serious issue, please come to our rescue, please protect this Institution, not Siddharmaiah. ಬೇಕಾದರೆ ನನ್ನ ಎಲ್ಲಾ ಸವಲತ್ತುಗಳನ್ನು ತೆಗೆದುಕೊಂಡು ಬಿಡಿ, ಕಾರು ತೆಗೆದುಕೊಳ್ಳಿ, ಮನೆಯನ್ನು ತೆಗೆದುಕೊಂಡು ಬಿಡಿ. I don't mind, ವಿರೋಧ ಪಕ್ಷ ಎಂದರೆ ಇವರ ತಲೆಯಲ್ಲಿ ನಾವು ಬಹಳ ಸುಖವಾಗಿರಬಹುದು ಎಂದು ಅಂದುಕೊಂಡು ಬಿಟ್ಟಿದ್ದಾರೆ, ಅದು reverse ಆಗುತ್ತದೆ, rebound ಆಗುತ್ತದೆಂದು ನಾವು ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ. ಏನು ಶ್ರೀನಿವಾಸ್ ನೀವೆಲ್ಲಾ ನೋಡಿದ್ದೀರಿ rebound ಆಗುತ್ತದೆ ಹುಷಾರಾಗಿರಿ, ಇದನ್ನೆಲ್ಲಾ ಮಾಡಲಿಕ್ಕೆ ಹೋಗಬೇಡಿ, ಮಾನ್ಯ ಅಧ್ಯಕ್ಷರೇ, ಅವರಿಗೆ ದಯಮಾಡಿ ನೀವು ರೂಲ್ಸ್ ತೆಗೆದುಕೊಂಡು ಬಂದು ಈ ಹಕ್ಕು

ಮೊಟಕು ಮಾಡುವಂಥ ಅಧಿಕಾರ ಇದೆಯಲ್ಲ ಇದರ ಬಗ್ಗೆ ಅವರಿಗೆ ಸರಿಯಾಗಿ ಸ್ವಲ್ಪ ಬುದ್ಧಿ ಹೇಳಿ, ಆ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳಲಿಕ್ಕೆ ಹೇಳಿ. ನೀವು un-democratic ಆಗಿ ನಡೆದುಕೊಂಡಿದ್ದೀರಿ, ಗೌರವಯುತವಾಗಿ ನಡೆದುಕೊಂಡು ಒಳ್ಳೆಯ, ಹೊಸ ಸತ್ಸಂಪ್ರದಾಯಗಳನ್ನು ಮಾಡಿ, ಈ ರೀತಿಯ ಕೆಟ್ಟ ಸಂಪ್ರದಾಯಗಳನ್ನು ಮಾಡಲಿಕ್ಕೆ ಹೋಗಬೇಡಿ ಎಂದು ಅವರಿಗೆ ಸ್ವಲ್ಪ ಬುದ್ಧಿ ಹೇಳಿ. ಅಧ್ಯಕ್ಷರೇ ದಯಮಾಡಿ ನಮಗೆ ರಕ್ಷಣೆ ಕೊಡಬೇಕು ಇಲ್ಲದಿದ್ದರೆ ನಾವು ಇಲ್ಲಿ ಇದ್ದು ಏನೂ ಪ್ರಯೋಜನವಾಗುವುದಿಲ್ಲ. ನೀವು ಬಹಳ ಕಠಿಣವಾಗಿ ಇರಬೇಕು. ಕಠಿಣವಾದ ಭಾಷೆಯಲ್ಲಿ ಹೇಳಬೇಕು. I have got all respect for you. I have confidence in you. ನಮಗೆ ನೀವು ಈ ಸದನದ ಗೌರವವನ್ನು ಎತ್ತಿ ಹಿಡಿಯುತ್ತೀರಿ. ಸತ್ಸಂಪ್ರದಾಯಗಳನ್ನು ಎತ್ತಿ ಹಿಡಿಯುತ್ತೀರಿ, ನಮ್ಮ ರಕ್ಷಣೆಯನ್ನು ಮಾಡುತ್ತೀರಿ ಎಂಬ ಸಂಪೂರ್ಣವಾದ ವಿಶ್ವಾಸ ನಿಮ್ಮಲ್ಲಿ ಇದೆ. ಆದುದರಿಂದ ದಯಮಾಡಿ ಇದಕ್ಕೆ ಚ್ಯುತಿ ಆಗದೇ ಇರುವ ರೀತಿಯಲ್ಲಿ, ಈ ಸ್ಥಾನಕ್ಕೆ, ಈ ಸಂಸ್ಥೆಗೆ ಚ್ಯುತಿ ಆಗದೇ ಇರತಕ್ಕಂಥ ರೀತಿಯಲ್ಲಿ ತಾವು ಮಾಡಬೇಕು. ಆ ನಿಯಮಾವಳಿಗಳನ್ನು ಕೂಡ ಬದಲಾವಣೆ ಮಾಡಬೇಕು ಜೊತೆಗೆ ಸರ್ಕಾರದ ಸುತ್ತೋಲೆ ಏನಿದೆ, ಅದಕ್ಕೆ ನನ್ನ ಪ್ರಕಾರ ಅವರಿಗೆ ಛೀಮಾರಿ ಹಾಕಬೇಕು. ನೀವು ಛೀಮಾರಿ ಹಾಕಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅವರಿಗೆ ನೀವು ಛೀಮಾರಿ ಹಾಕಬೇಕು ನೀವು ಮಾಡಿರುವುದು ತಪ್ಪು, ನೀವು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದೀರಿ, ಈ ಸಂಸದೀಯ ವ್ಯವಸ್ಥೆಗೆ ವಿರುದ್ಧವಾಗಿ ಮಾಡಿದ್ದೀರಿ ಎಂದು ಹೇಳಿ ನೀವು ಛೀಮಾರಿ ಹಾಕಬೇಕು, ಇಷ್ಟನ್ನು ಹೇಳಿ ಮಾನ್ಯ ಅಧ್ಯಕ್ಷರೇ ದಯಮಾಡಿ ನಮ್ಮ ರಕ್ಷಣೆ ಮಾಡಬೇಕು ಅವರಗೆ ನೀವು ಆದೇಶ ಮಾಡಬೇಕು, ಜೊತೆಗೆ ನೀವು ರೂಲ್ಸ್‌ಗಳನ್ನೆಲ್ಲಾ ಮಾಡಿ ಮುಂದೆ ಈ ರೀತಿ ಆಗದೇ ಇರುವ ರೀತಿಯಲ್ಲಿ ದಯಮಾಡಿ ನೀವು ತೀರ್ಮಾನ ಮಾಡಬೇಕು ಎಂದು ಹೇಳಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿ ಇದನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ನಾವು ಒಂದು ಗಂಟೆಯಲ್ಲಿ ಮುಗಿಸಬೇಕೆಂದು ವಿಚಾರ ಮಾಡಿದ್ದೆವು.

ಶ್ರೀ ಹೆಚ್.ಡಿ. ರೇವಣ್ಣ: ನಾನು ಈ ವಿಷಯದ ಬಗ್ಗೆ ಒಂದೆರಡು ನಿಮಿಷ ಮಾತನಾಡುತ್ತೇನೆ.

ಶ್ರೀ ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಇದು ಅಲ್ಪ ಕಾಲಾವಧಿ ಚರ್ಚೆ, ಇದನ್ನು ಒಂದು ಸೀಮಿತ ಕಾಲಾವಧಿಯಲ್ಲಿ ಮುಗಿಸಬೇಕು. ಈಗಲಾಗಲೇ ವಿರೋಧ ಪಕ್ಷದ ನಾಯಕರು ಬಹಳ ದೀರ್ಘವಾಗಿ ಮಾತನಾಡಿದ್ದಾರೆ. ಇದನ್ನು ನಿಯಮ 69ರಡಿ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ರೇವಣ್ಣನವರು ನಿಂತಿದ್ದಾರೆ, ಅವರನ್ನು ಹೇಗೆ deny ಮಾಡುತ್ತೀರಿ ನೀವು? See ಸದನದಲ್ಲಿ we should come to some understanding. ಇದನ್ನೂ ಕೂಡ ನಾವು ನಿಯಮ 60 ಅನ್ನು ನಿಯಮ 69ರ ರೀತಿಯಲ್ಲಿ ಚರ್ಚೆ ಮಾಡುತ್ತಾ ಹೋದರೆ ಹೇಗೆ? ಈಗ lunch ಗೆಂದು adjourn ಮಾಡಬೇಕು. ನಾವು ಇನ್ನೂ ಯಾವಾಗ ತೆಗೆದುಕೊಳ್ಳುವುದು? ನೀವು ಇದನ್ನು ಬಹಳ ವಿಸ್ತಾರವಾಗಿ ತೆಗೆದುಕೊಂಡಿದ್ದೀರಿ? ವಾಪಸ್ಸು ತೆಗೆದುಕೊಳ್ಳುವುದು ಬಹಳ ಸುಲಭ, ಅದಲ್ಲ ಪ್ರಶ್ನೆ, ನಾನು ಪ್ರತಿಪಕ್ಷದ ನಾಯಕರಲ್ಲಿ ಕೇಳುವುದು ನೀವು ಬಹಳ ವಿಸ್ತಾರವಾಗಿ ಮಾತನಾಡಿದ್ದೀರಿ, ಸರ್ಕಾರಕ್ಕೆ ಉತ್ತರ ಕೊಡಲಿಕ್ಕೆ ಬಿಡಿ. ಸಿದ್ಧರಾಮಯ್ಯನವರೇ, this is not proper ಅಷ್ಟೇ.

ಅಧ್ಯಕ್ಷರು: ಜಯಚಂದ್ರರವರೇ, ವಿರೋಧ ಪಕ್ಷದ ನಾಯಕರು detail ಆಗಿ ಮಾತನಾಡಿದ್ದಾರೆ, ನೀವು ಐದು ನಿಮಿಷ, ರೇವಣ್ಣನವರು ಐದು ನಿಮಿಷ ಮಾತನಾಡಿ ಮುಗಿಸಿ, ರೇವಣ್ಣ ಅವರು ಮಾತನಾಡಿದ ನಂತರ ನೀವು ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಸುದೀರ್ಘವಾಗಿ ಬೋಧನೆಯನ್ನು ಮಾಡಿದ್ದಾರೆ. ಬಹುಶಃ ನೀವು ಅವರ ಮಾತನ್ನು ಕೇಳಿದ ಮೇಲೆ ಈ ನಿದ್ದೆಯಿಂದ ಹೊರಗಡೆ ಬರುತ್ತೀರಿ ಎಂದು ಹೇಳಿ ನಾವು ಭಾವಿಸಿದ್ದೆವು. ನಿದ್ದೆಯಿಂದ ಒಬ್ಬರೂ ಹೊರಗಡೆ ಬರಲಿಲ್ಲ. ಇದರಿಂದ ನಮಗೇನು ಅರ್ಥವಾಗುತ್ತದೆಂದರೆ ನೀವು ನಿದ್ದೆ ಮಾಡುವ ರೀತಿಯಲ್ಲಿ ನಟನೆ ಮಾಡುತ್ತಿದ್ದೀರಿ, ಅದರಿಂದ ನಿಮ್ಮನ್ನು ಹೊರಗಡೆ ತರಿಸುವಂಥದ್ದು ಬಹಳ ಕಷ್ಟದ ಕೆಲಸ ಎಂದು ಕೂಡ ನಮಗೆ ಗೊತ್ತಿದೆ. ಸಭಾಧ್ಯಕ್ಷರೇ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ಸ್ಥಾನಮಾನವಿರಲಿ, ಮುಖ್ಯಮಂತ್ರಿ ಸ್ಥಾನವಿರಬಹುದು, ವಿರೋಧ ಪಕ್ಷದ ಸ್ಥಾನವಿರಬಹುದು ಅವು ಮಹತ್ತರವಾಗಿರತಕ್ಕಂಥ ಸ್ಥಾನವನ್ನು ಪಡೆದಿರತಕ್ಕಂಥವು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ನಮ್ಮ ಪ್ರತಿಪಕ್ಷದ ನಾಯಕರುಗಳಿಂದ ನಿರೀಕ್ಷೆ ಮಾಡುತ್ತಿರುವುದು ಸ್ವಾತಂತ್ರ್ಯ ಬಂದ ಮೇಲೆ, ಈ democracy ವ್ಯವಸ್ಥೆ ಆದ ಮೇಲೆ ಪ್ರತಿ ಪಕ್ಷದ ಸ್ಥಾನ ಮಾನಗಳೇನು? ಆಡಳಿತ ಪಕ್ಷದ ಸ್ಥಾನಮಾನಗಳೇನು? ಎಂಬುದು ಸ್ಪಷ್ಟವಾಗಿ ಸಂವಿಧಾನದಲ್ಲಿದೆ. ನಾವು ಸಹ ಬೇರೆ ಬೇರೆ ರಾಜ್ಯಗಳಲ್ಲಿ ಪ್ರತಿ ಪಕ್ಷದಲ್ಲಿದ್ದೇವೆ, ಕೆಲವು ಕಡೆ ನೀವು ಸಹ ಆಡಳಿತ ಪಕ್ಷದಲ್ಲಿದ್ದೀರಿ. ಸಂಸತ್‌ನಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ ಇದೆ, ನೀವು ಆಡಳಿತ ಪಕ್ಷದಲ್ಲಿರುವವರು. ಯಡಿಯೂರಪ್ಪ ನವರೇ, ನಾವು ಅಧಿಕಾರದಲ್ಲಿದ್ದ ಕಾಲದಲ್ಲಿ ಪ್ರತಿಪಕ್ಷಕ್ಕೆ ಇಂಥ ಸ್ಥಾನಮಾನವನ್ನು ಕೊಟ್ಟಿದ್ದೆವು. ನೀವು ಬಂದ ಮೇಲೆ ಕಿತ್ತುಕೊಂಡಿದ್ದೀರಿ, ಈ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ನಾವು ಕೊಟ್ಟಿದ್ದೇವೆ. ನೀವು ಕೊಟ್ಟಿದ್ದೀರಿ, ಲೋಕಸಭೆ ಪ್ರತಿಪಕ್ಷದ ನಾಯಕರು, ಆಡಳಿತ ಪಕ್ಷದ ಪ್ರಧಾನಿಯವರು ಇದ್ದಾರೆ. ಅಲ್ಲಿ ಇಂತಿಂಥ ಸವಲತ್ತುಗಳನ್ನು ಕೊಟ್ಟಿದ್ದೇವೆ, ನೀವು ಯಾಕೆ ಕೊಡುವುದಿಲ್ಲವೆಂದು ಹೇಳಿದರೆ, ಅದನ್ನು enlighten ಮಾಡಿದರೆ, ಐದು ನಿಮಿಷದಲ್ಲಿ ನಿಮ್ಮ ಸಮಸ್ಯೆಗೆ ಉತ್ತರ ಸಿಗುತ್ತದೆ, ಇದನ್ನು ಬಗೆ ಹರಿಸಬಹುದು. At least ಜಯಚಂದ್ರರವರಿಂದ ಇದನ್ನು ನಾನು ನಿರೀಕ್ಷೆ ಮಾಡುತ್ತೇನೆ. ನಾನು ಪ್ರತಿಪಕ್ಷದ ನಾಯಕನಾಗಿ ಅಲ್ಲಿ ಕೆಲಸ ಮಾಡಿದ್ದೇನೆ, ನನ್ನ ಅನುಭವ ಇಲ್ಲಿ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ನೀವು ಹೇಳಿ, 1, 2, 3, 4 ಕೊಟ್ಟಿದ್ದೆವು, 1, 2, 3, 4 ಅನ್ನು ನೀವು ಕಿತ್ತುಕೊಂಡಿದ್ದೀರಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎನ್. ಯೋಗೀಶ್‌ಭಟ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಇದು ಚರ್ಚೆಗೆ ಹೆಚ್ಚು ಅನುಕೂಲವಾಗುತ್ತದೆ, ಇಲ್ಲದಿದ್ದರೆ ಏನಾಗುತ್ತದೆಂದರೆ ನನ್ನ ವಿನಂತಿಯೇನೆಂದರೆ ಯಾವ ಸದುದ್ದೇಶದಿಂದ ಈ ಬಜೆಟ್ ಅಧಿವೇಶನ ನಡೆಯಬೇಕೋ, ಬಜೆಟ್ ಪಾಸಾಗುವುದಕ್ಕೆ ಮುಂಚೆ ಇಲಾಖೆಗಳ ಬಗ್ಗೆ ವಿವರವಾಗಿ ಚರ್ಚೆಯಾಗಿ ಇಲಾಖೆಗಳಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದನ್ನು ಸರಿಪಡಿಸಿಕೊಳ್ಳುವಂಥ ಮಹತ್ವವಾದಂಥ ಕೆಲಸ ಈ ಅಧಿವೇಶನದಲ್ಲಿ ಈ ನಿಮಿಷದವರೆಗೆ ಅದರ ಪ್ರಸ್ತಾಪವೇ ಪ್ರಾರಂಭವಾಗಲಿಲ್ಲ. ಬಹುಶಃ ಅದರಲ್ಲಿ ಏನೂ ಮಾತನಾಡಲಿಕ್ಕೆ ಇಲ್ಲವೆಂದು ಹೀಗೆ ಇನ್ನೆರಡು ದಿವಸ ಕಾಲಹರಣ ಮಾಡಬೇಕೆಂದು ಇದ್ದರೆ ನನ್ನದೇನೂ ವಿರೋಧವಿಲ್ಲ. ಅದನ್ನು ಸದುದ್ದೇಶದಿಂದ ಮಾಡುತ್ತಿದ್ದರೆ ನನ್ನ ವಿರೋಧವಿಲ್ಲ. ಇಲ್ಲಿ ಚರ್ಚೆ ಮಾಡಲಿಕ್ಕೆ ನಿಮಗೆ

ಸಂಪೂರ್ಣವಾದ ಅಧಿಕಾರ ಇದೆ. ಅಧ್ಯಕ್ಷರು ಎಲ್ಲಿಯವರೆಗೆ ಅವಕಾಶ ಕೊಡುತ್ತಾರೋ ಅಲ್ಲಿಯವರೆಗೆ ಮಾತನಾಡಿ, ಇವತ್ತು ಸಾಯಂಕಾಲದವರೆಗೆ ಮಾತನಾಡಿ ನಮ್ಮದೇನೂ ಅಭ್ಯಂತರವಿಲ್ಲ. ಸನ್ಮಾನ್ಯ ಸುರೇಶ್‌ಕುಮಾರ್‌ರವರು ಸವಿಸ್ತಾರವಾಗಿ ಉತ್ತರವನ್ನು ಕೊಡುತ್ತಾರೆ ಆದರೆ ನಮಗೆ ಉದಾಹರಣೆಯನ್ನು ಕೊಟ್ಟರೆ ನಾವು ಸರಿಪಡಿಸಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ಛೇರ್‌ಮನ್‌ರವರೇ, ಇಷ್ಟೊಂದು ಹೊತ್ತು ಮಾತನಾಡಿದಾಗ, ಮಾನ್ಯ ಮುಖ್ಯಮಂತ್ರಿಗಳ ಬಾಯಿಯಿಂದ ಬಂದಂಥ ಮಾತನ್ನು ನೋಡಿದರೆ ಬಹುಶಃ ಪ್ರಜಾಪ್ರಭುತ್ವದ ಆ ತತ್ವಗಳು, ಸಿದ್ಧಾಂತಗಳು, ನೀತಿಗಳು, ನಿರೂಪಣೆಗಳು ಯಾವುದೂ ಕೂಡ ಅವರ ಮನಸ್ಸಿಗೆ ಹೋಗಿದೆ ಎಂದು ನಾನು ಭಾವಿಸಿಲ್ಲ. ಒಂದು ಏನೆಂದರೆ, ಇವತ್ತು ನಾವು ನಿಂತು ವಿರೋಧ ಪಕ್ಷಗಳ ಸ್ಥಾನಮಾನ ಏನು ಎನ್ನುವ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ. ಆ ಸ್ಥಾನಮಾನದ ಬಗ್ಗೆ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇತ್ತೇ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಇವತ್ತು ಸಭೆಯ ಚೌಕಟ್ಟಿನೊಳಗೆ ಒಂದೇ ಮಾತಲ್ಲಿ ಹೇಳಬೇಕೆಂದರೆ, ವಿರೋಧ ಪಕ್ಷದ ನಾಯಕರಾಗಿ ಇರತಕ್ಕಂಥವರು, he is like a watch dog ಎನ್ನುವ ಮಾತನ್ನು ಹೇಳಿದ್ದಾರೆ. ವಾಚ್ ಡಾಗ್ ಎಂದರೆ ಏನರ್ಥ? ವಾಚ್ ಡಾಗ್ ಎಂದರೆ, ಸರ್ಕಾರದ ಎಲ್ಲಾ ರೀತಿಯ ಚಲನವಲನವನ್ನು ಗಮನದಲ್ಲಿಟ್ಟುಕೊಂಡು ವಾಚ್ ಮಾಡುತ್ತಾ ಇರತಕ್ಕಂಥದ್ದು. ಏನಾದರೂ ಹೆಚ್ಚು ಕಡಿಮೆ ಆದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸ್ಥಾನವನ್ನು ಪಡೆಯತಕ್ಕಂಥ ರೀತಿಯಲ್ಲಿ ಹೋರಾಟ ಮಾಡಬೇಕಾಗುತ್ತದೆ. ಇದು ವಿರೋಧ ಪಕ್ಷ. He is a shadow of Chief Minister ಎಂದು ಹೇಳಿದರೆ, ಅವರ ಪವರ್ಸ್ ಬಗ್ಗೆ, duties ಬಗ್ಗೆ, functions ಬಗ್ಗೆ ನೀವು ಒಂದು circular ಮೂಲಕ ಆದೇಶ ಮಾಡಬೇಕೇ? ಏನು ಇದು? democracy ಎಂದರೆ ನಾವು ಇಲ್ಲಿ ಕುಳಿತಿರತಕ್ಕಂಥವರು ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೋಸ್ಕರ ಕುಳಿತಿದ್ದೇವೆ. ಯಾರಿಗೂ ಕೂಡ ಇದು ಶಾಶ್ವತ ಅಲ್ಲ. ಈಗ 5 ವರ್ಷ ಒಬ್ಬರು ಇರಬಹುದು, ನಾಳೆ ಇನ್ನೊಬ್ಬರು ಬರಬಹುದು. ಬಹುಶಃ ಕೆಲವು ದಿನಗಳು ಕಳೆದ ಮೇಲೆ ಅಥವಾ ಯಾವಾಗಲಾದರೂ ಕೂಡ ಈ ಕಡೆಯವರು ಆ ಕಡೆಯಾಗಬಹುದು, ಆ ಕಡೆ ಇರುವವರು ಈ ಕಡೆಯಾಗಬಹುದೇ ವಿನಃ ಆ ಘನತೆ ಇರತಕ್ಕಂಥದ್ದು ಇದೆಯೆಲ್ಲಾ, ಮಾನ್ಯ ಮುಖ್ಯಮಂತ್ರಿ ಅಥವಾ ವಿರೋಧ

ಪಕ್ಷದ ಘನತೆ ಇದೆಯೆಲ್ಲಾ, ಗೌರವ ಇದೆಯೆಲ್ಲಾ ಅದನ್ನು ಕಾಪಾಡಿಕೊಂಡು ಬರುವುದು ಎಲ್ಲಾ ರಾಜಕೀಯ ಪಕ್ಷದವರ ಜವಾಬ್ದಾರಿ ಮತ್ತು ಕರ್ತವ್ಯ. ಮಾನ್ಯ ಅಧ್ಯಕ್ಷರೆ, ಈ ಮನೆಗೆ 100 ವರ್ಷಕ್ಕೂ ಹೆಚ್ಚಿನ ಇತಿಹಾಸವಿದೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆಯಿಂದಲೂ ಕೂಡ, ಈ ದೇಶಕ್ಕೆ, ಈ ಸಭೆಯ ನಡವಳಿಕೆಗಳಿಗೆ ಹೆಚ್ಚಿನ ಒಂದು ಘನತೆ, ಗೌರವವಿದೆ. ಇಡೀ ದೇಶದಲ್ಲಿ ಕರ್ನಾಟಕದ ಈ ಚರಿತ್ರೆಯನ್ನು ಹಾಡುತ್ತಾರೆ, ಹೊಗಳುತ್ತಾರೆ ಹಾಗೂ ಪ್ರಶಂಸೆ ಮಾಡುತ್ತಾರೆ. ಅನೇಕ ಸಮಸ್ಯೆಗಳು ಬಂದಾಗ ಇವತ್ತು ನಾವು ಅದನ್ನು refer ಮಾಡುತ್ತೇವೆ. ಇಂತಹ ವಿಚಾರದಲ್ಲಿ ಇವತ್ತು ನಾವು ಚರ್ಚೆ ಮಾಡುತ್ತಿರುವುದು, ಅಂದರೆ, ನಾವು ಪ್ರಜಾಪ್ರಭುತ್ವವನ್ನು ನಿಜವಾಗಲೂ ಕೂಡ ಅರಿತಿದ್ದೇವೆಯೇ ಅಥವಾ ಇಲ್ಲವೇ ಎನ್ನುವ ರೀತಿಯಲ್ಲಿ ಇವತ್ತು ಚರ್ಚೆ ಮಾಡಲಾಗುತ್ತಿದೆ. ಬಹುಶಃ ನನಗೆ ಅನಿಸಿದ ಪ್ರಕಾರ ನಾವು ಯಾವತ್ತೂ ಕೂಡ ಈ ಸಭೆಗೆ ಈ ಸದನಕ್ಕೆ ಪ್ರವೇಶ ಮಾಡುವಾಗ ಪ್ರಮಾಣ ವಚನ ಸ್ವೀಕಾರ ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಆಗಿರತಕ್ಕಂಥವರು ಪ್ರಮಾಣ ವಚನ ಸ್ವೀಕಾರ ಮಾಡುವಂಥ ಸಂದರ್ಭದಲ್ಲಿ ಯಾವುದೇ ರಾಗ-ದ್ವೇಷ ಏನೂ ಇಲ್ಲದೇ ಕೆಲಸ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಜನರ ಎದುರಿಗೆ ಪ್ರಮಾಣ ಮಾಡಿ ಬರುತ್ತಾರೆ. ಆದರೆ, ಇಲ್ಲಿ ಬಂದ ಮೇಲೆ ನಡೆಯುತ್ತಿರುವ ದೃಶ್ಯ. ವಿರೋಧ ಪಕ್ಷದ ಸ್ಥಾನಮಾನಗಳ ಬಗ್ಗೆ ಮತ್ತೆ ಮತ್ತೆ ಹೇಳಬೇಕೇ? ಬಹುಶಃ ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು, ಒಂದೇ ಒಂದು ಶಬ್ಧವನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. If you were to go merely by a majority, ನಿಮಗೆ ಬಹು ಮತ ಇದೆ ಎನ್ನುವ ಒಂದೇ ಕಾರಣಕ್ಕೋಸ್ಕರ ನೀವು ಹೇಳುವ ಹಾಗೆ ಅದು ನಡೆಯುವುದಾದರೆ "We shall be fostering the seeds of fascism, violence and revolt". ಇದು ಶ್ರೀ ಬಿ.ಜಿ. ಮಾವಳಂಕರ್‌ರವರು ಮೊದಲು ಲೋಕ ಸಭಾ ಅಧ್ಯಕ್ಷರು ಹೇಳಿದಂಥ ಮಾತು. ಈ ಮಾತನ್ನು ನಾವು ಎಲ್ಲಾ ಕಾಲಕ್ಕೂ ನೆನಪಿಸಿಕೊಳ್ಳಬೇಕು. ಬಹುಶಃ ಶ್ರೀ ಬಿ.ಜಿ. ಮಾವಳಂಕರ್‌ರವರು ಈ ಮಾತನ್ನು ಹೇಳಬೇಕಾದಾಗ ಎಲ್ಲೋ ಒಂದು ಕಡೆಗೆ ಅವರಿಗೆ ಇಂತಹ ಒಂದು ಸರ್ಕಾರ ಬರುತ್ತದೆ, ಇಂತಹ ಪರಿಸ್ಥಿತಿ ಬರಬಹುದು ಎನ್ನುವ ದೃಷ್ಟಿಯಲ್ಲಿ ಈ ಮಾತನ್ನು ಹೇಳಿದ್ದಾರೆ ಎನ್ನುವ ಭಾವನೆ ನನಗೆ ಆಗುತ್ತಿದೆ. ಆದ್ದರಿಂದ, ಪ್ರಜಾಪ್ರಭುತ್ವದ ವ್ಯವಸ್ಥೆ ಎಷ್ಟು ಮಹತ್ವದ್ದು ಎನ್ನತಕ್ಕಂಥದ್ದು ಹಾಗೂ ಈ ಮನೆಯ ಗೌರವವನ್ನು ಕಾಪಾಡತಕ್ಕಂಥದ್ದು

ಇವತ್ತು ಸಭಾಧ್ಯಕ್ಷರಿಗೆ ಬಿಟ್ಟಂಥ ವಿಚಾರಗಳಾಗಿರುತ್ತದೆ. ಆದರೆ, ನಾವು ಚರ್ಚೆ ಮಾಡುತ್ತಿರುವ ವಿಚಾರವನ್ನು ನಾವು ಲೆಕ್ಕ ಹಾಕಿದಾಗ ಎಲ್ಲೋ ಒಂದು ಕಡೆಗೆ ನಮಗೆ ಭಾವನೆ ಏನು ಬರುತ್ತದೆ ಎಂದರೆ we are exhibiting the immaturity of administration ಎನ್ನತಕ್ಕಂಥ ಭಾವನೆ ಬರುತ್ತದೆ. ಈ immaturityಯನ್ನು ತೋರಿಸತಕ್ಕಂಥದ್ದನ್ನು ಜನರು ನೋಡುತ್ತಿದ್ದಾರೆ. ವಿರೋಧ ಪಕ್ಷದ ಸ್ಥಾನಮಾನಗಳ ಬಗ್ಗೆ ಎಲ್ಲೋ ಸಾಕಷ್ಟು ಚರ್ಚೆಯಾಗಿಲ್ಲ. ಪಾರ್ಲಿಮೆಂಟ್‌ನಲ್ಲೂ ಕೂಡ ಹೆಚ್ಚು ಚರ್ಚೆಯಾಗಿಲ್ಲ. ಅಂತಹದರಲ್ಲಿ ಇವತ್ತು ಕರ್ನಾಟಕದಲ್ಲಿ ಚರ್ಚೆಯಾಗುತ್ತಿದೆ ಎಂದರೆ ಇದಕ್ಕೆ ಅರ್ಥವಿದೆಯೇ? ಏನು ಇದು circular? ಅದು ಯಾವತ್ತೂ ಇಲ್ಲದೇ ಇರುವಂಥದ್ದು, ಈಗ circular ಮಾನ್ಯ ಛೇರ್‌ಮನೆರವರೇ, ಒಂದು ಮುಖ್ಯವಾದ ವಿಚಾರವನ್ನು ಗಮನಿಸಬೇಕಾದ್ದು ಏನೆಂದರೆ, ಬಹುಶಃ ಕರ್ನಾಟಕದಲ್ಲಿ ಕಳೆದ 60 ವರ್ಷಗಳಲ್ಲಿ ಇಷ್ಟೊಂದು ದೊಡ್ಡದಾಗಿರತಕ್ಕಂಥ ವಿರೋಧ ಪಕ್ಷವನ್ನು ಪಡೆಯುವಂಥ ಅವಕಾಶ ಯಾವತ್ತೂ ಕೂಡ ಆಗಿರಲಿಲ್ಲ. ಇವತ್ತು ನಮ್ಮ ಸ್ಥಾನಮಾನಗಳಲ್ಲಿ ಸುಮಾರು 100ಕ್ಕೆ ಹತ್ತಿರವಾಗಿ ನಾವಿದ್ದೇವೆ. 114–115 ನೀವು ಇದ್ದೀರಿ. ನಮಗೂ ನಿಮಗೂ ವ್ಯತ್ಯಾಸವಿರುವುದು ಕೇವಲ 15–16 ಸಂಖ್ಯಾಬಲವೇ ವಿನಃ ಬೇರೆ ಏನೂ ಅಲ್ಲ. ಆದರೆ 15–16 ವ್ಯತ್ಯಾಸವಿರುವುದರಿಂದ ಈ ಕಡೆಯಾದರೂ ಆಗಬಹುದು, ಆ ಕಡೆಯಾದರೂ ಆಗಬಹುದು. ಮುಂದಿನ ದಿನಗಳಲ್ಲಿ ಏನು ಆಗುತ್ತದೆ ಎಂದು ಹೇಳುವುದಕ್ಕೆ ಬರುವುದಿಲ್ಲ. ಆದರೆ, ನಮ್ಮಿಂದ ಏನೂ ತೊಂದರೆಯಿಲ್ಲ. ನಿಮ್ಮಲ್ಲೇ ತೊಂದರೆ. ನಮ್ಮಿಂದ ಯಾವುದೇ ರೀತಿಯಲ್ಲೂ ಸಹ ತೊಂದರೆಯಾಗುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಯಡಿಯೂರಪ್ಪನವರು ಆ ಕುರ್ಚಿಯಲ್ಲಿ 5 ವರ್ಷಗಳ ಕಾಲ ಸತತವಾಗಿ ಕುಳಿತುಕೊಂಡು ರೈತರ ಬಗ್ಗೆ ಇರುವ ಸಮಸ್ಯೆಗಳನ್ನು ಬಿಡಿಸಬೇಕು ಎನ್ನುವಂಥ ಆಸೆ ನಮಗೆ ಇದೆ. ಆದರೆ, ನಡೆಯುತ್ತಿರುವಂಥ ವಿದ್ಯಮಾನಗಳನ್ನು ನೋಡಿದರೆ ನನಗೆ ಎಲ್ಲೋ ಒಂದು ರೀತಿಯಲ್ಲಿ ಅನುಮಾನ ಬರುತ್ತದೆ. ಆ ಕಾರಣಕ್ಕೋಸ್ಕರ ಈ ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ಛೇರ್‌ಮನ್‌ರವರೇ, ಇವರು ಹೊರಡಿಸಿರುವ circular ಏನು? Circular ಹೊರಡಿಸತಕ್ಕಂಥ ಅಧಿಕಾರ ಯಾರಿಗೆ ಇದೆ? ಬಹುಶಃ ಈ ಮನೆಯನ್ನು ನಡೆಸಬೇಕಾದರೆ, ಅದರಲ್ಲೂ ವಿರೋಧ ಪಕ್ಷದ ಸ್ಥಾನಮಾನಗಳೇನು ಎನ್ನುವುದನ್ನು ನಿರ್ಧಾರ ಮಾಡಬೇಕಾದಾಗ ಸಭಾಧ್ಯಕ್ಷರಾಗಿರತಕ್ಕಂಥವರು ಅದನ್ನು ಆದೇಶ ಮಾಡಬೇಕು.

ನಮ್ಮ Legislature Secretary ಆಗಿರತಕ್ಕಂಥವರು ಇದನ್ನು ವಿಚಾರ ಮಾಡಬೇಕೇ ವಿನಃ ಒಬ್ಬ ಆಡಳಿತ ಮಾಡುತ್ತಿರತಕ್ಕಂಥ Chief Secretary ಅಲ್ಲ. ಈಗ ಇಕ್ಕಟ್ಟಿನ ಪರಿಸ್ಥಿತಿ ಏನೆಂದರೆ, ನಾವು ಇದನ್ನು ಖಡಾಖಂಡಿತವಾಗಿ ವಿರೋಧ ಮಾಡಬೇಕೇ ಎನ್ನುವುದಾದರೆ ಪೀಠಿಕೆಯಲ್ಲಿ ಮೊದಲನೇಯದಾಗಿ ಈ ರೀತಿ ಹಾಕಿದ್ದಾರೆ. ಏನೆಂದರೆ, 'ವಿಧಾನ ಸಭೆಯ ಅಧ್ಯಕ್ಷರು ಮತ್ತು ವಿಧಾನ ಪರಿಷತ್ತಿನ ಸಭಾಪತಿಗಳ ಸಮಾಲೋಚನೆ". ನಾವು ಈಗ ಯಾರಿಗೆ ಬುದ್ಧಿವಾದ ಹೇಳಬೇಕು? ಸರ್ಕಾರಕ್ಕೆ ಹೇಳಬೇಕೇ ಅಥವಾ ಕುರ್ಚಿಗೆ ಹೇಳುವುದಲ್ಲ, ಕುರ್ಚಿಗೆ request ಮಾಡಬೇಕು. ಇವತ್ತು ನಿಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿದ್ದೇವೆ. ಆದೇಶವನ್ನು ಹೊರಡಿಸಿದ್ದೇವೆ ಎಂದು ಹೇಳಿದರೆ ಏನು? ಅದನ್ನು ಹೇಳಿದ್ದಾರೋ ಕೇಳಿದ್ದಾರೋ ಅಥವಾ ಬಿಟ್ಟಿದ್ದಾರೋ ನನಗಂತೂ ಗೊತ್ತಿಲ್ಲ. ಬಹುಶಃ ನಾನು ಅಂದುಕೊಂಡಿರುವುದು ಏನೆಂದರೆ, ಬಹುಶಃ ನಿಮ್ಮ ವಿವೇಚನೆಗೆ ಬಿಟ್ಟಿದ್ದರೆ ಇಂತಹ ಒಂದು circular ಗಳು ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲ ಸ್ವಾಮಿ, ಈ crcular ಅನ್ನು ಒಬ್ಬರು Chief Secretary ಮಾಡುತ್ತಾರೆ ಎಂದರೆ ಇದಕ್ಕೆ ಏನಾದರೂ ಅರ್ಥವಿದೆಯೇ? ಯಾರು ಈ Chief Secretary? ನಮ್ಮ ಅಧಿಕಾರವನ್ನು ಮೊಟಕುಗೊಳಿಸುವಂಥದ್ದು ಏನು ಇದು? ನಮಗೆ ಬೋಧನೆ ಮಾಡತಕ್ಕಂಥವರು ಇವರು ಯಾರು? ಇಷ್ಟು ದೊಡ್ಡ circular ಅನ್ನು ಮಾಡುತ್ತೀರಲ್ಲಾ, Circularನಲ್ಲಿ ನಾವು ಪಾಲಿಸುವಂಥ ಒಂದು ಶಬ್ಧವೇನಾದರೂ ಇದೆಯೇ? ಒಂದು ಶಬ್ಧವಿಲ್ಲದೇ ಇರತಕ್ಕಂಥ ಒಂದು ದೊಡ್ಡ circular ಮಾಡಿದ್ದಾರೆ. ಒಂದು message ಏನು ಎಂದರೆ, ವಿರೋಧ ಪಕ್ಷದವರು ಇವತ್ತು ಏನೋ ಒಂದು ರೀತಿಯಲ್ಲಿ ಹದ್ದು ಮೀರಿ ಹೋಗುತ್ತಿದ್ದಾರೆ. ಅವರನ್ನು ಹದ್ದುಬಸ್ತಿನಲ್ಲಿ ಇಡುವುದಕ್ಕೋಸ್ಕರ ನಾವು ಮಾಡುತ್ತಿದ್ದೇವೆ. ಅವರಿಗೆ ಯಾವುದೇ ಅಧಿಕಾರವಿಲ್ಲ ಎಂದು ಹೇಳುವಂಥ ರೀತಿಯಲ್ಲಿ circular ತರುವುದಾದರೆ ಇದು ಒಂದು ಪ್ರಜಾಪ್ರಭುತ್ವವೇ ಎನ್ನುವ ಮಾತನ್ನು ಹೇಳುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವತ್ತು ನೀವು ಕೆಲಸ ಮಾಡುತ್ತಿದ್ದೀರಾ? ಈ ಮನೆಯ ಘನತೆ ಏನು, ಗೌರವವೇನು ಎನ್ನುವ ಪ್ರಶ್ನೆ ಬರುತ್ತದೆ. ಮಾನ್ಯ ಛೇರ್‌ಮನ್‌ರವರೇ, ಬಹುಶಃ ವಿರೋಧ ಪಕ್ಷದ ನಾಯಕರಾಗಿ ಕುಳಿತಿದ್ದಂಥವರು ಇವತ್ತು ಮಾನ್ಯ ಮುಖ್ಯ ಮಂತ್ರಿಗಳಾಗಿರುವಾಗ ಎಲ್ಲೋ ಒಂದು ಕಡೆ ಪಾರ್ಲಿಮೆಂಟ್‌ನಲ್ಲೂ ಕೂಡ ಚರ್ಚೆಯಾಗಲಿಲ್ಲ. ಬೇರೆ ರಾಜ್ಯದಲ್ಲೂ ಕೂಡ ಚರ್ಚೆಯಾಗಿಲ್ಲ. ವಿರೋಧ ಪಕ್ಷಗಳಿಗೆ ಹೆಚ್ಚು

ಸ್ಥಾನಮಾನಗಳನ್ನು ಕೊಡತಕ್ಕಂಥ ರೀತಿಯಲ್ಲಿ ನಾವು ಒಂದು ಬಿಲ್ ತರುತ್ತಿದ್ದೇವೆ ಎನ್ನುವ ರೀತಿಯಲ್ಲಿ ತಂದಿದ್ದರೆ ಅದನ್ನು ಬಹಳ ಮೆಚ್ಚಬಹುದಾಗಿತ್ತು. ಆದರೆ, ಅದನ್ನು ಏನೂ ಮಾಡದೇ ಒಂದು circular ತಂದಿದ್ದಾರೆ. ಆ circular ಅನ್ನು ತರಿಸಿ ಓದಿ ಸ್ವಾಮಿ. ನಾನು ಮೇಲಿಂದ ಕೆಳಗೆ ಹಾಗೂ ಕೆಳಗಿನಿಂದ ಮೇಲಕ್ಕೆ ಓದಿದರೂ ನನಗೆ ಅರ್ಥವಾಗಲಿಲ್ಲ. ಒಂದೇ ಒಂದು ಶಬ್ಧ. ಅದು ಏನೆಂದರೆ 'ಸರ್ಕಾರದ ಭಾಗವಾಗಿಲ್ಲದಿರುವುದರಿಂದ ಅವರಿಗೆ ಸಚಿವರಿಗೆ ಇರುವ ಆಡಳಿತಾತ್ಮಕ ಅಧಿಕಾರವನ್ನು ನೀಡಲಾಗಿಲ್ಲ.' ಎಂತಹ ದೊಡ್ಡ ಮಾತು ಸ್ವಾಮಿ ಇದು? ಭಗವತ್ ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನಿಗೂ ಸಹ ಈ ಮಾತು ಹೊಳೆಯಲಿಲ್ಲ. ಇಲ್ಲಿ ಕುಳಿತುಕೊಂಡಿರುವವರು ಎಲ್ಲರೂ ಕೂಡ ಎಲ್.ಟಿ.ಎಂ. ಗಳು ಎಂದು ತಿಳಿದುಕೊಂಡಿದ್ದೀರಿ ಏನು? ನಾವು ಯಾರು ಶಾಲೆಗೆ ಹೋಗಲಿಲ್ಲವೇ, ವಿದ್ಯಾಭ್ಯಾಸ ಮಾಡಲೇ ಇಲ್ಲವೇ, ಸಂವಿಧಾನ ಅರ್ಥ ಮಾಡಿಕೊಂಡಿಲ್ಲವೇ, ಪ್ರಜಾಪ್ರಭುತ್ವದ ವ್ಯವಸ್ಥೆ ಏನು ಎಂದರೆ ನಮಗೆ ಗೊತ್ತಿಲ್ಲವೇ? ಇದು ಏನು ಸ್ವಾಮಿ? ಇದು ಯಾರಿಗೂ ಅಲ್ಲ. ಇವತ್ತು ವಿರೋಧ ಪಕ್ಷದ ನಾಯಕರ ಸ್ಥಾನಮಾನವನ್ನು, ಅವರ dignity ಅನ್ನು ಕಡಿಮೆ ಮಾಡುವುದಲ್ಲ. ಪ್ರಜಾತಂತ್ರಕ್ಕೆ ವಿರೋಧವಾಗಿರುವಂಥ ರೀತಿಯಲ್ಲಿ ಇವತ್ತು ಈ circular ಬರುವುದಾದರೆ ನನಗನಿಸುವುದು ಏನೆಂದರೆ, ಇದನ್ನು ಹೇಗೆ ನಾವು ಸಹಿಸಿ ಕೊಂಡಿರಬೇಕು?

ನನಗೆ ಮಾತು ಹಿಡಿಯುತ್ತಿರತಕ್ಕಂಥದ್ದು ಎಂದರೆ, ನಾವು ನೇರವಾಗಿ ಸರ್ಕಾರವನ್ನು attack ಮಾಡುವುದಕ್ಕಿಂತ ಜಾಸ್ತಿ, ನಿಮ್ಮ ಜೊತೆ ಸಮಾಲೋಚನೆ ಮಾಡಿದರು ಎಂದು ಹೇಳಿ, ಈಗ ನಿಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸಿಬಿಟ್ಟಿದ್ದಾರೆ. ಈಗ ನೀವು party ಆಗಿರಬೇಕಾಗಿದ್ದಾಗ ನಾವೇನು ಮಾಡುವುದು? ನಾವು ಪರಿಪರಿಯಾಗಿ ನಿಮ್ಮಲ್ಲಿ ಕೇಳುತ್ತಿರುವುದೇನೆಂದರೆ, ದಯಮಾಡಿ ಇಂತಹ ಪ್ರಜಾತಂತ್ರ ವ್ಯವಸ್ಥೆಗೆ ಇವತ್ತು ಮಾರಕವಾಗಿರುವಂಥ ಸುತ್ತೋಲೆಗಳು ಬರುವುದು ಬೇಡ. ಇದನ್ನು ಕಿತ್ತು ಬಿಸಾಕಿ, ಇದನ್ನು reject ಮಾಡಿ ಎನ್ನುವ ಮಾತನ್ನು ನಾವು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವತ್ತು ಪಂಡಿತ್ ಜವಹಾರ್‌ಲಾಲ್ ನೆಹರು ಅವರು ಹೇಳಿದಂಥ ಮಾತು, ಇವೆಲ್ಲವನ್ನೂ ನಾವು ಉಲ್ಲೇಖ ಮಾಡಿ ಹೇಳಬೇಕಾದಾಗ, ನಮ್ಮ precedents ಇದೆ. ನಮ್ಮ House of commons ನಲ್ಲಿ ಚರ್ಚೆಯಾಗಿರತಕ್ಕಂಥದ್ದು ಅವೆಲ್ಲವನ್ನೂ ಉಲ್ಲೇಖ ಮಾಡಿ ಹೇಳಿದಂಥ ಸಂದರ್ಭದಲ್ಲಿಯೂ ಕೂಡ ನೀವು

ಒಂದು ಯೋಚನೆಯನ್ನು ಮಾಡಬಹುದಾಗಿತ್ತು. ವಿರೋಧ ಪಕ್ಷದ ಸ್ಥಾನವೆಂದರೆ, ಒಂದು ವಿಭಿನ್ನವಾದಂಥ ಸ್ಥಾನ, ಇಲ್ಲಿ ಸರ್ಕಾರವನ್ನು ಟೀಕೆ ಮಾಡಬೇಕು, ಸದನದ ಒಳಗೂ ಟೀಕೆ ಮಾಡಬೇಕು. ಹೊರಗು ಟೀಕೆ ಮಾಡಬೇಕು. ಆದರೆ, ನಿಮ್ಮ ಕಾರ್ಯಕ್ರಮಗಳನ್ನು ನಾವು ಟೀಕೆ ಮಾಡುವುದಾದರೆ, ರಾಜ್ಯದಲ್ಲಿ ಏನಾದರೂ ಕೂಡ ಅದು ಗಡಿ ವಿಚಾರ ಇರಬಹುದು, ಜಲದ ವಿಚಾರ ಇರಬಹುದು, ಇನ್ನೊಂದು ವಿಚಾರ ಇರಬಹುದು. ಆಗ ನಾವು ಸರ್ಕಾರದ ಜೊತೆ ಕೈಜೋಡಿಸಲೇ ಬೇಕು. ಈ ವಿಭಿನ್ನವಾಗಿರುವಂಥ ಪಾತ್ರವನ್ನು ಮಾಡಬೇಕಾಗಿರುವಂಥ ಜವಾಬ್ದಾರಿಕೆ ಸಂವಿಧಾನದಲ್ಲಿ ಇವತ್ತು ವಿರೋಧ ಪಕ್ಷದ ನಾಯಕರಿಗೆ ಇರಬೇಕಾದಾಗ, ಯಾವುದೇ ಒಂದು ವಿಚಾರವನ್ನು ಮಾಡಬೇಕಾದಂಥ ಸಂದರ್ಭದಲ್ಲೂ ಕೂಡ ಒಂದು ಕನಿಷ್ಠವಾಗಿರುವಂಥ ರೀತಿಯಲ್ಲಿ, ಇಂತಹ ಮಹತ್ವವಾಗಿರುವಂಥ ಅಥವಾ ಇಂತಹ ಯಾವುದೇ ವಿಚಾರಗಳನ್ನು ತರಬೇಕಾದಾಗ, ಇವತ್ತು ಸಭಾ ನಾಯಕರಾಗಿರತಕ್ಕಂಥವರು, ಮುಖ್ಯಮಂತ್ರಿಗಳಾಗಿರತಕ್ಕಂಥವರು, ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಚರ್ಚೆ ಮಾಡಿ, ಇಂತಹ ವಿಚಾರಗಳಿವೆ, ಇದನ್ನು ತರಬೇಕೆಂದು ಹೇಳಿ, policy matters ಆಗಲಿ, ಇನ್ನೊಂದು ಆಗಲಿ, ಇಂಥವುಗಳನ್ನು ಚರ್ಚೆ ಮಾಡಬೇಕಾಗಿರುವ ನಿದರ್ಶನಗಳಿವೆ. ಇವತ್ತು ಪಾರ್ಲಿಮೆಂಟ್‌ನಲ್ಲೂ ಕೂಡ ನಡೆಯುತ್ತದೆ. ಅದನ್ನು ಮೌಖಿಕವಾಗಿಯಾದರೂ ಚರ್ಚೆ ಮಾಡುವಂಥ ಅವಕಾಶಗಳು ಇದ್ದಾಗ್ಯೂ ಕೂಡ, ಏನನ್ನೂ ಚರ್ಚೆ ಮಾಡದೇ, ಇವತ್ತು ಏಕಾಏಕಿ ಇಂತಹ ಸುತ್ತೋಲೆಯನ್ನು ಹೊರಡಿಸುತ್ತೀರೆಂದರೆ, ದೊಂದು ಪ್ರಜಾತಂತ್ರ ವ್ಯವಸ್ಥೆಗೆ ಮಾಡಿರುವ ದೊಡ್ಡ ಅಪಚಾರವೆಂದು ನಾನು ಭಾವಿಸಬೇಕಾಗುತ್ತದೆ. ನಿಮ್ಮ ಈ ಕುರ್ಚಿಗೆ ನಮಗೆ ಗೌರವವಿದೆ. ನೀವು ನ್ಯಾಯದ ತಕ್ಕಡಿಯ ಅಡಿಯಲ್ಲಿ ಕುಳಿತಿರತಕ್ಕಂಥವರು. ನಮ್ಮ ದೃಷ್ಟಿ ಆ ಕಡೆ ಇದೆ. ಆದರೆ, ಇಲ್ಲಿ ನಡೆಯುತ್ತಿರತಕ್ಕದ್ದು ಬೇರೆ. ಇದು 60 ವರ್ಷಗಳಾದ ಮೇಲೆ ನಾವು ವಿರೋಧ ಪಕ್ಷದವರ ಸ್ಥಾನಮಾನಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಅಂದರೆ, ಎಷ್ಟರ ಮಟ್ಟಿಗೆ ಪ್ರಜಾಪ್ರಭುತ್ವದ ಮೌಲ್ಯಗಳೆಲ್ಲಾ ಕುಸಿದು ಹೋಗುತ್ತಿವೆ ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ಕನ್ನಡಿ ಬೇಕಾಗಿಲ್ಲ ಎನ್ನತಕ್ಕ ಮಾತನ್ನು ಇವತ್ತು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಛೇರ್ಮನ್‌ರವರೆ, ಇದರ ಬಗ್ಗೆ ತುಂಬಾ ಸವಿಸ್ತಾರವಾಗಿ ಚರ್ಚೆ ಮಾಡತಕ್ಕಂಥದ್ದು ಅನಾವಶ್ಯಕವೆಂದು ನಾನು ಭಾವಿಸುತ್ತೇನೆ. ಬಹುಶಃ ಯಾವುದೇ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವದಲ್ಲಿ

ವಿರೋಧ ಪಕ್ಷದ ನಾಯಕರಿಗೆ, ಇವತ್ತು ಬೃಹತ್ ಸಂಖ್ಯೆಯಲ್ಲಿರುವಂಥ ವಿರೋಧ ಪಕ್ಷಕ್ಕೆ ಅವಮಾನ ಮಾಡಿದಂತಾಗುತ್ತದೆ ಮತ್ತೆ ಈ institution ಅನ್ನು ಯಾವತ್ತೂ ಕೂಡ de-grade ಮಾಡುವ ಮಟ್ಟಕ್ಕೆ ಹೋಗಬೇಡಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ದಯಮಾಡಿ ಒಂದೇ ಮಾತು, ಇವತ್ತು watch-dog ಎಂದರೇನು? ಅದರ ಗೂಢಾರ್ಥವೇನು? ಅದನ್ನು ಯಾವ ಭಾಷೆಯಲ್ಲಿ ವರ್ಣನೆ ಮಾಡಬೇಕೆನ್ನುವುದನ್ನು ಇವತ್ತು ಸಭಾನಾಯಕರಾಗಿರುವಂಥವರು ತಾವೂ ಕೂಡ ಅರ್ಥ ಮಾಡಿಕೊಳ್ಳಬೇಕು. ನಾಳೆ ಏನೇ ಸಂದರ್ಭ ಬಂದಾಗ, ಇವತ್ತು ಮುಖ್ಯಮಂತ್ರಿಗಳ ಸ್ಥಾನವನ್ನು ಅಲಂಕರಿಸುವಂಥ ಸಂದರ್ಭಗಳು ಅಥವಾ ಅವಕಾಶಗಳು ಇರುವಂಥ ಸಂದರ್ಭದಲ್ಲಿ, ಅವರು ನಿನ್ನ ಹಕ್ಕುಗಳೇನು? ನಿನ್ನ ಬಾಧ್ಯತೆಗಳೇನು? ನಿನಗೆ ಸಂಬಳವೇನು? ಸಾರಿಗೆ ಏನು? ಎನ್ನುವುದು ಸುತ್ತೋಲೆ ಕೊಡುವಂಥ ರೀತಿಯಲ್ಲಿ ಹೋಗುವುದಾದರೆ, ಬಹುಶಃ ಇದಕ್ಕಿಂತ ದೊಡ್ಡ ಅವಮಾನವೆಂದು ನಾನು ಭಾವಿಸಿಲ್ಲ. ಆದ್ದರಿಂದ ತಮ್ಮಲ್ಲಿ ನಾನು ವಿನಯದಿಂದ ಪ್ರಾರ್ಥನೆ ಮಾಡುವುದೇನೆಂದರೆ, ಇವತ್ತು ಇಂತಹ ಸುತ್ತೋಲೆಗಳು ಆಗುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಇವತ್ತು ಆ ನ್ಯಾಯದ ತಕ್ಕಡಿಯ ಅಡಿಯಲ್ಲಿ ಕುಳಿತು ಕೆಲಸ ಮಾಡಬೇಕಾದಾಗ, ಘನತೆ-ಗೌರವವನ್ನು ಕಾಪಾಡುವಂಥ ರೀತಿಯಲ್ಲಿ ತೀರ್ಮಾನಗಳು ಬರಬೇಕು. ದಯಮಾಡಿ ಆ ಸುತ್ತೋಲೆಯನ್ನು, ಆ ಪ್ರಜಾಪ್ರಭುತ್ವದ ತತ್ವಗಳನ್ನು, ಆಶಯಗಳನ್ನು ಮತ್ತು ಇನ್ನು ಮುಂದಿನ ಕಾಲಕ್ಕೂ ಕೂಡ, ನಮ್ಮಲ್ಲಿ ನಡೆದಂಥ ನಡವಳಿಕೆಗಳನ್ನೂ ಕೂಡ, ಮುಂದಿನ ಪೀಳಿಗೆ ಅನುಕರಣೆ ಮಾಡುವಂಥ ರೀತಿಯಲ್ಲಿ ನಾವು ಹೋಗಬೇಕಾಗುತ್ತದೆ. ಆ ರೀತಿಯಾದಂಥ ನಮ್ಮ ನಡವಳಿಕೆಗಳು, ತೀರ್ಮಾನಗಳು, ಸಭೆಗಳು ಇರಬೇಕಾಗುತ್ತದೆ ಎನ್ನುವ ಮಾತನ್ನು ಮತ್ತೆ ಒತ್ತಿ ಹೇಳಿ, ಇಂತಹ ಸುತ್ತೋಲೆಗಳನ್ನು ಇವತ್ತು ನೀವು reject ಅಥವಾ withdraw ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೇನರಸೀಪುರ): ಮಾನ್ಯ ಛೇರ್ಮನ್‌ರವರೆ, ವಿರೋಧ ಪಕ್ಷದ ನಾಯಕರಾದಂಥ ಮಾನ್ಯ ಸಿದ್ಧರಾಮಯ್ಯನವರು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ದಿನಾಂಕ 25-6-2009ರಂದು ಏನು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ, ಅದಕ್ಕೆ ನಿಲುವಳಿ ಸೂಚನೆಯನ್ನು ನಿಯಮ 60ರಲ್ಲಿ ತಂದಿದ್ದರು. ಅದನ್ನು

ಮಾನ್ಯ ಸಭಾಧ್ಯಕ್ಷರು ನಿಯಮ 69ಕ್ಕೆ convert ಮಾಡಿದ್ದಾರೆ. ಅದರ ಬಗ್ಗೆ ವಿರೋಧ ಪಕ್ಷದ ನಾಯಕರು ಸವಿಸ್ತಾರವಾಗಿ ಮಾತನಾಡಿದ್ದಾರೆ. ಈಗಾಗಲೇ 1976ನೇ ಇಸವಿಯಲ್ಲಿ ವಿರೋಧ ಪಕ್ಷದ ನಾಯಕರಿಗೆ ಸ್ಥಾನಮಾನ ಕಲ್ಪಿಸಲಾಗಿದೆ ಎನ್ನುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ತಿಳಿಸಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳೂ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ, ಸನ್ಮಾನ್ಯ ದೇವೇಗೌಡರು 1972 ರಿಂದ 1978ನೇ ಇಸವಿಯವರೆಗೆ ವಿರೋಧ ಪಕ್ಷದ ನಾಯಕರಾಗಿಯೂ ಕೆಲಸ ಮಾಡಿದ್ದಾರೆ. 1976ನೇ ಇಸವಿಯಲ್ಲಿ ಮೊದಲನೆಯದಾಗಿ, ಬಿಲ್ ಪಾಸಾಗಿ, ವಿರೋಧ ಪಕ್ಷದ ನಾಯಕರಿಗೂ ಸಹ, ಸಚಿವ ಸಂಪುಟ ದರ್ಜೆಯ ಎಲ್ಲಾ ಸವಲತ್ತುಗಳನ್ನು ಕೊಡಬೇಕೆಂದು ನಿರ್ಣಯವನ್ನು ಆವತ್ತು ಮಾಡಿ ಸರ್ಕಾರ ಆದೇಶ ಮಾಡಿದೆ. ಆದರೆ, ಸನ್ಮಾನ್ಯ ದೇವೇಗೌಡರು, ಸರ್ಕಾರ ಕೊಟ್ಟಂಥ ಯಾವುದೇ ಸಂಪುಟ ದರ್ಜೆಯ ಸವಲತ್ತುಗಳನ್ನು ತೆಗೆದುಕೊಳ್ಳಲಿಲ್ಲ ಎನ್ನುವುದನ್ನು ಈ ಸದನದ ಮುಖೇನ ತಿಳಿಸಬೇಕಾಗುತ್ತದೆ. ಮಾನ್ಯ ಉಮೇಶ್ ಕತ್ತಿಯವರು ಸಚಿವ ಸಂಪುಟ ದರ್ಜೆಯ ಯಾವುದೇ ಸವಲತ್ತುಗಳನ್ನು ತೆಗೆದುಕೊಳ್ಳದೇ ಹಾಗೆಯೇ ಹಾಲಿ ಮಂತ್ರಿಗಳಾಗಿ ಕೆಲಸ ಮಾಡಿಕೊಂಡಿರುತ್ತೇನೆಂದರೆ ಸಂತೋಷ. ಸ್ವಲ್ಪ ತಾಳ್ಮೆಯಿಂದ ಇದ್ದರೆ ಒಳ್ಳೆಯದು. ದಯಮಾಡಿ ನಾನು ಮಾತನಾಡಬೇಕಾದರೆ, ದಿಕ್ಕು ತಪ್ಪಿಸುವಂಥ ಕೆಲಸಕ್ಕೆ ಹೋಗಬೇಡಿ. 1976ರ ಕಾಯ್ದೆಯನ್ವಯ ವಿರೋಧ ಪಕ್ಷದ ನಾಯಕರಿಗೆ ಏನು ಸವಲತ್ತುಗಳನ್ನು ಕೊಡುತ್ತಿದ್ದಾರೆ, ಇದಾದ ಮೇಲೆ ಇಲ್ಲಿಯವರೆಗಿನ ಸವಲತ್ತು ಏನಿತ್ತು? ಏಕೆ ಸರ್ಕಾರ ಆದೇಶ ಹೊರಡಿಸಿದರು ಎನ್ನುವುದು ಬೇಕಾಗುತ್ತದೆ. ಯಾವ ಉದ್ದೇಶಕ್ಕೋಸ್ಕರ, ಯಾವ ಕಾರಣಕ್ಕೋಸ್ಕರ 25–6–2009ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಿದರು? ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ, ಈ ರಾಜ್ಯದಲ್ಲಿ ಇಲ್ಲಿಯವರೆಗೂ ಚುನಾವಣೆಯಾಯಿತು, ನಾವು ಒಂದು ವರ್ಷ ಬರೀ ಲೋಕಸಭಾ ಚುನಾವಣೆಯಲ್ಲಿ ಕಳೆದವು. ವಿರೋಧಪಕ್ಷದವರು ಮತ್ತು ನಾವೆಲ್ಲಾ ಒಟ್ಟಾಗಿ, ಈ ರಾಜ್ಯದ ಅಭಿವೃದ್ಧಿ ಮಾಡಬೇಕೆನ್ನುವ ಭಾವನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳೇ ಈ ರಾಜ್ಯದ ಜನತೆಗೆ ತಿಳಿಸಿರುವಾಗ, ಇಂತಹ ಒಂದು ಆದೇಶವನ್ನು ಕೊಡುವುದು ಏನಿದೆ?

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಏಕೆಂದರೆ, ಈ ಸರ್ಕಾರ ಪೂರ್ಣ ಪಾರದರ್ಶಕವಾದಂಥ ಸರ್ಕಾರ. ಸರ್ಕಾರದ ಬಗ್ಗೆ ನಾವ್ಯಾರು ಚಕಾರವೆತ್ತಿ ಮಾತನಾಡುವಂಥದ್ದು ಇಲ್ಲ. ಒಂದು

ಪಾರದರ್ಶಕವಾದಂಥ ಸರ್ಕಾರ, ಈ ಸನ್ನಿವೇಶದಲ್ಲಿ ವಿರೋಧ ಪಕ್ಷದ ನಾಯಕರಿಗೆ ಇರಬಹುದು, ಅಥವಾ ವಿಧಾನ ಪರಿಷತ್ತಿನ ನಾಯಕರಿಗೆ ಇರಬಹುದು, ವಿಧಾನ ಸಭಾ ಸದಸ್ಯರಿಗೆ ಇರಬಹುದು ಏಕೆಂದರೆ, ಕೆಲವು ಕೆಡಿಪಿ ಸಭೆಗಳು ನಡೆಯುತ್ತದೆ, ಪ್ರತಿ ಮೂರು ತಿಂಗಳಿಗೊಮ್ಮೆ ಕೆಡಿಪಿ ಸಭೆ ನಡೆಯುತ್ತದೆ, ಜಿಲ್ಲಾ ಮಟ್ಟದಲ್ಲಿಯೂ ಕೆಡಿಪಿ ಸಭೆ ನಡೆಯುತ್ತದೆ, ಆ ಸಭೆಯಲ್ಲಿ ಶಾಸಕರೇನಾದರೂ ಮಾಹಿತಿ ಕೇಳಿದರೆ, ಕೊಡಬಾರದೆಂದು ಇದೆಯೇ? ಏನಾದರೂ ಮಾಹಿತಿ ಕೇಳಿದಾಗ, ಯಾವ ಉದ್ದೇಶಕ್ಕೋಸ್ಕರ ನಾವು ಮಾಹಿತಿಯನ್ನು ಕೇಳುತ್ತೇವೆ? ವಿರೋಧಪಕ್ಷದ ನಾಯಕರು, ಶಾಸಕರು ಮಾಹಿತಿ ಕೇಳುವುದು ಬೇಡವೆಂದರೆ ಹೇಗೆ? ಈ ರಾಜ್ಯದಲ್ಲಿ, ವಿರೋಧ ಪಕ್ಷದ ನಾಯಕರು ಜಿಲ್ಲಾಧಿಕಾರಿಗಳ ಕಛೇರಿಗೆ ಹೋಗುತ್ತಾರೆ. ಇವತ್ತು ಸುಮಾರು 25 ಇಲಾಖೆಗಳ ಬೇಡಿಕೆ ಮೇಲೆ ಚರ್ಚೆ ಮಾಡಿ ನಾವು ಅನುಮತಿ ಕೊಡುತ್ತೇವೆ. ಯಾವ್ಯಾವ ಇಲಾಖೆಯಲ್ಲಿ ಏನಾಗಿದೆ ಎನ್ನುವುದಕ್ಕಾದರೂ ವಿರೋಧ ಪಕ್ಷದ ನಾಯಕರಾಗಲಿ, ಸಂಬಂಧಪಟ್ಟಂಥ ಕ್ಷೇತ್ರದ ಶಾಸಕರಾಗಲಿ, ಹೋಗಿ ಸಂಬಂಧಪಟ್ಟಂಥ ಅಧಿಕಾರಿಗಳ ಹತ್ತಿರ ನೀವು ಮಾಹಿತಿ ತೆಗೆದುಕೊಳ್ಳಬೇಡಿ ಎಂದರೆ, ಇದರ ಅರ್ಥವೇನು? ಈ ರಾಜ್ಯದ ಉದ್ದೇಶ ಏನು? ಹತ್ತು ಜನರ ಹಣ, ಯಾವುದೇ ಅನಾನುಕೂಲವಾಗಬಾರದು ಎನ್ನುವ ಉದ್ದೇಶದಿಂದ ನಾವೆಲ್ಲಾ ಮಾಡುತ್ತಿರುವುದು. ಆಡಳಿತ ಪಕ್ಷ ಇರಬಹುದು, ವಿರೋಧ ಪಕ್ಷ ಇರಬಹುದು, ದುರುಪಯೋಗ ಆಗಬಾರದೆಂಬ ಉದ್ದೇಶದಿಂದ ಇವತ್ತು ನಾವು ಪ್ರಸ್ತಾಪಿಸುತ್ತಿದ್ದೇವೆ. ಇಂತಹ ಸನ್ನಿವೇಶದಲ್ಲಿ ಇಂತಹ ಘಟನೆಗಳಾಗಿವೆ, ಅದಕ್ಕೋಸ್ಕರ ದಾಖಲಾತಿಗಳನ್ನು ಕೊಡಿ ಎಂದು ನಾವೇನಾದರೂ ಅರ್ಜಿಗಳನ್ನು ಕೊಟ್ಟು ನಿಂತುಕೊಳ್ಳಬೇಕೇ? ದಯಮಾಡಿ ಹೇಳಲಿ. ಯಾವ ರೀತಿ ಅರ್ಜಿ ಕೊಡಬೇಕು ಎಂಬುದನ್ನಾದರೂ ಹೇಳಲಿ. Right to Information Actನಡಿ ಸಲ್ಲಿಸಬೇಕೇ? ಅಥವಾ ಖಾಲಿ ಅರ್ಜಿ ಕೊಡಬೇಕೇ? ಹಣ ತುಂಬಬೇಕೇ? ಸರ್ಕಾರದಿಂದ ಯಾವುದಾದರೂ ಮಾಹಿತಿ ತೆಗೆದುಕೊಳ್ಳಬೇಕಾದರೆ ಯಾವ ರೀತಿ ಮಾಹಿತಿ ತೆಗೆದು ಕೊಳ್ಳಬೇಕೆಂಬುದನ್ನು ವಿರೋಧ ಪಕ್ಷದ ನಾಯಕರಾಗಲಿ, ವಿಧಾನ ಪರಿಷತ್ತಿನ ಸದಸ್ಯರಾಗಲಿ, ವಿಧಾನಸಭಾ ಸದಸ್ಯರಾಗಲಿ, ಯಾವ ರೀತಿ ಮಾಹಿತಿ ತೆಗೆದು ಕೊಳ್ಳಬೇಕೆಂಬುದನ್ನು ಹೇಳಬೇಕು.

ಈ ಸರ್ಕಾರ ದಿನಾಂಕ 25–6–2009ರ ಸುತ್ತೋಲೆ. ವಿಷಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರ ಆಡಳಿತಾತ್ಮಕ ವಿಷಯಗಳಲ್ಲಿ ಸಭೆ ನಡೆಸಲು ಅಧಿಕಾರ ಹೊಂದಿರುವ ಬಗ್ಗೆ.

ಹಿಂದೆಲ್ಲಾ ಇತ್ತೇ? ಇದಕ್ಕಿಂತಲೂ ಮುಂಚೆ ಏನಿತ್ತು ಎಂಬುದನ್ನು ನನಗೆ ತಿಳಿಸಬೇಕಾಗುತ್ತದೆ. ಒಂದು ವೇಳೆ ಮಾಹಿತಿ ಕೊಡದಿದ್ದರೆ, ಅದನ್ನು ಯಾವ ರೀತಿ ತರಿಸಿಕೊಳ್ಳಬೇಕೆಂಬುದು ಗೊತ್ತಿದೆ, ತರಿಸಿಕೊಳ್ಳುತ್ತೇವೆ. ಈ ಸರ್ಕಾರಕ್ಕೆ ವಿರೋಧ ಪಕ್ಷದ ಮೇಲೆ ಭಯ ಎನ್ನುವುದೇನಾದರೂ ಇದ್ದರೆ, ಮಾಹಿತಿ ಕೊಡಿಸುವುದರ ಬಗ್ಗೆಯೂ ಎಲ್ಲಾ ಅಧಿಕಾರಿಗಳಿಗೆ ಭಯವಿದ್ದರೆ, ಫೈಲ್‌ಗಳೆಲ್ಲವನ್ನೂ ಮುಚ್ಚಿಟ್ಟುಕೊಂಡು ಬೀರುವಿನಲ್ಲಿ ಇಟ್ಟುಕೊಳ್ಳಿ ಎಂದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಆ ಬೀರುವನ್ನು ಹೇಗೆ ತೆಗೆಸಬೇಕು, ಎಲ್ಲಿ ದಾಖಲಾತಿಗಳನ್ನು ತೆಗೆದುಕೊಳ್ಳಬೇಕೆಂಬುದು ನಮಗೆ ಗೊತ್ತಿದೆ, ತೆಗೆದುಕೊಳ್ಳುತ್ತೇವೆ. ಈ ಸರ್ಕಾರ ಏಕೆ ಅಂಜುತ್ತಿದೆ? ಪಾರದರ್ಶಕವಾಗಿರುವ ಈ ಸರ್ಕಾರ ವಿರೋಧ ಪಕ್ಷದ ಸದಸ್ಯರಿಗೆ ಅಂಜುವ ಪ್ರಮೇಯವೇನು ಎನ್ನುವುದನ್ನು ರಾಜ್ಯದ ಐದು ಕೋಟಿ ಜನತೆಗೆ ತಿಳಿಸಬೇಕೆಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಕಾನೂನು ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಯಾರೇ ಜಿಲ್ಲಾಧಿಕಾರಿಗಳಿರಬಹುದು ಅಥವಾ ರಾಜ್ಯ ಮಟ್ಟದ ಅಧಿಕಾರಿಗಳಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಯಾವುದೇ ಮಾಹಿತಿಗಳನ್ನು ಕೇಳಿದರೆ ಪ್ರಾಮಾಣಿಕವಾಗಿ ಕೊಡಬೇಕೆಂದು ಧೈರ್ಯವಾಗಿ ಹೇಳಿ. ತಪ್ಪಾಗಿದ್ದರೆ ನಾವಿಬ್ಬರೂ ಸೇರಿ ಸರಿಪಡಿಸಿಕೊಳ್ಳೋಣ. ಈ ಸರ್ಕಾರಕ್ಕೆ ಭಯವೇಕೆ ಬೇಕು? ಏನಾದರೂ ತಪ್ಪಾಗಿದ್ದು, ಯಾವುದೇ ಭಯವಿಲ್ಲವೆಂದ ಮೇಲೆ ಮಾಹಿತಿ ಕೊಡುವುದಕ್ಕೇನು? ಅಥವಾ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ತೆಗೆದುಕೊಳ್ಳಬೇಕೆ? ನಾನು ಮಾನ್ಯ ಮುಖ್ಯಮಂತ್ರಿ ಮತ್ತು ಕಾನೂನು ಸಚಿವರಲ್ಲಿ ಕೇಳುವುದೇನೆಂದರೆ...

ಶ್ರೀ ಅರವಿಂದ ಲಿಂಬಾವಳಿ: ನಿಮ್ಮಂತಹ Senior Leadersಗೆ ಸರ್ಕಾರವು ಮಾಹಿತಿ ಕೊಡುವುದಿಲ್ಲ ಎನ್ನುವುದರಲ್ಲಿ ಯಾವುದೇ ಉದ್ದೇಶವಿಲ್ಲ. ನಾವು ಕೊಡದೇ ಇದ್ದರೂ ಅವರು RTCಯಡಿ ತೆಗೆದುಕೊಳ್ಳುತ್ತಾರೆ. Sorry. RTIನಡಿ ತೆಗೆದುಕೊಳ್ಳುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ: RTC ಎಂದರೆ ಪಹಣಿ ತೆಗೆದುಕೊಳ್ಳಬೇಕೇ? ಕೇಳಿ ಸ್ವಾಮಿ.

ಶ್ರೀ ಅರವಿಂದ ಲಿಂಬಾವಳಿ: ರೇವಣ್ಣನವರೆ, ಒಂದು ನಿಮಿಷ ಮಾಹಿತಿ ಕೊಡುವುದಿಲ್ಲವೆಂದರೆ, ಈಗ ಅದಲ್ಲ ಚರ್ಚೆಯಾಗುತ್ತಿರುವುದು. ವಿರೋಧ ಪಕ್ಷದ ನಾಯಕರ ಸ್ಥಾನಮಾನದ ಬಗ್ಗೆ ಮತ್ತು ಅವರಿಗೆ ಇರುವ

responsibility ಬಗ್ಗೆ ಚರ್ಚೆಯಾಗುತ್ತಿದೆ. ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು. ಅವರಿಗೆ ಏನೇನು ಸವಲತ್ತುಗಳಿದ್ದವೋ, ಅವು ಹಾಲಿ ವಿರೋಧ ಪಕ್ಷದ ನಾಯಕರಾಗಿರುವ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರಿಗೂ ಇದೆ. ಅದಕ್ಕಿಂತಲೂ ಹೆಚ್ಚಿನ ಸವಲತ್ತುಗಳು ಬೇಕೆಂದು ನೀವು ಡಿಮ್ಯಾಂಡ್ ಮಾಡಿದಲ್ಲಿ, ಕೊಡೋಣ. ಅದರ ಬಗ್ಗೆ ಮುಖ್ಯಮಂತ್ರಿಗಳು ಯೋಚಿಸುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಸವಲತ್ತುಗಳ ಬಗ್ಗೆ ಈಗ ಯಾರೂ ಚರ್ಚೆ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಸವಲತ್ತುಗಳನ್ನು ನೀವೇ ತೆಗೆದುಕೊಳ್ಳಿ, ನಮಗೆ ಬೇಡ, ಕಾರು, ಮನೆ ಎಲ್ಲವನ್ನೂ ನೀವೇ ತೆಗೆದುಕೊಳ್ಳಿ. We do not want all those things. But, respect this institution.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಸವಲತ್ತುಗಳ ಬಗ್ಗೆ ಮಾತನಾಡಿಲ್ಲ. ಅವೆಲ್ಲವೂ ರೆಕಾರ್ಡ್‌ಗೆ ಹೋಗಬಾರದು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಅವರು, ಇನ್ನೊಂದು ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ಅಧಿಕಾರಿಗಳಿಂದ ಮಾಹಿತಿ ಪಡೆಯಬಾರದೆಂಬ ಶಾಸಕರ ಹಕ್ಕಿಗೆ ಚ್ಯುತಿವುಂಟಾಗಿರುವುದರ ಬಗ್ಗೆ ಚರ್ಚೆಯಾಗುತ್ತಿದೆ.

ಶ್ರೀ ಅರವಿಂದ ಲಿಂಬಾವಳಿ: ಈ ಸದನದೊಳಗೆ ಮಾಹಿತಿ ಸಿಗುತ್ತದೆ, ವಿರೋಧ ಪಕ್ಷದ ನಾಯಕರು ಅಧಿಕಾರಿಗಳನ್ನು ಕರೆದು ಕೇಳಿದಾಗಲೂ ಮಾಹಿತಿ ಸಿಗುತ್ತದೆ. ನೀವು ಅಧಿಕಾರಿಗಳನ್ನು ಕರೆದು Review Meeting ಮಾಡುತ್ತೇನೆಂದು ಸರ್ಕಾರವನ್ನು ನೀವೇ ನಡೆಸುವುದಕ್ಕೆ ಹೊರಟು ಬಿಟ್ಟರೆ ಪರಿಸ್ಥಿತಿ ಏನು?

ಶ್ರೀ ಕೆ.ಎಂ. ಶಿವಲಿಂಗೇಗೌಡ: ಆಡಳಿತ ಪಕ್ಷದ ನ್ಯೂನತೆಗಳನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಅದರ ವ್ಯವಸ್ಥೆಯನ್ನು ಸರಿಪಡಿಸುವ ಜವಾಬ್ದಾರಿ ವಿರೋಧ ಪಕ್ಷದ ನಾಯಕರಿಗೆ ಇರಬೇಕು. ಸರ್ಕಾರವು ಸರಿಯಾದ ರೀತಿಯಲ್ಲಿ ಆಡಳಿತ ನಡೆಸಿದರೆ ವಿರೋಧ ಪಕ್ಷದ ನಾಯಕರು ಬಂದು ವಿಚಾರಣೆ ಮಾಡುವುದನ್ನು, ಮಾಹಿತಿ ಪಡೆಯುವುದನ್ನು ಏಕೆ ಕಂಟ್ರೋಲ್ ಮಾಡುತ್ತೀರಿ? ಇದು ಪ್ರಜಾಪ್ರಭುತ್ವವೇ? ದಯಮಾಡಿ ಸರಿಯಾದ ರೀತಿಯಲ್ಲಿ ನೀವು ಸರ್ಕಾರವನ್ನೂ

ನಡೆಸಿದರೆ ಅವರು ಕೇಳುವುದರಲ್ಲಿ ತಪ್ಪೇನಿದೆ? ನಿಮ್ಮ ತಪ್ಪು ಇದ್ದರೆ ನೀವು ಹೆದರಿಸಿಕೊಳ್ಳಬೇಕು.

ಅಧ್ಯಕ್ಷರು: ರೇವಣ್ಣನವರೆ, ಭೋಜನ ವಿರಾಮದ ನಂತರ ಚರ್ಚೆಯನ್ನು ಪ್ರಾರಂಭಿಸೋಣವೇ? ಇಲ್ಲವೇ, ಈಗಲೇ ಚರ್ಚೆಯನ್ನು ಮುಗಿಸುತ್ತೀರೋ?

ಶ್ರೀ ಹೆಚ್.ಡಿ. ರೇವಣ್ಣ: ನೀವು (ಮುಖ್ಯಮಂತ್ರಿಗಳು) ಉತ್ತರ ಕೊಡುವುದಕ್ಕೆ ತಯಾರಾಗಿದ್ದೀರಿ. ಉತ್ತರಿಸುವುದಕ್ಕೆ ನಿಮಗೆ ಶಕ್ತಿ ಇದೆ.

ಅಧ್ಯಕ್ಷರು: ರೇವಣ್ಣನವರೆ, ಈಗ ಮಧ್ಯಾಹ್ನ 2.00 ಗಂಟೆಯಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಯಾರೋ ಮಂತ್ರಿಗಳು ಇವತ್ತು ಊಟ ಕೊಡುತ್ತಿದ್ದಾರೆ. ಊಟ ಮಾಡಿ ಬರೋಣ. ಊಟ ಮಾಡಿದ ಬಳಿಕ ಮತ್ತಷ್ಟು ಸಿದ್ಧತೆ ಮಾಡಿಕೊಂಡು ಹೆಚ್ಚು ಚರ್ಚಿಸಲು ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಹೇಳಿದೆ.

ಶ್ರೀ ಹೆಚ್.ಡಿ. ರೇವಣ್ಣ: ಊಟವಾದ ಬಳಿಕ ಬೇಕಾದರೆ ಚರ್ಚಿಸೋಣ, ನನ್ನದೇನೂ ಅಭ್ಯಂತರವಿಲ್ಲ. ನಾವು ಇನ್ನೂ ಸ್ವಲ್ಪ ರೆಡಿಯಾಗಿ ಬರುತ್ತೇವೆ. (ಸದನದಲ್ಲಿ ನಗು)

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮ್ಮ ತಂದೆಯವರು ಪ್ರಧಾನ ಮಂತ್ರಿಯಾಗಿದ್ದರು, ವಿರೋಧ ಪಕ್ಷದ ನಾಯಕರಾಗಿದ್ದರು, ನಾವು–ನೀವು ನಿಮ್ಮ ತಂದೆಯವರ ಹತ್ತಿರ ಹೋಗಿ ಮಾತನಾಡೋಣ. ಎಲ್ಲೆಲ್ಲಿ ಏನೇನು ಅಧಿಕಾರ ಕೊಡಬೇಕೆಂಬುದರ ಬಗ್ಗೆ ತಿಳಿದುಕೊಂಡು ಬರೋಣ. ನಾನು ರೆಡಿಯಾಗಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದರು, ಅವರು ಹೇಗೆ ಮಾಹಿತಿ ತೆಗೆದುಕೊಳ್ಳುತ್ತಿದ್ದರು... ಎನ್ನುವುದು ಗೊತ್ತಿದೆ. ನಾನು ಅದಕ್ಕೋಸ್ಕರವೇ ಹೇಳಿದೆ. ಮಾಹಿತಿಗಳೆಲ್ಲವನ್ನೂ ಬೀರುವಿನಲ್ಲಿ ಇಟ್ಟುಕೊಳ್ಳಿ. ಬೀರುವನ್ನು ಹೇಗೆ ತೆಗೆಸಬೇಕೆಂಬುದು ನಮಗೆ ಗೊತ್ತಿದೆ. ಮಾಹಿತಿ ಎಲ್ಲಿ ತೆಗೆದುಕೊಳ್ಳಬೇಕೆಂಬುದು ನನಗೆ ಗೊತ್ತಿದೆ. ತೆಗೆದುಕೊಳ್ಳುತ್ತೇವೆ. ಅದು ಬೇರೆ ವಿಷಯ. ಆದರೆ, ಸರ್ಕಾರ ಪಾರದರ್ಶಕವಾಗಿದೆಯಲ್ಲ, ಅದಕ್ಕೋಸ್ಕರ ಮಾಹಿತಿ ಕೊಡಿ ಎಂದು ಕೇಳುತ್ತಿದ್ದೇವೆ. ಇಲ್ಲವೇ ಮಾಹಿತಿಯನ್ನು ನಾವು ಬೀರುವಿನಲ್ಲಿ ಮುಚ್ಚಿಟ್ಟು ಕೊಳ್ಳುತ್ತೇವೆಂದರೆ ನಮ್ಮದೇನೂ ಅಭ್ಯಂತರವಿಲ್ಲ. ನಾವು ಬೀರುವನ್ನು ಹೇಗೆ ಓಪನ್ ಮಾಡಿಕೊಳ್ಳಬೇಕು, ನಮ್ಮ ಹತ್ತಿರವೂ ಒಂದು ಕೀ ಇದೆ. ಕೀ ಓಪನ್ ಮಾಡುವವರು ಇರುತ್ತಾರೆ, ಮಾಡಿಸುತ್ತೇನೆ, ಅದು ಬೇರೆ ವಿಷಯ.

ಒಬ್ಬ ಮಾನ್ಯ ಸದಸ್ಯರು: ಒಂದು ಡೂಪ್ಲಿಕೇಟ್ ಕೀ ಮಾಡಿಟ್ಟುಕೊಂಡಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ: ಈಗ ನಾನು ಆ ವಿಷಯದ ಬಗ್ಗೆ ಹೇಳುತ್ತಿಲ್ಲ. ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಅವರು ಜಿಲ್ಲಾಧಿಕಾರಿಗಳ, ಅಧಿಕಾರಿಗಳ ಬಳಿಗೆ ಹೋಗಿ ಮಾಹಿತಿ ಕೇಳುತ್ತಿರಲಿಲ್ಲ. ಅವರಿಗೆ ಹೇಗೆ ಮಾಹಿತಿ ತರಿಸಬೇಕೆಂಬುದು ಗೊತ್ತಿತ್ತು. ಅದೇ ರೀತಿ ಸಿದ್ದರಾಮಯ್ಯನವರಿಗೂ ಗೊತ್ತಿದೆ, ಅವರು ಮಾಹಿತಿ ತರಿಸಿಕೊಳ್ಳುತ್ತಾರೆ. ಆದರೆ, ಈ ಸರ್ಕಾರ ಪಾರದರ್ಶಕವಾಗಿದೆ ಎಂಬ ಒಂದೇ ಉದ್ದೇಶಕ್ಕೋಸ್ಕರ ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದಿಷ್ಟೆ. ಉನ್ನತ ಶಿಕ್ಷಣ ಸಚಿವರು ಏನು ಹೇಳಿದರು ಎಂದರೆ, RTC ಎಂದು ಹೇಳಿದರು. RTC ಎಂದರೆ, ಪಹಣಿ, ಇತ್ಯಾದಿ ಭೂ ದಾಖಲಾತಿಗಳನ್ನು ತೆಗೆದುಕೊಳ್ಳುವುದಾಗಿದೆ. ನಾವ್ಯಾರೂ ಪಹಣಿಗಳನ್ನು ತೆಗೆದುಕೊಳ್ಳಲು ಹೋಗುತ್ತಿಲ್ಲ. ಪಹಣಿಗಳನ್ನು ಕೇಳುವುದಕ್ಕೂ ಹೋಗಿರಲಿಲ್ಲ.

ಅಧ್ಯಕ್ಷರು: Right to Information Act.

ಶ್ರೀ ಹೆಚ್.ಡಿ. ರೇವಣ್ಣ: ನನಗೆ ಗೊತ್ತು. ಅವರು RTC ಎಂದು ಹೇಳಿದರು. ನನಗೆ Right to Information Act ಬಗ್ಗೆಯೂ ಗೊತ್ತು ಮತ್ತು RTC ಎಂದರೆ ಏನೆಂಬುದೂ ಗೊತ್ತು. ಇವೆರಡೂ ನನಗೆ ಗೊತ್ತಿದೆ... ಈಗ ಊಟ ಮಾಡಿಕೊಂಡು ಬಂದ ನಂತರವೇ ಚರ್ಚೆ ಆರಂಭಿಸೋಣವಂತೆ.

ಅಧ್ಯಕ್ಷರು: ಊಟವಾದ ನಂತರ ಸೇರೋಣವೇ?

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ವಿಷಯವನ್ನು ಪ್ರಸ್ತಾಪಿಸಬಯಸುತ್ತೇನೆ. ಏನೆಂದರೆ, ದಿನಾಂಕ 25–6–2009 ರಂದು ಮುಖ್ಯ ಕಾರ್ಯದರ್ಶಿಯವರು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರುಗಳಿಗೆ ಸಂಬಂಧಿಸಿದಂತೆ ಸುತ್ತೋಲೆಯೊಂದನ್ನು ಹೊರಡಿಸಿದ್ದಾರೆ. ಇದರ ಹಕ್ಕುಚ್ಯುತಿ ಪ್ರಶ್ನಿಸಿ ಈಗ ನಾವು ಚರ್ಚೆ ಪ್ರಾರಂಭಿಸಿದ್ದೇವೆ. ಇಲ್ಲಿ ನಾವು ಎಲ್ಲಾ ವಿಷಯಗಳನ್ನೂ ಚರ್ಚಿಸುವುದಕ್ಕೆ ಹೋಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ವಿಷಯವನ್ನು ಈಗಾಗಲೇ ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಇನ್ನು ಹೆಚ್ಚಿಗೆ ಚರ್ಚಿಸಬೇಕಾದ ಅಗತ್ಯವಿಲ್ಲ. ಇಲ್ಲಿ Executive is interfering in Legislatures Business. This amounts to Breach of Privilege. ವೇತನ

ಮತ್ತು ಪರಿಷ್ಕರಣೆಯಡಿ ಇದು ಬರುವುದರಿಂದ ನೀವು ನಮ್ಮ ಹಕ್ಕನ್ನು ರಕ್ಷಿಸಬೇಕಾಗಿರುವವರು. Chief Secretaryಯವರಿಗೆ ಇಂತಹ ಸುತ್ತೋಲೆ ಹೊರಡಿಸುವುದಕ್ಕೆ ಯಾವುದೇ ಅಧಿಕಾರವಿಲ್ಲ. ಇಲ್ಲಿ Breach of Privilege ಆಗಿದೆ. ಈ ವಿಷಯವನ್ನು Privilege Committeeಗೆ ದಯವಿಟ್ಟು ರೆಫರ್ ಮಾಡಿ. ಮತ್ತು ಈ ತರಹದ ಸುತ್ತೋಲೆಗಳು ಪ್ರಜಾಪ್ರಭುತ್ವದ ನಡವಳಿಕೆ ಮತ್ತು ಅದರ ಕಾರ್ಯ ವ್ಯಾಪ್ತಿಗೆ ಆರೋಗ್ಯಕರವಾದ ಬೆಳವಣಿಗೆಯಲ್ಲ ಎನ್ನುವ ವಿಷಯವು ಸರ್ಕಾರದ ಗಮನಕ್ಕೆ ಬಂದು ಇಂತಹ ಸುತ್ತೋಲೆಗಳನ್ನು ಹೊರಡಿಸುವುದರಿಂದ ಅವರು ಏನು ಪಾರದರ್ಶಕ ಸರ್ಕಾರವೆಂದು ವಾದಿಸುತ್ತಿದ್ದಾರೆ, ಅದಕ್ಕೆ ಇದು ವ್ಯತಿರಿಕ್ತವಾದ ವಿಷಯಗಳಾಗಿವೆ. ಆದುದರಿಂದ, ತಾವು ದಯವಿಟ್ಟು... ಪ್ರಧಾನ ಕಾರ್ಯದರ್ಶಿಯವರು ಎಂದು ಹಾಕಿದ್ದಾರೆ, ವಿಧಾನ ಮಂಡಲ ಕಾರ್ಯಾಲಯದ ಪ್ರಧಾನ ಕಾರ್ಯದರ್ಶಿ ಎಂದು ಹಾಕಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ರೇವಣ್ಣನವರ ಮಾತು ಪೂರ್ತಿ ಯಾಗಿದೆಯೇ? ಇದು intervention?

ಅಧ್ಯಕ್ಷರು: ರೇವಣ್ಣನವರು ಹೇಳಿದ ನಂತರ ಅದಕ್ಕೆ ಇದು intervention.

ಡಾ: ಹೆಚ್.ಸಿ. ಮಹದೇವಪ್ಪ: ನಾನು ತಮ್ಮ (ಅಧ್ಯಕ್ಷರು) ಪರ್ಮಿಶನ್ ಕೇಳಿ intervention ಮಾಡುತ್ತಿದ್ದೇನೆ. ಇಲ್ಲಿ ಮುಖ್ಯ ಕಾರ್ಯದರ್ಶಿಯವರು ಏನು ಸುತ್ತೋಲೆ ಹೊರಡಿಸಿದ್ದಾರೆ, ಈ legislation ನಲ್ಲಿ Executiveನವರು interfere ಆಗುವುದು ಹಕ್ಕುಚ್ಯುತಿ ವ್ಯಾಪ್ತಿಗೊಳಪಡುತ್ತದೆ. Executiveಗೆ legislation businessನಲ್ಲಿ interfere ಮಾಡುವುದಕ್ಕೆ ಯಾವುದೇ ಅಧಿಕಾರವಿಲ್ಲ. ತಾವು ಇದನ್ನು ರಕ್ಷಣೆ ಮಾಡಬೇಕು ಮತ್ತು ಹಕ್ಕುಚ್ಯುತಿ ಸಮಿತಿಗೆ ಈ ವಿಷಯವನ್ನು ರೆಫರ್ ಮಾಡಬೇಕೆಂದು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಒಂದು ಪ್ರಕಟಣೆ: ಶ್ರೀ ಸಿ.ಎಂ. ಉದಾಸಿ, ಮಾನ್ಯ ಲೋಕೋಪಯೋಗಿ ಸಚಿವರು, ಈ ದಿನ ಮಧ್ಯಾಹ್ನ ಮಾನ್ಯ ಸಚಿವರು ಹಾಗೂ ಶಾಸಕರುಗಳ ಗೌರವಾರ್ಥ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಔತಣ ಕೂಟ ಏರ್ಪಡಿಸಿರುತ್ತಾರೆ. ತಾವು ದಯವಿಟ್ಟು ಭಾಗವಹಿಸಬೇಕೆಂದು ಕೋರಲಾಗಿದೆ.

ಈಗ ಸದನವನ್ನು ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಮತ್ತೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 10 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಬೋಜನ ವಿರಾಮದ ನಂತರ ಪುನಃ ಸಭೆಯು ಮಧ್ಯಾಹ್ನ 3 ಗಂಟೆ 34 ನಿಮಿಷಕ್ಕೆ ಆರಂಭವಾಯಿತು, ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿದ್ದರು)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ 25-6-2009 ರಂದು ಸುತ್ತೋಲೆಯನ್ನು ಯಾವ ಉದ್ದೇಶಕ್ಕಾಗಿ ಹೊರಡಿಸಿದರೆಂಬುದು ನನಗೆ ಗೊತ್ತಿಲ್ಲ. ಇದರ ಉದ್ದೇಶವೇನು? ವಿರೋಧ ಪಕ್ಷದ ನಾಯಕರ ಅಧಿಕಾರದ ಬಗ್ಗೆ 1976 ನಂತರ ಬೇರೆ ಯಾವುದಾದರು ಸುತ್ತೋಲೆ ಇತ್ತೇ? ನಾನು ಹೇಳುವುದೇನೆಂದರೆ, ಸರ್ಕಾರ ಪಾರದರ್ಶಕವಾಗಿದ್ದ ಮೇಲೆ ಏತಕ್ಕೋಸ್ಕರ, ಯಾವ ಉದ್ದೇಶದಿಂದ ಇದನ್ನು ತಂದರೆಂಬುದನ್ನು ತಿಳಿಸಬೇಕು, ಈ ಸುತ್ತೋಲೆಯ ಮೂಲಕ ವಿರೋಧ ಪಕ್ಷದ ನಾಯಕರ ಅಧಿಕಾರವನ್ನೇ ನೀವು ಕಡಿತ ಮಾಡುತ್ತೇವೆಂದರೆ, ಹೇಗೆ? ಎರಡು ಸದನಗಳ ವಿರೋಧ ಪಕ್ಷದ ನಾಯಕರು ತಮ್ಮ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅಡಿಪಡಿಸಿ, ನೀವು ಅಧಿಕಾರಿಗಳಿಗೆ ಒಂದು ಕೆಟ್ಟ ಸಂಪ್ರದಾಯ ಹಾಕಿಕೊಟ್ಟಂತೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ, ಈ ಒಂದು ಸುತ್ತೋಲೆಯನ್ನು ಯಾವ ಉದ್ದೇಶದಿಂದ ಹೊರಡಿಸಿದರು. ಇದಕ್ಕೆ ಕಾರಣವೇನು? ವಿರೋಧ ಪಕ್ಷದ ನಾಯಕರಿಗೆ ಅಗೌರವ ಮಾಡಬೇಕೆನ್ನುವ ಉದ್ದೇಶದಿಂದ ಸರ್ಕಾರ ಈ ರೀತಿ ನಡೆದುಕೊಂಡಿದೆಯೋ ಏನೋ ನನಗೆ ಗೊತ್ತಿಲ್ಲ. ಇದರ ಜೊತೆಗೆ ಸರ್ಕಾರ ಪಾರದರ್ಶಕವಾಗಿರುವಾಗ, ಏಕೆ, ಈ ಸುತ್ತೋಲೆ? ಏನು ಕಾರಣ? ನಾನು ಹೇಳುವುದು, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ಮಾಡುವುದು ಬೇಡವೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಶಾಸಕರಿರಬಹುದು, ವಿರೋಧ ಪಕ್ಷದ ನಾಯಕರಿರಬಹುದು ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿಯನ್ನು ತೆಗೆದುಕೊಳ್ಳಬೇಡಿ, ನೀವು Right to Information Actನಲ್ಲಿ ತೆಗೆದಕೊಳ್ಳಿ ಎಂದು ಹೇಳುತ್ತೀರಿ. Right to Information Actನಲ್ಲೇ ತೆಗೆದುಕೊಳ್ಳುವುದಾದರೆ, 2 ಲಕ್ಷ ಜನರಿಂದ ಓಟನ್ನು ಹಾಕಿಸಿಕೊಂಡು ನಾವು ಇಲ್ಲೇ ಬರಬೇಕಾ? ನಾವು 2 ಲಕ್ಷ ಜನರಿಂದ ಗೆದ್ದು ಚುನಾಯಿತ ಪ್ರತಿನಿಧಿಗಳಾಗಿ, Right to Information ನಲ್ಲಿ ತೆಗೆದುಕೊಳ್ಳುವುದಾದರೆ ನಾನು ವಿಧಾನ ಸಭೆಗೆ ಬಂದು ಏಕೆ ಶಾಸಕನಾಗಬೇಕು, ವಿರೋಧ ಪಕ್ಷದ ನಾಯಕರಾಗಿ ಏಕೆ ಆಗಬೇಕು? ಯಾವ ರೂಪದಲ್ಲಿ ಮಾಹಿತಿಯನ್ನು ತೆಗೆದು ಕೊಳ್ಳಬೇಕು

ಹೇಳಿ. Right to Information Actನಲ್ಲಿ ತೆಗೆದುಕೊಳ್ಳಬೇಕೇ ಅಥವಾ ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎನ್ನುವುದನ್ನು ಸ್ಪಷ್ಟವಾಗಿ ಸರ್ಕಾರ ತಿಳಿಸಬೇಕು ಎಂದು ನಾನು ಮನವಿ ಮಾಡುತ್ತೇನೆ. ಈ ಸರ್ಕಾರ ಪಾರದರ್ಶಕವಾಗಿ ನಡೆದು ಕೊಳ್ಳುವುದಿಲ್ಲ. ನಾವು ಅಧಿಕಾರದಲ್ಲಿದ್ದು ಅಧಿಕಾರಿಗಳು ಭ್ರಷ್ಟಾಚಾರವನ್ನು ಮಾಡುವುದಕ್ಕೆ ಕಡಿವಾಣ ಹಾಕುವುದಿಲ್ಲ. ಅವರ ಜೊತೆಯಲ್ಲೇ ನಾವು ಭ್ರಷ್ಟಾಚಾರಕ್ಕೆ ಸಹಕಾರ ಮಾಡುತ್ತೇವೆ, ಎನ್ನುವುದು ತಮ್ಮ ಮನೋಭಾವನೆ ಯಾಗಿದ್ದರೆ ಮಾಡಿಕೊಳ್ಳಿ. ಬೇಡ ಎನ್ನುವುದಿಲ್ಲ. ಈ ಎಲ್ಲಾ ಭ್ರಷ್ಟಾಚಾರವನ್ನು ನಾವು ಮುಚ್ಚಿಹಾಕಿಕೊಳ್ಳಬೇಕು ಎನ್ನುವ ಉದ್ದೇಶದಿಂದ, ಸರ್ಕಾರ ವಿರೋಧ ಪಕ್ಷಕ್ಕೆ ಯಾವುದೇ ಮಾಹಿತಿಯನ್ನು ಕೊಡುವುದಿಲ್ಲ ಎನ್ನುವುದಿದ್ದರೆ ಒಂದು ಬೇರೆ ಸುತ್ತೋಲೆಯನ್ನು ಕೊಟ್ಟು ಬಿಡಿ, ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಕಾರ್ಯದರ್ಶಿಗಳಿಗೆ ಈ ಸರ್ಕಾರದಲ್ಲಿ ಮಾಡುವ ಎಲ್ಲಾ ಭ್ರಷ್ಟಾಚಾರದ ಮಾಹಿತಿಯನ್ನು ಯಾರಿಗೂ ಕೊಡಬೇಡಿ ಎಂದು ಇದರ ಜೊತೆಯಲ್ಲಿ ಬೇರೆ ಒಂದು ಸುತ್ತೋಲೆಯನ್ನು ಕಳುಹಿಸಿದರೆ ಚೆನ್ನಾಗಿರುತ್ತಿತ್ತು ಎಂಬುದು ನನ್ನ ಭಾವನೆಯಾಗಿದೆ. ದಯಮಾಡಿ, ಈ ಸುತ್ತೋಲೆಯನ್ನು ಸರ್ಕಾರ ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ ಇದರ ಜೊತೆಗೆ ಈ ಸುತ್ತೋಲೆಯನ್ನು ಯಾವ ಉದ್ದೇಶಕ್ಕಾಗಿ ಕಳುಹಿಸಿದರು, ಎರಡೂ ಸದನದ ವಿರೋಧ ಪಕ್ಷದ ನಾಯಕರ ಹಕ್ಕಿಗೆ ಇದು ಚ್ಯುತಿ ತಂದಿದೆ ಎಂಬುದನ್ನು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ, ಇದನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿ ಕೊಡುವುದು ಸೂಕ್ತವೆಂಬುದು ನನ್ನ ಭಾವನೆಯಾಗಿದೆ. ಇದುವರೆಗೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಪ್ರತಿಪಕ್ಷದ ನಾಯಕರು, ಉಪನಾಯಕರು ಮತ್ತು ಸನ್ಮಾನ್ಯ ಶ್ರೀ ರೇವಣ್ಣನವರು ಇವತ್ತು ನಿಯಮ 69ರ ಅಡಿಯಲ್ಲಿ ವಿಶೇಷವಾಗಿ 25-6-2009ರ ಸುತ್ತೋಲೆಯ ಬಗ್ಗೆ ಪ್ರಸ್ತಾಪಿಸಿ, ಅದರ ಬಗ್ಗೆ ವಿಚಾರವನ್ನು ಮಂಡಿಸಿದ್ದಾರೆ. ಸುತ್ತೋಲೆಯ ಮೇಲೆ ಬಹಳ ವಿಸ್ತೃತವಾದ, ದೀರ್ಘವಾದ ಚರ್ಚೆಯಾಗಿ ಅನೇಕ ಮಾಹಿತಿಗಳನ್ನು ಇಲ್ಲಿ ಕೊಟ್ಟಿದ್ದಾರೆ. ದಿನಾಂಕ 25-6-2009ರ ಸುತ್ತೋಲೆ ಇರಬಹುದು, ಸುತ್ತೋಲೆಯ ಭಾವನೆ ಇರಬಹುದು, ಸುತ್ತೋಲೆಯ ಇಂಗಿತವಿರಬಹುದು, ಅದ್ಯಾವುದೂ ಕೂಡ ಹೊಸದಲ್ಲ. ದಿನಾಂಕ 6-12-1985ರಲ್ಲಿ ಸಂಖ್ಯೆ:

ಡಿಪಿಎಆರ್ 113 ಪಿಎಸ್ಎಕ್ಸ್ 85, ಒಂದು ಸುತ್ತೋಲೆ ಕರ್ನಾಟಕ ಸರ್ಕಾರದಿಂದ ಪ್ರಕಟವಾಗಿತ್ತು. ವಿಷಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮೀಕ್ಷಣಾ ಸಭೆಗಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಾಜ್ಯ ಸರ್ಕಾರದ ನಾನಾ ಇಲಾಖೆಗಳ ಅಭಿವೃದ್ಧಿ ಇತರೇ ಕಾರ್ಯಕ್ರಮಗಳ ಸಮೀಕ್ಷಣಾ ಸಭೆಗಳನ್ನು ಶಾಸಕರ ಆದಿಯಾಗಿ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ನಡೆಸಬಹುದೆ ಎಂಬ ಪ್ರಶ್ನೆ ಉದ್ಭವಿಸಿದೆ. ಈ ವಿಚಾರದಲ್ಲಿ ಸರ್ಕಾರ, ದಿನಾಂಕ 29–11–1985 ರಂದು ಟೆಲಿಪ್ರಿಂಟರ್ ಮೂಲಕ ಕಳುಹಿಸಲಾದ ಆದೇಶವನ್ನು ಕೆಳಕಂಡಂತೆ ವಿಷದೀಕರಿಸಿರುತ್ತದೆ.

ಅ) ದಿನಾಂಕ 23–4–1980ರಂದು ಹೊರಡಿಸಿರುವ, ಸರ್ಕಾರಿ ಆದೇಶ ಮತ್ತು ಇತರೆ ಆದೇಶಗಳಲ್ಲಿ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆಯಾ ಕಾರ್ಯವ್ಯಾಪ್ತಿಗೆ ಒಳಪಟ್ಟ ಸಮೀಕ್ಷಣಾ ಸಭೆಗಳನ್ನು ಇವರು ನಡೆಸಬಹುದು.

ಆ) ಮೇಲೆ (ಅ)ನಲ್ಲಿ ಸೂಚಿಸಿರುವ ಪ್ರಸಂಗಗಳ ಹೊರತು ಶಾಸಕರೆ ಆಗಲಿ ಇತರೆ ಖಾಸಗಿ ಪ್ರಮುಖರೆ ಆಗಲಿ, ಜಿಲ್ಲಾ ಅಥವಾ ತಾಲ್ಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ನಡೆಸುವ ಹಾಗೆ ಇಲ್ಲ. ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರು ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶ ಇರುತ್ತದೆ. ಈ ಸ್ಪಷ್ಟನೆಯನ್ನು ತಮ್ಮ ಆಡಳಿತ ಅಧೀನದಲ್ಲಿರುವ ಎಲ್ಲಾ ಅಧಿಕಾರಿಗಳ ಗಮನಕ್ಕೆ ಅನುಸರಣೆಗೆ ಕೂಡಲೇ ತರಬೇಕೆಂದು ಸರ್ಕಾರ ಈ ಮೂಲಕ ಆದೇಶಿಸುತ್ತದೆ. ಸಹಿ ಟಿ.ಆರ್. ಸತೀಶ್ ಚಂದ್ರನ್ ಸರ್ಕಾರದ ಮುಖ್ಯಕಾರ್ಯದರ್ಶಿ. ಇದು 2008ನೇ ಇಸವಿ ಮೇ 30ನೇ ತಾರೀಖು ಬಂದ ಮೇಲೆ ಈ ಸುತ್ತೋಲೆ ಬಂದಿದ್ದು ಅಲ್ಲ. 1985ರ ಡಿಸೆಂಬರ್ 6ನೇ ತಾರೀಖು ಬಂದಿರುವ ಒಂದು ಸುತ್ತೋಲೆ. ಈ ಸುತ್ತೋಲೆ, ಸುತ್ತೋಲೆಯ ಭಾವನೆ, ಇದು ಹೊಸದಲ್ಲ. ಆದರೆ ಇಲ್ಲಿ ಇವತ್ತು ಪ್ರಸ್ತಾಪ ಏನು ಮಾಡುತ್ತಿದ್ದೇವೆ, ಈ ವಿಚಾರ ಬಹಳ ಹೊಸದಾಗಿ ಪ್ರಸ್ತಾಪ ಮಾಡುತ್ತಿದ್ದೇವೆ. 1962ನೇ ಇಸವಿಯಿಂದ ಈ ವರೆಗೆ ಈ ಸದನದಲ್ಲಿ ಸುಮಾರು 22 ಗೌರವಾನ್ವಿತ ಸದಸ್ಯರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ 22 ಜನ leader of the opposition ತಾವೂ ಕೂಡ, 1999ನೇ ಇಸವಿಯಿಂದ 2004ನೇ ಇಸವಿಯವರೆಗೆ ಇದೇ ಸದನದಲ್ಲಿ, ಸನ್ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ಸನ್ಮಾನ್ಯ ದೇವರಾಜ ಅರಸ್‌ರವರು, ಸನ್ಮಾನ್ಯ ಹೆಚ್.ಡಿ. ದೇವೇಗೌಡರು, ಸನ್ಮಾನ್ಯ ಎಸ್.ಆರ್. ಬೊಮ್ಮಾಯಿಯವರು, ಮಾನ್ಯ ಬಂಗಾರಪ್ಪನವರು, ಮಾನ್ಯ ವೀರಪ್ಪ

ಮೊಯಿಲಿಯವರು, ಮಾನ್ಯ ಧರ್ಮಸಿಂಗ್ ಮತ್ತು ಎಲ್ಲರಿಗಿಂತ ಮಾನ್ಯ ಶಿವಪ್ಪನವರು, longest standing Leader of the Opposition. If I am right, 1962 ರಿಂದ 1970ನೇ ಇಸವಿವರೆಗೆ ಬಹಳ ದೀರ್ಘ ಕಾಲ ಅವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಎಲ್ಲರೂ ವಿರೋಧ ಪಕ್ಷದ ನಾಯಕಾಗಿ ಕೆಲಸ ಮಾಡಿದ್ದಾರೆ. ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳು ಕೂಡ ಸುಮಾರು 3 ಬಾರಿ ವಿರೋಧ ಪಕ್ಷದ ನಾಯಕರಾಗಿ ಆ ಜಾಗದಿಂದ ಈ ಸಭೆಯಲ್ಲಿ ಕೆಲಸ ಮಾಡಿರುವುದು ತಮಗೆಲ್ಲರಿಗೂ ಗೊತ್ತಿದೆ. ಇವತ್ತು ಸನ್ಮಾನ್ಯ ಸಿದ್ಧರಾಮಯ್ಯನವರು ವಿರೋಧ ಪಕ್ಷದ ನಾಯಕರ ಪಾತ್ರ ಕುರಿತಂತೆ ಜವಹರಲಾಲ್ ನೆಹರುರವರ ಮಾತನ್ನು ಕೋಟ್ ಮಾಡಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. He was a great democrat, a very great Parliamentarian. He had respect for opposition. ಅವರೆಲ್ಲಾ ಒಂದು ರೀತಿ ಇಟ್ಟುಕೊಂಡಿದ್ದರು. ಯಾವ ರೀತಿ convention ಅಂದರೆ ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಆಗ ಸನ್ಮಾನ್ಯ ಪ್ರಧಾನ ಮಂತ್ರಿಗಳು ಪ್ರತಿ ಸೋಮವಾರ ಹೋಗಿ ರಾಷ್ಟ್ರಪತಿಗಳನ್ನು ಭೇಟಿ ಮಾಡುವ ಒಂದು ಸಂಪ್ರದಾಯವನ್ನು ಇಟ್ಟು ಕೊಂಡಿದ್ದರು. Every Monday. ಅದು courtesy visit ಮಾಹಿತಿ ಕೊಡುವುದಕ್ಕೆ, every Monday ಈ ಕಾರ್ಯಕ್ರಮ ಇತ್ತು. ಇವತ್ತು ಯಾರಾದರೂ ಅದನ್ನು ಫಾಲೋ ಮಾಡಿದ್ದಾರಾ? ಬಹಳ ಒಳ್ಳೆಯ convention ಇದೆ. ಈ ರೀತಿ ಅವರ ಭಾವನೆ ಇತ್ತು. ನಾನೂ ಕೂಡ, ಈ ಸಭೆಯ ಎಲ್ಲ ಸದಸ್ಯರು ಕೂಡ, ಮಾನ್ಯ ದಿ. ಜವಹರಲಾಲ್ ನೆಹರುರವರು ಏನು ಭಾವನೆ ವ್ಯಕ್ತಪಡಿಸಿದರು ವಿರೋಧ ಪಕ್ಷದ ಪ್ರಾಮುಖ್ಯತೆ ಬಗ್ಗೆ ವಿರೋಧ ಪಕ್ಷದ ಮಹತ್ವದ ಬಗ್ಗೆ, ವಿರೋಧ ಪಕ್ಷದ importance ಬಗ್ಗೆ ಅದನ್ನು ನಾವು ಸಂಪೂರ್ಣ ಒಪ್ಪಿಕೊಳ್ಳುತ್ತೇವೆ, ಅದರ ಪಾತ್ರ ಇದ್ದೇ ಇದೆ, ಅದನ್ನು ಯಾರೂ ಕೂಡ, nobody is denying the opposition party's role and importance. ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಒಪ್ಪಿಕೊಂಡಿರುವುದು ಬಹಳ ಸಲ ಇಲ್ಲಿ ಹೇಳುತ್ತಲೇ ಇರುತ್ತೇವೆ. ನೀವು ಇಲ್ಲಿ ಇದ್ದಾಗ ಹೇಳುತ್ತಿದ್ದೀರಿ, ಈಗ ನಾವು ಹೇಳಬೇಕು.

Opposition will have its say, Treasury Bench or Ruling party will have its way. ನಾನು ಸುಮ್ಮನೆ ಯೋಚಿಸುತ್ತಿರುತ್ತೇನೆ. ಸದನದಲ್ಲಿ ಪತ್ರಿಕರ್ತರು ವಿರೋಧ ಪಕ್ಷದ ಹತ್ತಿರ ಇರುತ್ತಾರೆ. ರೂಲಿಂಗ್ ಪಾರ್ಟಿ ಹತ್ತಿರ ಇರುವುದಿಲ್ಲ. ನಾನು ಹಾಗೆಯೇ ಯೋಚಿಸಿದೆ. Right to Information Act

ನೀವು ಹೇಳುವುದು, what you will say, ಅದನ್ನು ಜನರಿಗೆ ಮುಟ್ಟಿಸುವುದಕ್ಕೋಸ್ಕರ ಪ್ರತಿ ಸಲ ನಿಮ್ಮ ಹತ್ತಿರ ಅವರು ಇರುತ್ತಾರೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಕೌಲ್ ಅಂಡ್ ಶಕ್ದರ್‌ನಲ್ಲಿ ಏನು ಹೇಳಿದ್ದಾರೆಂದರೆ, ಟ್ರೆಜರಿ ಬೆಂಚ್ ಸ್ಪೀಕರ್ ಬಲ ಭಾಗದಲ್ಲಿ ಇರಬೇಕು. ಅಧಿಕಾರಿಗಳು ನಿಮ್ಮ ಬಲ ಭಾಗದಲ್ಲಿ ಇರಬೇಕೆಂದು ಹೇಳಿದ್ದಾರೆ. ಹಾಗಾಗಿ ಅವರು ಎಡ ಭಾಗದಲ್ಲಿ ಇರುವುದು. ನಮ್ಮ ಪಕ್ಕದಲ್ಲಿ ಅಲ್ಲ ಅವರು ಇರುವುದು.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಪ್ರತಿ ಪಕ್ಷದ ನಾಯಕರು ಎಂದು ಒಂದು ಸ್ಥಾನ ಇದೆ. ಆ ಸ್ಥಾನ ಯಾರು ರೆಕಗ್ನೈಸ್ ಮಾಡಿರುವುದು? This Housed ಅದಕ್ಕೋಸ್ಕರ ಪೇಜ್ 4ರ ನಮ್ಮ ರೂಲ್‌ನಲ್ಲಿ, "ವಿರೋಧ ಪಕ್ಷದ ನಾಯಕರು ಎಂದರೆ, ಸರ್ಕಾರವನ್ನು ರಚಿಸುವ ಪಕ್ಷ ಅಲ್ಲದೆ ಹೆಚ್ಚಿನ ಸಂಖ್ಯೆ ಸದಸ್ಯರನ್ನು ಹೊಂದಿರುವ ಮತ್ತು ನಿರ್ದಿಷ್ಟಪಡಿಸಲಾದ ಸಂಖ್ಯಾ ಬಲ," ಕೋರಂಗಿಂತ ಜಾಸ್ತಿ ಇರಬೇಕು. "ನಿರ್ದಿಷ್ಟಪಡಿಸಲಾದ ಸಂಖ್ಯಾ ಬಲ ಕೋರಂ ಅನ್ನು ಹೊಂದಿರುವ ಮತ್ತು ವಿಧಾನ ಸಭಾಧ್ಯಕ್ಷರಿಂದ ವಿರೋಧ ಪಕ್ಷದ ನಾಯಕ ಎಂದು ಮಾನ್ಯತೆ ಪಡೆದ ವಿಧಾನ ಮಂಡಲದ ಪಕ್ಷದ ಸಭಾ ನಾಯಕ."You are an Opposition Leader as recognized by Hon'ble Speaker in this House. ಯಾವಾಗ? ನಿಮ್ಮ ಸಂಖ್ಯೆ ಎಷ್ಟು ಎಂದು ನೋಡುತ್ತಾರೆ, ನಿಮ್ಮಿಂದ ಸರ್ಕಾರ ರಚಿಸುವುದಕ್ಕೆ ಆಗಲಿಲ್ಲ. ಆ ಒಂದು ಸ್ಥಿತಿಯಲ್ಲಿ "ವಿರೋಧ ಪಕ್ಷದ ನಾಯಕರು ಎಂದರೆ, ಸರ್ಕಾರ ರಚಿಸುವ ಪಕ್ಷ ಅಲ್ಲದೆ, ಹೆಚ್ಚಿನ ಸಂಖ್ಯೆ ಸದಸ್ಯರನ್ನು ಹೊಂದಿರುವ ಮತ್ತು ನಿರ್ದಿಷ್ಟಪಡಿಸಲಾದ ಸಂಖ್ಯಾ ಬಲ ಕೋರಂ ಅನ್ನು ಹೊಂದಿರುವ ಹಾಗೂ ವಿಧಾನ ಸಭಾಧ್ಯಕ್ಷರಿಂದ ವಿರೋಧ ಪಕ್ಷದ ನಾಯಕ ಎಂದು ಮಾನ್ಯತೆ ಪಡೆದ ವಿಧಾನ ಮಂಡಲ ಪಕ್ಷದ ನಾಯಕ." ಆಕಸ್ಮಾತ್ ಎರಡೂ ಪಕ್ಷಗಳಿಗೆ ಒಂದೇ ನಂಬರ್ ಬರುತ್ತದೆ ಇಬ್ಬರದೂ ಈಕ್ವಲ್ ಬರುತ್ತದೆ. ಆಗ "ಪರಂತು ಒಂದಕ್ಕಿಂತ ಹೆಚ್ಚು ಪಕ್ಷವು ಅಷ್ಟೇ ಸಂಖ್ಯೆಯ ಸದಸ್ಯರನ್ನು ಹೊಂದಿದ್ದು ಮಾನ್ಯತೆಗಾಗಿ ಸ್ಪರ್ಧೆ ಇದ್ದರೆ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರತಿಯೊಂದು ತಂಡದ ಸದಸ್ಯರು ಪಡೆದ ಮತಗಳ ಸಂಖ್ಯೆಯನ್ನು ಲೆಕ್ಕ ಹಾಕತಕ್ಕದ್ದು ಮತ್ತು ಹೆಚ್ಚಿನ ಸಂಖ್ಯೆಯ ಮತವನ್ನು ಪಡೆದ ತಂಡಕ್ಕೆ ಅಧಿಕೃತ ಪಕ್ಷವೆಂದು ಮತ್ತು ಅದರ ನಾಯಕನನ್ನು ವಿರೋಧ ಪಕ್ಷದ ನಾಯಕ ಎಂದು ಮಾನ್ಯತೆ ನೀಡತಕ್ಕದ್ದು." ಮಾನ್ಯ ಸಿದ್ದರಾಮಯ್ಯನವರೇ, ನನಗನ್ನಿಸುವುದು ಇನ್ನು ಮೇಲೆ ನಾವೂ ಕೂಡ

ವಿರೋಧ ಪಕ್ಷ ಎನ್ನುವ ಹೆಸರಿಗೆ full stop ಹಾಕಿ ಪ್ರತಿ ಪಕ್ಷ ಎಂದು ಕರೆಯೋಣ. ವಿರೋಧ ಪಕ್ಷ ವಿರೋಧ ಪಕ್ಷ ಎನ್ನುವುದು, ಎಲ್ಲೋ it sends wrong annotations. ನೀವು ಪ್ರತಿ ಪಕ್ಷದ ನಾಯಕರು. As you said, shadow Cabinet, Shadow Prime Minister and Shadow Chief Minister. Shadow Chief Minister ಅದು ಯಾವಾಗ ಆಗುತ್ತದೆ ಎಂದರೆ, ನಿಮ್ಮಲ್ಲಿ Shadow Cabinet Ministers ಇರಬೇಕು. ಒಬ್ಬ Health Minister, ಒಬ್ಬ Finance Minister, ಒಬ್ಬ Food Minister, ಈ ರೀತಿ shadow Cabinet ಇದ್ದಾಗ ನೀವು Shadow Chief Minister ಆಗುತ್ತೀರಿ. Unfortunately, ನಮ್ಮ ದೇಶದಲ್ಲಿ ಆ ಪದ್ಧತಿ ಲೆಟರ್‌ನಲ್ಲಿ ಇದೇ ಹೊರತು spirit ನಲ್ಲಿ ಬರಲಿಲ್ಲ. ಅದು ಬೇರೆ ಪ್ರಶ್ನೆ. ಹೀಗಿರುವಾಗ ನಿಮ್ಮನ್ನು ಇವತ್ತು ವಿಧಾನ ಮಂಡಲದ ವಿರೋಧ ಪಕ್ಷದ ನಾಯಕ ಎಂದು ಗುರುತಿಸಿರುವುದು ಸನ್ಮಾನ್ಯ ಸಭಾಧ್ಯಕ್ಷರು, ಗುರುತಿಸಿರುವುದು ನಮ್ಮ ರೂಲ್ಸ್ ಬುಕ್‌ನಿಂದ ಬಹಳ ಕ್ಲಿಯರ್ ಆಗಿದೆ. ಅನೇಕ ಸಂಗತಿಗಳು ಅಡ್ಮಿಟೆಡ್ ಆಗಿದೆ. ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಜಯಚಂದ್ರರವರು, ಮಾತನಾಡುವಾಗ ಒಂದಷ್ಟು ಹೊಸ ವಿಚಾರಗಳು ಬರುತ್ತವೆ ಎಂದು, I was just eagerly waiting. ಆದರೆ same old ಮಾತುಗಳು. ಫ್ಯಾಸಿಸಂ, ವಿರೋಧ ಪಕ್ಷದ ನಾಯಕರನ್ನು ಹತ್ತಿಕ್ಕುವುದು, ಬಾಯಿ ಮುಚ್ಚಿಸುವುದು, ಇದೇ ಪದಗಳನ್ನು ಇವತ್ತು ಮತ್ತೆ ಉಪಯೋಗಿಸಿದ್ದಾರೆ. ಉಪಯೋಗಿಸಿ ಉಪಯೋಗಿಸಿ ಈಗ ಮತ್ತೆ ಉಪಯೋಗಿಸಿದ್ದಾರೆ. ಇವತ್ತು ಒಂದು circular ಬಗ್ಗೆ ಚರ್ಚೆ ಆಗುತ್ತಿದೆ. ಆ circular dated ಬಹಳ ಮುಖ್ಯ. ಮಾನ್ಯ ಸಿದ್ದರಾಮಯ್ಯನವರಿಗಿಂತ ಮಾನ್ಯ ಜಯಚಂದ್ರರವರಿಗೆ ಈ circular date ಬಹಳ ಮುಖ್ಯ. Circular dated 25–6–2009 ಅಂದರೆ ಜೂನ್ 25, 2009. ಈ ದೇಶದಲ್ಲಿ ಜೂನ್ 25ಕ್ಕೆ ಅದರದೇ ಆದ ಮಹತ್ವ ಇದೆ. ಇವತ್ತು ನೀವು ವಿರೋಧ ಪಕ್ಷದ ನಾಯಕರ ಹಕ್ಕುಗಳ ಬಗ್ಗೆ ಫ್ಯಾಸಿಸಂ ಬಗ್ಗೆ ವಿರೋಧ ಪಕ್ಷದ ನಾಯಕರ ಬಾಯಿ ಕಟ್ಟುವ ಬಗ್ಗೆ ಬಹಳ ಮಾತನಾಡಿದಿರಲ್ಲಾ, ಜೂನ್ 25, 1975 ಏನು ಸ್ವಾಮಿ ಮಾಡಿದಿರಿ? ಏನು ಮಾಡಿದಿರಿ? ದೇಶದ ವಿರೋಧ ಪಕ್ಷದ ನಾಯಕರನ್ನು, ನಮ್ಮ ರಾಜ್ಯದ ವಿರೋಧ ಪಕ್ಷದ ನಾಯಕರನ್ನು, ಇಡೀ ದೇಶದ ವಿರೋಧ ಪಕ್ಷದ ನಾಯಕರುಗಳನ್ನು ಎಲ್ಲಿಗೆ ಕಳುಹಿಸಿದಿರಿ ನೀವು? Central Jailಗೆ ಕಳುಹಿಸಿದಿರಿ. ಇಡೀ ದೇಶವನ್ನೇ ಜೈಲಾಗಿ ಮಾಡಿದಿರಿ. ಅಂತಹ ಒಂದು ಕೀರ್ತಿ ಇರುವವರು ಇವತ್ತು ಒಂದು circular ಇಟ್ಟುಕೊಂಡು ನಮ್ಮ ಹಕ್ಕು

ಮೊಟಕು ಆಗಿ ಹೋಗಿದೆ, ನಮ್ಮ ಬಾಯಿ ಮುಚ್ಚಿಸುತ್ತಿದ್ದಾರೆ, ಫ್ಯಾಸಿಸಂ., very strange. Sir Please allow, ನಿಮ್ಮ ಮಾತು ನಾನು ಪೂರ್ತಿ ಒಂದೂವರೆ ಗಂಟೆಯಿಂದ ಕೇಳಿಸಿಕೊಂಡಿದ್ದೇನೆ.

ಶ್ರೀ ಸಿದ್ದರಾಮಯ್ಯ: ಅದಕ್ಕೂ ಇದಕ್ಕೂ ಏನು ಸಂಬಂಧ?

Sri S. Suresh Kumar: Sir, I am not yielding. If he is a true democrat, he should allow me to talk.

Sri Siddaramaiah: I was also imprisoned during emergency. It is a different topic.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ನೀವು ಬೈದದ್ದು ಎಲ್ಲಾ ಕೇಳಿಸಿ ಕೊಳ್ಳಬೇಕು. ಸ್ವಲ್ಪ ಸೂಜಿ ತೆಗೆದುಕೊಂಡು ಚುಚ್ಚಿದರೆ ಕಷ್ಟ, ನೀವು ದಬ್ಬಳ ತೆಗೆದುಕೊಂಡು ಚುಚ್ಚಿದರೆ ಪರವಾಗಿಲ್ಲ. What is this?

ಇಡೀ ದೇಶದಲ್ಲಿ ವಿರೋಧ ಪಕ್ಷದ ನಾಯಕರನ್ನು ಹದಿನೆಂಟು ತಿಂಗಳು ಜೈಲಿಗೆ ಕಳುಹಿಸಿ ಐದು ವರ್ಷ ಇದ್ದ ಅಸೆಂಬ್ಲಿಯನ್ನು, ಐದು ವರ್ಷ ಇದ್ದ ಪಾರ್ಲಿಮೆಂಟ್‌ನ್ನು ಆರು ವರ್ಷ ಮಾಡಿಕೊಂಡಿರಲ್ಲಾ, ಇದು ಸಂಸದೀಯ ಪದ್ಧತಿ.

Sri Siddaramaiah: Do you want to follow it?

Sri S. Suresh Kumar: We are not following. Definitely I am not following. ನೀವು ಕೈನೆಟಿಕ್ ಹೊಂಡಾ ಓಡಿಸಿಬಿಟ್ಟಿದ್ದೀರಿ. ಕೈನೆಟಿಕ್ ಹೊಂಡಾ ಓಡಿಸಿದರೆ ಅದರಲ್ಲಿ ಗೇರಗಳು ಇರುವುದಿಲ್ಲ. ಅದೇ ಚೇತಕ್ ಆದರೆ ಅದರಲ್ಲಿ first gear, second gear, third gear, fourth gear ಇರುತ್ತದೆ, ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ನಾನು. I am just coming.

ಶ್ರೀ ಅರವಿಂದ ಲಿಂಬಾವಳಿ: ದೇವೇಗೌಡರನ್ನು ಕೂಡ ಒಳಗೆ ಹಾಕಿದ್ದರು. ದೇವೇಗೌಡರನ್ನೂ ಕೂಡ ಒಳಗೆ ಹಾಕಿ ಏನು ಮಾಡಿದ್ದಾರೆ ಎಂಬುದು ಗೊತ್ತಿದೆಯಲ್ಲಾ. ರೇವಣ್ಣನವರು ಏಕೋ ಈಗ ಅದರ ಬಗ್ಗೆ ಏನನ್ನೂ ಹೇಳುತ್ತಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಅವರು ಈಗ ಹೇಳಿದ್ದರಿಂದ ನಾನು ಈಗ ಹೇಳುತ್ತಿದ್ದೇನೆ, ಅವರು ಮಾಡಿದರು ಎಂದು ಅದೇ ರೀತಿ ಇವರು ಮಾಡುವುದಕ್ಕೆ ಹೊರಟಿದ್ದಾರೆಯೇ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ರೇವಣ್ಣನವರೆ, ಸ್ವಲ್ಪ ತಂಪಾಗಿ ಕುಳಿತು ಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ: ನಾನು ತಂಪಾಗಿಯೇ ಕುಳಿತಿದ್ದೇನೆ.

ಶ್ರೀ ಕೆ.ಎ. ಜಾರ್ಜ್: ಹಿಂದೆ ಏನೋ ಆಗಿದೆಯೆಂದು ಇವರು ಹೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ಜಾರ್ಜ್‌ರವರೆ, ಇತಿಹಾಸ ಪಳೆಯುಳಿಕೆಗಳು ಕೆಲವರು ಇರುತ್ತಾರೆ. ಅಂಥವರು ಇಲ್ಲಿಯೂ ಇದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಬಿ. ರಮಾನಾಥ ರೈ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ರಮಾನಾಥ ರೈರವರೆ, ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಆಮೇಲೆ ಬೇಕಾದರೆ ನೀವು ಕೇಳುವಿರಂತೆ.

ಶ್ರೀ ಬಿ. ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿನಂತಿ, ಹಳೆಯದನ್ನು ಕೆದಕುತ್ತಾ ಹೋದರೆ ಅದು ಎಲ್ಲೆಲ್ಲಿಗೋ ಹೋಗುತ್ತದೆ.

ಶ್ರೀ ಸಿದ್ಧರಾಮಯ್ಯ: ಮಹಾತ್ಮ ಗಾಂಧೀಜಿಯವರನ್ನು ಯಾರು ಕೊಂದವರು ಎಂಬ ಬಗ್ಗೆ ಕೂಡ ಚರ್ಚೆ ಮಾಡೋಣ. ಗಾಂಧೀಜಿ ಕೊಂದವರ ವಂಶಕ್ಕೆ ಯಾರು ಸೇರಿದವರು ಎಂಬ ಬಗ್ಗೆ ಕೂಡ ಚರ್ಚೆ ಮಾಡೋಣ. ಗಾಂಧೀಜಿ ಕೊಂದವರು ಯಾರು? ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಚ್ಚಳಿಕೆ ಬರೆದುಕೊಟ್ಟು ಬಂದವರು ಯಾರು? ಎಮರ್ಜೆನ್ಸಿಯಲ್ಲಿ ಮುಚ್ಚಳಿಕೆಯನ್ನು ಬರೆದುಕೊಟ್ಟು ಬಂದವರು ಯಾರು ಎಂಬ ಬಗ್ಗೆ ಕೂಡ ಚರ್ಚೆ ಮಾಡೋಣ.

ಶ್ರೀ ಕೆ.ಎ. ಜಾರ್ಜ್: ಮಾನ್ಯ ಸುರೇಶ್ ಕುಮಾರ್‌ರವರೆ, ಜನರು ನಿಮ್ಮನ್ನು ಅಧಿಕಾರಕ್ಕೆ ತೆಗೆದುಕೊಂಡು ಬಂದಿದ್ದಾರೆ. ಇದು ಪ್ರಜಾಪ್ರಭುತ್ವ. ಆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಇವತ್ತು circular ಕಳುಹಿಸಿ ನೀವು ಈ ರೀತಿ ಮಾಡುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ: ನೀವು ಮಾಡಿದ್ದೀರಿ, ಅದೇ ರೀತಿ ನಾವು ಮಾಡುತ್ತೇವೆ ಎಂದು ಹೇಳಿ. Come to the point.

ಶ್ರೀ ಎಸ್. ಸುರೇಶ್ ಕುಮಾರ್: ಅಲ್ಲ ಸ್ವಾಮಿ, ನೀವು ಒಂದೂವರೆ ಗಂಟೆಯಾದ ಮೇಲೆ pointಗೆ ಬರಬಹುದು, ಆದರೆ ನಾವು ಮಾತ್ರ ಏಳೇ ನಿಮಿಷಕ್ಕೆ point ಗೆ ಬರಬೇಕು. How is it? Allow me, allow me to talk.

ಶ್ರೀ ಬಿ. ರಮನಾಥ ರೈ: ಅದಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ಎಸ್. ಸುರೇಶ್‌ಕುಮಾರ್: ಹೌದೌದು, ನಿಮಗೆ ಇಷ್ಟವಿಲ್ಲದಿರುವಾಗ ಸಂಬಂಧವಿರುವುದಿಲ್ಲ. ಅದೇ ನಿಮಗೆ ಇಷ್ಟವಿರುವಾಗ ಎಲ್ಲವೂ ಸಂಬಂಧವೇ.

Sri Siddaramaiah: Is it your statement ಹಿಂದೆ ಎಮರ್ಜೆನ್ಸಿ ಬಂದಿತ್ತು. ಆಗ ಮಾಡದ್ದನ್ನು ನೋಡಿಯೇ ನಾವು ಅದೇ ರೀತಿ ಮಾಡುತ್ತೇವೆಂದು.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ಇದು ನಿಜವಾಗಿಯೂ ಬಾಯಿ ಮುಚ್ಚಿಸುವ ಪ್ರಯತ್ನ.

ಶ್ರೀ ಬಿ.ಸಿ. ಪಾಟೀಲ್: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ಬಿ.ಸಿ. ಪಾಟೀಲರೆ, ನೀವು ಕುಳಿತುಕೊಳ್ಳಿ, ಅವರು ಈಲ್ಡ್ ಆಗಿಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಮ್ಮ ಪ್ರತಿ ಪಕ್ಷದ ನಾಯಕರು, ಅದರಲ್ಲಿಯೂ ವಿಶೇಷವಾಗಿ ಸಿದ್ಧರಾಮಯ್ಯನವರು ಮಾತನಾಡಿದರು. ಸಿದ್ಧರಾಮಯ್ಯನವರು, ಉಗ್ರಪ್ಪನವರು ಬಂದಾಗಲೇ ಈ circular ಏಕೆ ಬಂತು? ಬಿ.ಜೆ.ಪಿ. ಸರ್ಕಾರ ಬಂದಾಗಲೇ ಏಕೆ ಬಂತು ಎನ್ನುವ ಗಹನವಾದ ಪ್ರಶ್ನೆಯನ್ನು ಸಭೆಯ ಮುಂದೆ ಎತ್ತಿದ್ದಾರೆ. ಆದರೆ 1962ನೇ ಇಸವಿಯಿಂದ 22 ಜನ ವಿರೋಧ ಪಕ್ಷದ ನಾಯಕರು ಮಾಡಿರದ, ಹುಟ್ಟು ಹಾಕದ ಒಂದು ಪದ್ಧತಿಯನ್ನು ನೀವು ತಂದಿರಲ್ಲ, ಅದೂ ಕೂಡ ನೀವು ಬಂದ ಮೇಲೆಯೇ ಏಕೆ ಬಂತು ಇಂಥ ಪದ್ಧತಿ? ಅದೂ ಬಿ.ಜೆ.ಪಿ. ಸರ್ಕಾರ ಬಂದಾಗಲೇ ಏಕೆ ಬಂತು ಇಂಥ ಪದ್ಧತಿ? 22 ಜನ ವಿರೋಧ ಪಕ್ಷದ ನಾಯಕರು ಈ ಹಿಂದೆ ಇದ್ದರು. ಅವರು ಯಾರೂ ಮಾಡದೇ ಇರುವ ಒಂದು ಪದ್ಧತಿಯನ್ನು ಏಕೆ ಈಗ ಇವರು ಹುಟ್ಟು ಹಾಕಿದರು? ಇದು ಒಂದು ಪ್ರಶ್ನೆ. ಬಿ.ಜೆ.ಪಿ. ಸರ್ಕಾರ ಬಂದಾಗಲೇ ಈ ಒಂದು ಪ್ರಶ್ನೆ, ಈ ಒಂದು ವಿಷಯ ಏಕೆ ಪ್ರಸ್ತಾಪವಾಗುತ್ತಿದೆಯೆಂದು ನಾಡಿನಲ್ಲಿ ಯಾರು ಸಂಸದೀಯ ನಡವಳಿಕೆಯನ್ನು ನೋಡಿಕೊಂಡು ಬಂದಿದ್ದಾರೆ ಅವರು ಕೇಳುತ್ತಿರುವ ಒಂದು

ಪ್ರಶ್ನೆಯಾಗಿದೆ ಇದು. ಮಾನ್ಯ ಅಧ್ಯಕ್ಷರೆ, ದಿನಾಂಕ 1-7-2009ರ ಪ್ರಜಾವಾಣಿಯ ಸಂಪಾದಕೀಯದಲ್ಲಿ ಈ ರೀತಿ ಬಂದಿದೆ. ಅದೇನೆಂದರೆ, ವಿಧಾನ ಮಂಡಲದ ವಿರೋಧ ಪಕ್ಷದ ನಾಯಕರು ಜಿಲ್ಲಾ ಪ್ರವಾಸದ ವೇಳೆ ಅಧಿಕಾರಿಗಳ ಸಭೆ ಕರೆದು ಅಭಿವೃದ್ಧಿ ಕಾರ್ಯಗಳ ಪರಿಶೀಲನೆ ಮಾಡುವ ಮೂಲಕ ಹೊಸ ವಿವಾದವನ್ನು ಹುಟ್ಟು ಹಾಕಿರುವುದು ವಿಚಿತ್ರ ಬೆಳವಣಿಗೆ. ಇದು ನಮ್ಮ ಸುತ್ತೋಲೆಯ ಭಾಗವಲ್ಲ. ಶಾಸಕಾಂಗ ವ್ಯವಸ್ಥೆಯಲ್ಲಿ ಮಂತ್ರಿಮಂಡಲದ ಸದಸ್ಯರ ಮತ್ತು ವಿರೋಧ ಪಕ್ಷಗಳ ನಾಯಕರ ಪಾತ್ರ, ಅವರ ಕೆಲಸದ ಇತಿಮಿತಿ, ಇವುಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಅಧಿಕೃತ ವಿರೋಧ ಪಕ್ಷದ ನಾಯಕರಿಗೆ ಸಚಿವರಿಗೆ ಇರುವ ಸ್ಥಾನಮಾನ ಮತ್ತು ಸೌಲಭ್ಯವನ್ನು ಕಲ್ಪಿಸಲಾಗಿದೆ.

ಶ್ರೀ ಕೆ.ಎ. ಜಾರ್ಜ್: ಪತ್ರಿಕೆಯಲ್ಲಿ ಬಂದಿರುವುದನ್ನೆಲ್ಲಾ ಇವರು ಹೇಳುವುದಾದರೆ...

ಅಧ್ಯಕ್ಷರು: ನೋಡಿ, ಈಗ ಸಚಿವರು ಉತ್ತರ ಕೊಡುತ್ತಿದ್ದಾರೆ. ಮೊದಲು ಅದನ್ನು ಕೇಳಿ. ಆಮೇಲೆ ನೀವು ಕ್ಲಾರಿಫಿಕೇಶನ್ ಕೇಳಿ. ಆಮೇಲೆ ಅವಕಾಶ ಕೊಡುತ್ತೇನೆ. ಸಾಯಂಕಾಲದವರೆಗೂ ಚರ್ಚೆ ಮಾಡೋಣ. ಏಕೆ ಈ ರೀತಿ ಮಧ್ಯೆ ಮಾತನಾಡುತ್ತೀರಿ? ಮೊದಲು ಉತ್ತರವನ್ನು ಕಂಪ್ಲೀಟ್ ಮಾಡಲಿ. ಅವರು ಯಾವುದನ್ನು ರೆಫರ್ ಮಾಡುತ್ತಾರೋ ಮಾಡಲಿ.

ಶ್ರೀ ಎಸ್. ಸುರೇಶ್ ಕುಮಾರ್: ಆದರೆ...

ಶ್ರೀ ಕೆ.ಎ. ಜಾರ್ಜ್: ನಿಮ್ಮದ್ದನ್ನೂ ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ಹಾಗೆ ನಾನು ಹೇಳಬೇಕೆಂದು ನನಗೆ ಈ ಸ್ಥಾನ ಕೊಟ್ಟಿಲ್ಲ. ಸದನಕ್ಕೆ ನಾನು ಸರಿಯಾದ ಮಾಹಿತಿಯನ್ನು ಕೊಡುವುದಕ್ಕೋಸ್ಕರ ನನಗೆ ಈ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಸಂಪಾದಕೀಯದಲ್ಲಿದೆ, ಆದರೆ ಅವರು ನಿರ್ವಹಿಸಬೇಕಾದ ಕಾರ್ಯದಲ್ಲಿ ಬೇರೆ ಬೇರೆ ಪಾತ್ರವೇ ಇದೆ. ಅಂದರೆ ಸಚಿವರು ಮತ್ತು ವಿರೋಧ ಪಕ್ಷದ ನಾಯಕರು. ಸರ್ಕಾರ ತಪ್ಪು ಮಾಡಿದಾಗ ಅದರ ಕಿವಿ ಹಿಂಡಿ ಸರಿ ದಾರಿಗೆ ತರುವ ಕೆಲಸ ವಿರೋಧಿ ನಾಯಕರದ್ದು. ಯಾವುದೇ ಅಭಿವೃದ್ಧಿ ಕಾರ್ಯದ ಬಗ್ಗೆ ವಿರೋಧಿ ನಾಯಕರು ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯುವುದರಲ್ಲಿ ತಪ್ಪೇನು ಇಲ್ಲ. O.K. ಮಾಹಿತಿ ತಕ್ಷಣ ಲಭ್ಯವಿಲ್ಲದಿದ್ದರೆ ಒಂದಷ್ಟು ಸಮಯ ನೀಡಿ ಅದನ್ನು ಪಡೆಯಬಹುದು. ಆದರೆ, ಸಾರ್ ಈಗ ಹೊಸ ಟ್ರೆಂಡ್‌ನ್ನು ಈಗ

ನೋಡುತ್ತಿದ್ದೇವೆ, ಸಿದ್ದರಾಮಯ್ಯನವರೆ, ಇದರ ಜೊತೆ ನಿಮ್ಮ ಭಾವನೆಯನ್ನೂ ಕೂಡ ಸೇರಿಸುತೀರಿ ಎಂದು ನಾನು ಅಂದು ಕೊಂಡಿದ್ದೇನೆ. ಆದರೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವುದು, ಬೈಯ್ಯುವುದು ಅಪೇಕ್ಷಣಿಯವಲ್ಲ. ಇಂಥಹದೇ ವಿವಾದವು ಈ ಹಿಂದೆ ರಾಮಕೃಷ್ಣ ಹೆಗಡೆ ಮತ್ತು ಟಿ.ಎನ್. ನರಸಿಂಹಮೂರ್ತಿಯವರ ನಡುವೆ ಜಟಾಪಟಿಗೆ ಕಾರಣವಾಗಿತ್ತು. ವಿಧಾನಸಭೆಯ ವಿರೋಧಿ ನಾಯಕ ಸಿದ್ಧರಾಮಯ್ಯ ಮತ್ತು ವಿಧಾನ ಪರಿಷತ್ತಿನ ವಿರೋಧಿ ನಾಯಕ ವಿ.ಎಸ್. ಉಗ್ರಪ್ಪ, ಇವರು ಧಾರವಾಡ, ಬಿಜಾಪುರ ಜಿಲ್ಲೆಗಳಲ್ಲಿ ಅಧಿಕಾರಿಗಳ ಸಭೆ ನಡೆಸುವ ಮೂಲಕ ಅನಗತ್ಯ ವಿವಾದ ಎದ್ದಿರುವುದು ಸರ್ಕಾರ ಮತ್ತು ವಿರೋಧ ಪಕ್ಷದ ಕಾರ್ಯ ವೈಖರಿ ಬಗ್ಗೆ ಗೊಂದಲ ಉಂಟಾಗಿರುವುದು ಸರಿಯೆನಿಸುವುದಿಲ್ಲ. ಈ ಗೊಂದಲದಿಂದಾಗಿ ಮುಖ್ಯ ಕಾರ್ಯದರ್ಶಿಗಳವರು ಅಧಿಕಾರಿಗಳಿಗೆ ಸುತ್ತೋಲೆ ಮೂಲಕ ಸ್ಪಷ್ಟ ಸೂಚನೆ ಕೊಟ್ಟಿರುವುದರಿಂದ ವಿರೋಧಿ ನಾಯಕರುಗಳಿಗೆ ಅಧಿಕಾರಿಗಳಿಂದ ಇನ್ನು ಮುಂದೆ ಸಹಕಾರ ಸಿಗುವುದು ಕಷ್ಟವಾಗಲಿದೆ. ಈ ಪರಿಸ್ಥಿತಿಗೆ ಸಿದ್ಧರಾಮಯ್ಯ ಮತ್ತು ಉಗ್ರಪ್ಪನವರ ಕಾರ್ಯವೈಖರಿಯೇ ಕಾರಣ.

Sri Sidaramaiah: Is it is the Judgment?

Sri S. Suresh Kumar: See, you refer many things from your newspaper.

Sri Siddaramaiah: I have not referred anything from the news paper, I referred Kaul and Shekdhar.

Sri S. Suresh Kumar: Allow me. ಮೈಸೂರಿನಲ್ಲಿ ನಡೆದದ್ದರ ಬಗ್ಗೆ ಇಲ್ಲಿ ಏನಾಯಿತು ಎಂಬುದನ್ನು ನಾನು ನೋಡಿದ್ದೀನಿ. ಈ ಪರಿಸ್ಥಿತಿಗೆ ಸಿದ್ಧರಾಮಯ್ಯ ಮತ್ತು ಉಗ್ರಪ್ಪನವರ ಕಾರ್ಯವೈಖರಿಯೇ ಕಾರಣ. ಪಕ್ಷ ನೆಲಮಟ್ಟದಲ್ಲಿ ಗಟ್ಟಿಯಾಗಿದ್ದರೆ ಯಾವುದೇ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಕಾರ್ಯಕತರಿಂದಲೇ ಮಾಹಿತಿ ದೊರಕುತ್ತದೆ. ಪಕ್ಷ ತಲಮಟ್ಟದಲ್ಲಿ ಪ್ರಬಲವಾಗಿಲ್ಲದಿರುವುದರಿಂದಲೇ ಈ ಸಮಸ್ಯೆ ಉದ್ಭವವಾಗಿದೆ. ಆಡಳಿತಾ ರೂಢರು ಕಾನೂನು ಮೀರಿ ಕೆಲಸ ಮಾಡುವ ಸಾಹಸಕ್ಕೆ ಕೈ ಹಾಕದಂತೆ ಜನತಂತ್ರ.

ಶ್ರೀ ಸಿದ್ಧರಾಮಯ್ಯ: ಪತ್ರಿಕೆಯವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ಅದನ್ನೇ ನೀವೂ ಹೇಳುತ್ತೀರೇನು?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ನೀವೇ foretested ಎಂದು ಹೇಳುತ್ತೀರಿ. ನೀವೇ fore tested ಎಂದು ಹೇಳುತ್ತೀರಿ. You allow me to continue.

ಶ್ರೀ ಸಿದ್ಧರಾಮಯ್ಯ: Editorialಗಳೆಲ್ಲ judgment ಗಳಲ್ಲ.

Sri S.Suresh Kumar: No. It is not a judgment. It is another view. It is another angle.

Sri Siddaramaiah: Do you say that it is the opinion of Government also?

Sri S. Suresh Kumar: Definitely not. I am coming to that. ಇದು ಚೆನ್ನಾಗಿದೆ. ಪ್ರತಿ ಪಕ್ಷದ ನಾಯಕರಾದ ತಾವು ಒಂದೂ ಕಾಲು ಗಂಟೆಯ ಕಾಲ ಮಾತನಾಡುವಾಗ ನಾನು ಆಗ, 'is it your opinion' ಎಂದು ಕೇಳಿದನೆ? Let him allow. Let him have some patience.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್: ನೀವು ಕಾನೂನು ಬುಕ್ ರೆಫರ್ ಮಾಡಿ ಮಾತನಾಡದೇ ಪತ್ರಿಕೆಯದ್ದನ್ನು ರೆಫರ್ ಮಾಡಿ ಮಾತನಾಡಿದರೆ ಹೇಗೆ? ನೀವು ಕಾನೂನು ಬುಕ್ ರೆಫರ್ ಮಾಡಿ ಮಾತನಾಡಿ.

ಶ್ರೀ ಎಸ್. ಸುರೇಶ್‌ಕುಮಾರ್: ಮಹದೇವಪ್ರಸಾದ್ ರವರೆ, ನಿಮಗೆ ನಾನು ಏನು ಎಂದು ಚೆನ್ನಾಗಿ ಗೊತ್ತಿದೆ. ಕಾನೂನು ಬುಕ್ ಬೇಕೆಂದಾಗ ನಾನು ಕಾನೂನು ಬುಕ್ ರೆಫರ್ ಮಾಡುತ್ತೇನೆ. Why do you worry? ನಿಮಗೇನಾದರೂ ನಾನು ಹೇಳುತ್ತಿರುವುದು ಕಿರಿ ಕಿರಿಯಾಗುತ್ತಿದೆಯೇ?

ಶ್ರೀ ಸಿದ್ದರಾಮಯ್ಯ: ಅವರಿಗೇಕೆ ಕಿರಿ ಕಿರಿಯಾಗುತ್ತದೆ. ನಿಮಗೆ ಕಿರಿ ಕಿರಿಯಾಗಿದೆ, ಅದಕ್ಕೋಸ್ಕರ ನೀವು ಇದನ್ನೆಲ್ಲಾ ಹೇಳುತ್ತಿದ್ದೀರಷ್ಟೆ. You are embrassing, ಅದಕ್ಕೋಸ್ಕರ ಈ ರೀತಿ ಹೇಳುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು: ನೀವು ಹೀಗೆ ಎಲ್ಲರೂ ಎದ್ದು ಮಾತನಾಡಿದರೆ ಹೇಗೆ? ಮಾನ್ಯ ಸಚಿವರು ಉತ್ತರ ಕೊಡುತ್ತಿದ್ದಾರೆ ಅದನ್ನು ಕೇಳುವುದಕ್ಕೂ ನೀವು ತಯಾರಿಲ್ಲವೆಂದರೆ ಹೇಗೆ? ಮೊದಲು ಸಚಿವರು ಉತ್ತರವನ್ನು ಕಂಪ್ಲೀಟ್ ಮಾಡಲಿ.

(ಗೊಂದಲ)

ಅಧ್ಯಕ್ಷರು: ಸಚಿವರು ಯಾವುದನ್ನೂ ರೆಫರ್ ಮಾಡಬಾರದೇನು? ಅವರು ಯಾವ ರೀತಿ ಉತ್ತರ ಕೊಡಬೇಕೆಂದು ನೀವೇ ಹೇಳಿಬಿಡಿಯಷ್ಟೆ. ಈ ರೀತಿ ಮಾಡಿದರೆ ಹೇಗೆ? ಮೊದಲು ಸಚಿವರು ಉತ್ತರವನ್ನು ಕಂಪ್ಲೀಟ್ ಮಾಡಿಬಿಡಲಿ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಅವರು ಉತ್ತರ ಪೂರ್ತಿ ಮಾಡಲಿ, ಇದು ನನಗೆ ಅರ್ಥವಾಗುತ್ತಿಲ್ಲ, ನೀವೆಲ್ಲ ಕುಳಿತುಕೊಳ್ಳಿ.

ಶ್ರೀ ರಮಾನಾಥ ರೈ: 50 ವರ್ಷದಲ್ಲಿ ದೇವರಾಜು ಅರಸು ಎಲ್ಲಾ ಇದ್ದರು. ನೀವು ಅವರನ್ನೆಲ್ಲ ಸಾರಾಸಗಟಾಗಿ ಕೆಟ್ಟವರು ಎಂದು ಹೇಳಬೇಡಿ. ಬಹಳ ಗೌರವಾನ್ವಿತರು, ಆ ಸ್ಥಾನದಲ್ಲಿ ಕುಳಿತುಕೊಂಡಿದ್ದರು.

(ಗೊಂದಲ)

ಅಧ್ಯಕ್ಷರು: ರಮಾನಾಥ ರೈರವರೇ ನೀವೇನಾದರೂ address ಮಾಡುವುದಿದ್ದರೆ ನನ್ನ ಹತ್ತಿರ permission ತೆಗೆದುಕೊಂಡು ಮಾತನಾಡಿ. ನಿಮಗೆ ಅವಕಾಶ ಕೊಡುತ್ತೇನೆ, ಮಾತನಾಡಿ. ನೀವು ಸುಮ್ಮನೆ ಅವರ ಹತ್ತಿರ ಏಕೆ argument ಮಾಡುತ್ತೀರಿ? ನೀವು ಏನಾದರೂ ಮಾತನಾಡುವುದಿದ್ದರೆ ನಿಮಗೆ ಅವಕಾಶ ಕೊಡುತ್ತೇನೆ, ನನ್ನ permission ತೆಗೆದುಕೊಂಡು ಮಾತನಾಡಿ. ನೋಡಿ ರಮಾನಾಥ ರೈರವರೇ ಈ ರೀತಿ ಮಾತನಾಡುವುದಲ್ಲ.

ಶ್ರೀ ರಮಾನಾಥ ರೈ: ಕೆ.ಸಿ. ರೆಡ್ಡಿ, ವೀರೇಂದ್ರ ಪಾಟೀಲ್, ದೇವರಾಜು ಅರಸು ಇದ್ದರು, 50 ವರ್ಷ ಎಂದರೆ ಅವರೆಲ್ಲರು ಬಂದರಲ್ಲ.

ಅಧ್ಯಕ್ಷರು: ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನಾನು ಸದಸ್ಯರಿಗೆ ವಿನಂತಿ ಮಾಡುವುದೇನೆಂದರೆ ಯಾರಾದರೂ ಏನಾದರೂ ಮಾತ–ನಾಡುವುದಿದ್ದರೆ ನನ್ನ ಪರ್ಮಿಷನ್ ತೆಗೆದುಕೊಂಡು ಮಾತನಾಡಿ, ನಿಮಗೆ ಅವಕಾಶ ಕೊಡುತ್ತೇನೆ. ಸುಮ್ಮನೆ ನೀವೇ ನೀವೇ discussion ಮಾಡುವುದು ಬೇಕಾಗಿಲ್ಲ. Address to me.

ಶ್ರೀ ಗೋವಿಂದ ಕಾರಜೋಳ: ಮಾನ್ಯ ಅಧ್ಯಕ್ಷರೇ, ದಿನಾಂಕ 29–6–2009ರಂದು ಮೇಲ್ಮನೆ ವಿರೋಧ ಪಕ್ಷದ ನಾಯಕರಾದ ಮಾನ್ಯ ಉಗ್ರಪ್ಪನವರು ನಮ್ಮ ಜಿಲ್ಲಾಧಿಕಾರಿಗಳ ಕಛೇರಿಗೆ ಬಂದು ಬಳಸಿದ ಭಾಷೆಯನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. "ಏನ್ರಿ, ನಿಮಗೆ ಸೇವಾ ನಿಯಮ

ಗೊತ್ತಿಲ್ಲವೇನ್ರಿ? ಮಾಹಿತಿ ಇಲ್ಲದೆ ಇಲ್ಲಿ ಕೈಬೀಸುತ್ತಾ ಮಜಾ ಮಾಡಲು ಬಂದಿದ್ದೀರಾ? ನಿಮ್ಮ ಕಾಯ್ದೆಗೆ ಬೆಂಕಿ ಇಡಿ."

(ಗೊಂದಲ)

ಅಧ್ಯಕ್ಷರು: ಗೋವಿಂದ ಕಾರಜೋಳ ದಯವಿಟ್ಟು ಪ್ರತಿ ಪಕ್ಷದ ನಾಯಕರ ಬಗ್ಗೆ ಇಲ್ಲಿ ಡಿಸ್‌ಕಸ್ ಮಾಡುವುದು ಬೇಡ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಅಲ್ಲಿ ಹೋಗಿ ಮಾತನಾಡಿ.

(ಗೊಂದಲ)

ಅಧ್ಯಕ್ಷರು: ಅಲ್ಲಿರುವ ಪ್ರತಿಪಕ್ಷದ ನಾಯಕರ ಬಗ್ಗೆ ಅವರ ಹೇಳಿಕೆ ಬಗ್ಗೆ ಇಲ್ಲಿ ಡಿಸ್‌ಕಸ್ ಮಾಡುವುದು ಬೇಡ. ಸಿದ್ಧರಾಮಯ್ಯನವರು ಏನು ಹೇಳಿದರು ಕೇಳಿ. ದಯವಿಟ್ಟು ನೀವು ಕುಳಿತುಕೊಳ್ಳಿ.

ಶ್ರೀ ನೆ.ಲ. ನರೇಂದ್ರಬಾಬು: ನೀವು ಆ ವಿಚಾರವನ್ನು ಇಲ್ಲಿ ಹೇಳಿ ಸಮರ್ಥಿಸಿಕೊಳ್ಳುತ್ತಿದ್ದೀರಿಲ್ಲ, ನಿಮಗೆ ನಾಚಿಕೆಯಾಗಬೇಕು.

ಶ್ರೀ ಗೋವಿಂದ ಕಾರಜೋಳ: ನಾಚಿಕೆ ನಿಮಗಾಗಬೇಕು. ಕೆಂಗಲ್ ಹನುಮಂತಯ್ಯನವರ ಗುರುತು ಹೇಳುವುದಕ್ಕೆ ನಿಮಗೆ ನಾಚಿಕೆಯಾಗಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಪ್ರಿಯವಾದ ಸತ್ಯ ಹೇಳಬೇಕೆಂದು ಬಯಸಿದರೆ ಅದು ಆಗುವುದಿಲ್ಲ. ಪ್ರಿಯವಾದ ಸತ್ಯ ಮಾತ್ರ ಹೇಳುವುದಕ್ಕಾಗುವುದಿಲ್ಲ.

ಶ್ರೀ ನೆ.ಲ. ನರೇಂದ್ರ ಬಾಬು: ಸತ್ಯವನ್ನು ಮುಚ್ಚಿ ಹಾಕುವುದಕ್ಕೆ ಏನು ಬೇಕಾದರೂ...

ಶ್ರೀ ಎಸ್. ಸುರೇಶ್ ಕುಮಾರ್: ನರೇಂದ್ರ ಬಾಬುರವರೇ, ನಾನು ಕಲಿಯುತ್ತೇನೆ, ನಾಳೆ ನಿಮ್ಮ ಮನೆಗೆ ಬಂದು ಎರಡು ಗಂಟೆ tution ತೆಗೆದುಕೊಳ್ಳುತ್ತೇನೆ. ಅಲ್ಲ ಸ್ವಾಮಿ ನಾಚಿಕೆಯಾಗಬೇಕು ಎನ್ನುವ ಪದ ಹೇಳಿದಿರಿ, what is this?

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಅವರಿಗಲ್ಲ, ಸರ್ಕಾರಕ್ಕೆ ನಾಚಿಕೆಯಾಗಬೇಕು ಎಂದರೆ ಅದು unparliamentary ಅಲ್ಲ.

ಅಧ್ಯಕ್ಷರು: ಆ ರೀತಿ ಪದವನ್ನು ಏನಾದರೂ ಉಪಯೋಗಿಸಿದ್ದರೆ ಅದನ್ನು ಕಡತದಿಂದ ತೆಗೆದು ಹಾಕುತ್ತೇನೆ.

ಶ್ರೀ ಗೋವಿಂದ ಕಾರಜೋಳ: ನಾಚಿಕೆ ಯಾರಿಗೆ ಬರಬೇಕು ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಕೆಂಗಲ್ ಹನುಮಂತಯ್ಯನವರಿಗೆ ಹೋಲಿಸಿಕೊಳ್ಳುತ್ತಾರೆ, ಮಾನ್ಯ ನಿಜಲಿಂಗಪ್ಪನವರಿಗೆ ಹೋಲಿಸಿಕೊಳ್ಳುತ್ತಾರೆ, ನಿಮಗೆ ನಾಚಿಕೆಯಾಗಬೇಕು.

(ಗೊಂದಲ)

ಅಧ್ಯಕ್ಷರು: ರಮನಾಥ ರೈ ರವರೆ ಮತ್ತೆ ನೀವು ಅವರ ಜೊತೆ ಏಕೆ argument ಮಾಡುತ್ತೀರಿ? ರಮಾನಾಥ ರೈರವರೆ ನೀವು ಯಾರ ಜೊತೆ ಮಾತನಾಡುತ್ತಿದ್ದೀರಿ? ಏನಾದರೂ ಇದ್ದರೆ ನನ್ನನ್ನು ಕೇಳಿ, ನನ್ನ ಹತ್ತಿರ ಮಾತನಾಡಿ. ಮಾನ್ಯ ಸುರೇಶ್ ಕುಮಾರ್ ರವರೆ, ನೀವು ಕುಳಿತುಕೊಳ್ಳಿ, ಅವರು ಐದು ನಿಮಿಷ ಮಾತನಾಡಲಿ. ರಮಾನಾಥ ರೈರವರು ಬಹಳ ಮಾತನಾಡುತ್ತಾರೆ, ನೀವು ಮಾತನಾಡಿ. ಏನು ವಿಷಯ ಇದೆ ಹೇಳಿ, ಮಧ್ಯದಲ್ಲಿ ನೀವು ಸುಮ್ಮನೆ ಏಕೆ ಮಾತನಾಡುತ್ತೀರಿ.

ಶ್ರೀ ರಮಾನಾಥ ರೈ: 50 ವರ್ಷ ಎಂದು ಹೇಳಿದಾಗ ಅದು ಸತ್ಯವಿರಬೇಕಾದರೆ, ಆ ಸ್ಥಾನದಲ್ಲಿ ಕುಳಿತುಕೊಂಡಿರುವವರು ಯಾರೆಲ್ಲ ಮುಖ್ಯ ಮಂತ್ರಿಗಳಾಗಿದ್ದರು ಮುಕ್ಕಾಲು ಮಂದಿ ಘನತೆ ಸ್ಥಾನಮಾನ ಹೊಂದಿದಂತಹವರು. ಮಾನ್ಯರುಗಳಾದ ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ವೀರೇಂದ್ರ ಪಾಟೀಲ್, ನಿಜಲಿಂಗಪ್ಪ, ಕಡಿದಾಳ್ ಮಂಜಪ್ಪ, ಕಂಠಿ, ದೇವರಾಜ್ ಅರಸು, ರಾಮಕೃಷ್ಣ ಹೆಗಡೆ, ಇವತ್ತು ದೇವೇಗೌಡರು ಇರಬಹುದು, ವೀರಪ್ಪ ಮೊಯ್ಲಿ ಬಹಳಷ್ಟು ಜನ ಅಧಿಕಾರ ಮಾಡಿದವರು ಇದ್ದಾರೆ. ಆದುದರಿಂದ 50 ವರ್ಷ ಎಂದು ಹೇಳಿ ಸಾರಾಸಗಟಾಗಿ ಮಾತನಾಡಿದರೆ ಅದು ಪರೋಕ್ಷವಾಗಿ ಅಂತಹ ಗೌರವಾನ್ವಿತರಿಗೆ ಅಪಮಾನ ಮಾಡಿದ ಹಾಗೆ ಆಗುತ್ತದೆ. ಬಹುಶಃ ಕಾಂಗ್ರೆಸ್ ಸರ್ಕಾರ ಎಂದು ಹೇಳಿ ಎಲ್ಲರ ಬಗ್ಗೆ ಮಾತನಾಡಿದಾಗ ಪರೋಕ್ಷವಾಗಿ ಅಪಮಾನ ಮಾಡಿದ ಹಾಗೆ ಆಗುತ್ತದೆ. ಅವರು ತಾರತಮ್ಯ ಮಾಡಿಲ್ಲ. ವಿರೋಧ ಪಕ್ಷಕ್ಕೆ ಗೌರವವನ್ನು ಕೊಟ್ಟಿದ್ದಾರೆ. ಅವರ ಸ್ಥಾನಮಾನ ಏನು ಎಂದು ನಾವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು: ಆಯಿತು, ಸುರೇಶ್ ಕುಮಾರ್ ತಾವು continue ಮಾಡಿ.

ಶ್ರೀ ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ನಾನು ದಿನಾಂಕ 27-6-2009ರ ಸಂಯುಕ್ತ ಕರ್ನಾಟಕದ editorial ನಲ್ಲಿ ಕೊಟ್ಟಿರುವ ಒಂದೇ ಒಂದು ಸಾಲು ಹೇಳುತ್ತೇನೆ ಸ್ವಾಮಿ. "ಅಧಿಕಾರಿಗಳ ಸಭೆ ನಡೆಸುವ ಮೂಲಕ ರಾಜ್ಯ ಅಥವಾ ರಾಷ್ಟ್ರದಲ್ಲಿ ಹಿಂದೆಂದೂ ಕಾಣದಂತಹ ಉಪಕ್ರಮಕ್ಕೆ ಪ್ರತಿಪಕ್ಷದ

ಧುರೀಣರು ಮುಂದಾಗಿದ್ದಾರೆ. ನಿಯಮಾವಳಿಯಲ್ಲಿ ಇದಕ್ಕೆ ಅವಕಾಶ ಇಲ್ಲ ಎಂಬುದಕ್ಕಿಂತ ಮುಖ್ಯವಾಗಿ ರಾಜ್ಯದ ಜನರು ಆಡಳಿತ ನಿರ್ವಹಣೆಯ ಅಧಿಕಾರವನ್ನು, ಆಡಳಿತ ಪಕ್ಷ ಬಿಜೆಪಿಗೆ ಕೊಟ್ಟಿದ್ದಾರೆಂಬುದನ್ನು ವಿರೋಧ ಪಕ್ಷದಲ್ಲಿರುವ ಸಿದ್ಧರಾಮಯ್ಯನವರು ನೆನಪಿಸಿಕೊಳ್ಳಬೇಕು" ಇದನ್ನು ಕೊಟ್ಟಿರುವುದು. ಮಾನ್ಯ ಅಧ್ಯಕ್ಷರೇ, ಇನ್ನು Minister role ಏನು ಎನ್ನುವುದು ಬಹಳ ಮುಖ್ಯ, ಅದರ ಬಗ್ಗೆ ಬಹಳ ಚರ್ಚೆಯಾಗುತ್ತಿದೆ. ಈಗ ನಾನು Kaul and Shekdhar ನಿಂದ quote ಮಾಡಿ ಹೇಳುತ್ತಿರುವುದು, 'A Minister has by and large to work with and through the permanent officials of the bureaucracy. The Minister cannot discharge his responsibilities satisfactory unless he is constantly assisted by officials of his Ministry. Fundamentally therefore, the relationship between the civil service and parliament or assembly is through the agency of the Minister. The civil servants have very little contact with the members as such, so far as any direct parliamentary control is concerned there cannot be any, it can operate only through the Minister concerned." This is what Kaul and Shekdhar very elaborately states. ಮಾನ್ಯ ಅಧ್ಯಕ್ಷರೇ, ಈಗಾಗಲೇ shadow cabinet ಬಗ್ಗೆ ಮಾನ್ಯ ಸಿದ್ಧರಾಮಯ್ಯನವರು menton ಮಾಡಿ Leader of the opposition role ಬಗ್ಗೆ ಹೇಳಿದ್ದಾರೆ. 'The leader of the largest party in opposition in each House is recognized as the leader of the opposition provided that the party has a strength which would enable it to keep the House that is the number of members should not be less than the quorum fixed to constitute a sitting of the House which is 1/10 of the total membership' ಅದು ಎಲ್ಲರಿಗೂ ಕೂಡ ಗೊತ್ತು. ಮುಂದಿನದು ಬಹಳ important. 'Since a two party system of the British type has not developed in India so far the leader of the opposition may not be the Prime-Minister in waiting with a shadow cabinet of his Home. In fact, ನಾವು Adjournment Motion ಯಾರು ಹಾಗೂ ಹೇಗೆ move ಮಾಡಬೇಕು ಎಂದು ಇಲ್ಲೇ ನೋಡುತ್ತಿದ್ದೇವೆ. 'In fact, there may be a situation where parties in the opposition may be more opposed to each other than to ruling party.' ಇದೂ ಕೂಡ ನಾನು ಒಂದು Parliamentary practice, procedure ನಿಂದ ನಾನು quote ಮಾಡುತ್ತಿರುವುದು. ಮಾನ್ಯ ಅಧ್ಯಕ್ಷರೆ, 1976ನೇ ಇಸವಿಯಲ್ಲಿ ವಿರೋಧ ಪಕ್ಷದ ನಾಯಕರಿಗೆ

ಸ್ಥಾನಮಾನ ಕೊಡುವ ಬಗ್ಗೆ ಒಂದು amendment ಬಂತು. ಅದನ್ನು quote ಮಾಡಿ ಹೇಳುತ್ತೇನೆ. Amending Act 72 of 1976 – 'It was considered necessary to provide certain facilities like salary, residence, conveyance, stenographer and peon to the leader of the opposition in the Legislative Assembly as also to the Government Chief Whip in the Legislative Assembly. Members of the Committees of the Legislatures undertaking journeys outside the State in India...' ಅದೆಲ್ಲ quote ಮಾಡಿಕೊಂಡು ಹೋಗುತ್ತಾರೆ. ಮಾನ್ಯ ಜಯಚಂದ್ರರವರೇ, 1976ರಲ್ಲಿ Act 72 ಪ್ರಕಾರ, ಈ ಅಮೆಂಡ್‌ಮೆಂಟ್ ತಂದಿದ್ದು. ಆಗ ನಮ್ಮ ಸದನದಲ್ಲಿ opposition leader ಯಾರಾಗಿದ್ದರು? Oppositon Leader ಇರಲಿಲ್ಲ, ಸನ್ಮಾನ್ಯ ದೇವೇಗೌಡರನ್ನು ಹೊರಗಡೆ ಕೂರಿಸಿದ್ದರು. ಅವರನ್ನು ಹೊರಗಡೆ ಕೂರಿಸಿ ಈ ಸವಲತ್ತನ್ನು ಕೊಟ್ಟರು. It is an irony.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್ ಕುಮಾರ್‌ರವರೆ ಒಂದು ನಿಮಿಷ ಯೀಲ್ಡ್ ಆಗಿ, 1976ರಲ್ಲಿ ತಂದಾಗ ಮಾನ್ಯ ದೇವೇಗೌಡರು Opposition Leader ಆಗಿದ್ದಾಗ 6 ತಿಂಗಳು, 8 ತಿಂಗಳುಗಳ ಮೇಲೋ emergency ತಂದಿರಬಹುದು. ಅಲ್ಲಿಂದ ಮುಂದಿನ ವಿಚಾರವನ್ನು ತಮ್ಮ ಜ್ಞಾಪಕಕ್ಕೆ ತರುತ್ತೇನೆ. ಮಾನ್ಯ ದೇವೇಗೌಡರು Opposition Leader ಆಗಿ 6 ತಿಂಗಳು ಕೆಲಸ ಮಾಡಿ, ಯಾವುದೇ ಸಂಬಳ, ಸಾರಿಗೆ ಏನು ತೆಗೆದುಕೊಳ್ಳದೇ 1978 ರವರೆಗೂ ಕೆಲಸ ಮಾಡಿರುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಮಾನ್ಯ ಜಯಚಂದ್ರರವರಿಗೆ ಒಂದು ಪ್ರಶ್ನೆಯನ್ನು ಕೇಳಿದರು.

ಶ್ರೀ ಸಿದ್ಧರಾಮಯ್ಯ: ತಮಗೆ ಒಂದು information ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಹೇಳಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಎಸ್.ಎಂ. ಕೃಷ್ಣರವರು ಈ ಬಿಲ್ ಅನ್ನು ತಂದದ್ದು, ದೇವೇಗೌಡರು was very much in House.

ಶ್ರೀ ಎಸ್. ಸುರೇಶ್‌ಕುಮಾರ್: As what?

ಶ್ರೀ ಸಿದ್ಧರಾಮಯ್ಯ: As Leader of Opposition.

ಶ್ರೀ ಎಸ್. ಸುರೇಶ್‌ಕುಮಾರ್: Powers ಎಲ್ಲಿತ್ತು? ನನಗಿಂತ ನಿಮಗೆ ಚೆನ್ನಾಗಿ ಗೊತ್ತು. You are a part of the Government.

ಶ್ರೀ ಸಿದ್ಧರಾಮಯ್ಯ: ನಾನು ಹೇಳುವವರೆಗೆ ಕೇಳಿ. ಮಾನ್ಯ ದೇವೇಗೌಡರು ಈ ಬಿಲ್ ಸದನದಲ್ಲಿ ಬಂದಾಗ ಮಾತನಾಡಿರುವಂಥದ್ದನ್ನು ಹೇಳುತ್ತೇನೆ. ಆಗ ಶ್ರೀಮತಿ ನಾಗರತ್ನಮ್ಮನವರು ಅಧ್ಯಕ್ಷಿಣಿಯಾಗಿದ್ದರು. ಆಗ ಮಾನ್ಯ ದೇವೇಗೌಡರು, ಸಭಾಧ್ಯಕ್ಷಿಣಿಯವರೆ, ನಮ್ಮ ಸಂಸತ್ ಸಚಿವರು, ಶಾಸನ ಸಭೆಯ ವಿರೋಧ ಪಕ್ಷದ ನಾಯಕರು ಮತ್ತು ಮುಖ್ಯ ಸಚೇತಕರುಗಳಿಗೆ ಕೆಲವು ಸವಲತ್ತುಗಳನ್ನು ಒದಗಿಸಬೇಕೆನ್ನುವ ಪ್ರಸ್ತಾವನೆ ಇದೆ. ಇಲ್ಲಿ ತಾವು ಅವರು ಇಲ್ಲಿ ಇರಲಿಲ್ಲ, ಹೊರಗಡೆ ಎಲ್ಲೋ ಇದ್ದರೆಂದು ಹೇಳುತ್ತಿದ್ದೀರಿ. ಆ ದಿವಸ ಸದನದ ಒಳಗಡೆಯೇ ಇದ್ದಾರಲ್ಲಾ. He was very much in the House. He participated in the debate. ಆ ರೀತಿ ಎಲ್ಲಾ ಹೇಳಬಾರದು. He was there. ಇವರು ಏನು ಹೇಳಿದ್ದಾರೆಂದರೆ 1976ರವರೆಗೆ ಸವಲತ್ತುಗಳಿರಲಿಲ್ಲ ಅಷ್ಟೆ. ಅವರಿಗೆ ಅಧಿಕಾರವೆಲ್ಲಾ ಮೊಟಕು ಮಾಡಿರಲಿಲ್ಲ. ಅವರಿಗೆ ಸವಲತ್ತುಗಳು, ಮನೆ, ಕಾರು, minister's status ಏನು ಇತ್ತು, ಅಷ್ಟನ್ನು ಆಗ ಸವಲತ್ತುಗಳನ್ನು ಕೊಟ್ಟರು ಅಷ್ಟೆ. Leader of the Oppositionನ್ನೆ ಇರಲಿಲ್ಲವೆಂದು ಏನು ಇಲ್ಲ. Leader of the Opposition ಅವತ್ತಿನಿಂದಲೂ ಇದೆ, ಸ್ವಾತಂತ್ರ್ಯ ಬಂದಾಗಿನಿಂದಲೂ ಇದೆ, ಇವತ್ತಿನವರೆಗೂ ಇದೆ. ಅವರಿಗೆ ಇದ್ದಂಥ freedom, ಹಕ್ಕುಗಳು, ಅವತ್ತು ಇತ್ತು, ಇವತ್ತು ಇದೆ, ಮುಂದೆಯೂ ಇರುತ್ತವೆ. ಈಗ ನೀವು ಇರುವಾಗಲೇ ಇದನ್ನು ಮೊಟಕು ಮಾಡಿದ ತಕ್ಷಣ ಹೊರಟು ಹೋಗುವುದಿಲ್ಲ. ನಾನು ಏನು ಹೇಳುತ್ತೇನೆಂದರೆ information wrong ಆಗಬಾರದು ಅಷ್ಟೆ.

ಶ್ರೀ ಎಸ್. ಸುರೇಶ್ ಕುಮಾರ್: O.K. ಸಿದ್ಧರಾಮಯ್ಯನವರೇ. You have to defend. Three years back you would not have defended it. Now, you have to defend it.

ಶ್ರೀ ಸಿದ್ಧರಾಮಯ್ಯ: Why? ಸರ್ಕಾರ fact ಹೇಳಬೇಕೇ ಹೊರತು careless ಆಗಿ ಹೇಳುವುದಕ್ಕೆ ಅಗುವುದಿಲ್ಲವಲ್ಲಾ...

ಶ್ರೀ ಎಸ್. ಸುರೇಶ್ ಕುಮಾರ್: ಇಡೀ ದೇಶ ಹೇಗಿತ್ತೆಂದು ನಿಮಗೆ ಚೆನ್ನಾಗಿ ಗೊತ್ತು, ನನಗೂ ಗೊತ್ತು.

ಶ್ರೀ ಸಿದ್ಧರಾಮಯ್ಯ: ರಾಜಕಾರಣ ಮಾತನಾಡಬೇಕೆಂದರೆ ಅದರ ಬಗ್ಗೆಯೇ ಮಾತನಾಡೋಣ.

ಶ್ರೀ ಎಸ್. ಸುರೇಶ್ ಕುಮಾರ್: ನಾನು ರಾಜಕಾರಣ ಮಾತನಾಡುತ್ತಿಲ್ಲ. 1976ನಲ್ಲಿ ಎಂಥ ವಾತಾವರಣದಲ್ಲಿ ಬಂತೆಂಬುದು ಪ್ರಶ್ನೆ.

ಶ್ರೀ ಸಿದ್ಧರಾಮಯ್ಯ: ಇದು this was mooted in1970 only. 1969ರಲ್ಲಿ ನಿಮಗೆ ಇತಿಹಾಸ ಗೊತ್ತಿಲ್ಲವೆಂದು ಕಾಣುತ್ತದೆ. 1969ರಲ್ಲಿ ಕಾಂಗ್ರೆಸ್ divde ಆದಾಗ congress (R) ಮತ್ತು Congress (o) ಎಂದು ಆದಾಗ ಇದು ಆಯಿತು. ಅವತ್ತೆ ಇದನ್ನು Leader of the Opposition ಎಂದು ಕಾಂಗ್ರೆಸ್‌ನಲ್ಲಿದ್ದವರಿಗೆ ಕೊಟ್ಟಿದ್ದು. Act ಆಗಿದ್ದು 1977ರಲ್ಲಿ, ಈ ಎಲ್ಲಾ facilities ಅನ್ನು ಕೊಟ್ಟಿದ್ದು 77ರಲ್ಲಿ. ಕೇಂದ್ರದಲ್ಲಿ 1976ರಲ್ಲಿ ಕಟ್ಟಿದ್ದು, ಅದು facts, ಅದನ್ನು ಹೇಳಿ. ಅದನ್ನು ಬಿಟ್ಟು ಬೇರೆ ಇನ್ನು ಏನೋ ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಸುರೇಶ್ ಕುಮಾರ್‌ರವರು ಬಹಳ ಹಗುರವಾಗಿ ಮಾತನಾಡುತ್ತಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಅವರನ್ನು defend ಮಾಡಿಕೊಳ್ಳುತ್ತಿಲ್ಲ. ಅವರು ಆ ಒಂದು ಸ್ಥಾನದ ಬಗ್ಗೆ defend ಮಾಡುತ್ತಿದ್ದಾರೆ. ಇದು ಅವರ ವೈಯಕ್ತಿಕ defense ಏನು ಅಲ್ಲ. ತಾವು ಇದರ ಬಗ್ಗೆ ಗಂಭೀರವಾಗಿ ಮಾತನಾಡಿ. ದಯವಿಟ್ಟು ಇದರಲ್ಲಿ ರಾಜಕಾರಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಕೇಳುವುದೇನೆಂದರೆ ಇನ್ನು ಎಲ್ಲಾದರೂ ರಾಜ್ಯಗಳಲ್ಲಿ ಇದೆಯಾ? ಕೇಂದ್ರದಲ್ಲಿ ಇದೆಯಾ? ಇಂದು ಕೇಳುತ್ತೇನೆ. ಆಂಧ್ರ ಪ್ರದೇಶದಲ್ಲಿ ವಿರೋಧ ಪಕ್ಷದ ನಾಯಕರಿಗೆ ಸಂಪುಟ ದರ್ಜೆಯ ಸ್ಥಾನಮಾನವನ್ನು ನೀಡಲಾಗಿದೆಯೇ ಹೊರತು, ಸಂಪುಟ ದರ್ಜೆಯ ಅಧಿಕಾರವನ್ನು ಕೊಟ್ಟಿಲ್ಲ. ಅದೇ ರೀತಿಯಲ್ಲಿ ಕೇರಳ ರಾಜ್ಯದಲ್ಲಿ ಈ ವ್ಯವಸ್ಥೆ ಸದನದಲ್ಲಿ ಮಾತ್ರ ಜಾರಿಯಲ್ಲಿದೆ. ಪಶ್ಚಿಮ ಬಂಗಾಳದಲ್ಲಿ ವಿರೋಧ ಪಕ್ಷದ ನಾಯಕರಿಗೆ ಅಧಿಕಾರಿಗಳ ಸಭೆಯನ್ನು ಕರೆಯುವ ಅಧಿಕಾರ ಇರುವುದಿಲ್ಲ. ಈಗ ನನ್ನ ಮುಂದೆ ಒಂದು letter ಇದೆ. ಇದು ತಮಿಳುನಾಡು Legislative Assembly Secretariat ನಿಂದ ಬಂದಿದೆ.

"To

The Secretary,
Chief Minister Secretariat,
Vidhana Soudha,
Bangalore-560 001, Dated: 1-7-2009

Letter No.

Sir,

Subject: Rules, Circulars regarding powers and functions of Leader of Opposition in the Tamil Nadu Legislative Assembly reg.

Reference: ನಮ್ಮಿಂದ ಹೋಗಿರುವ letter reference.

With reference to your letter cited, I am to inform that as for as Tamil Nadu is concerned there are no rules, no circulars empowering to Leader of Opposition to convene meeting of the officers of the State and obtaining information on the functioning of the Government."

This is a letter from Tamil Nadu Legislative Secretariat. ಅದನ್ನು ಕೂಡ ತಮ್ಮ ಗಮನಕ್ಕೆ ತರುತ್ತೇನೆ. ಈ ಹಿನ್ನೆಲೆಯಲ್ಲಿ ಮಾನ್ಯ ಜಯಚಂದ್ರರವರು Chief Secretary ಯವರ ಅಧಿಕಾರದ ಬಗ್ಗೆ ಪ್ರಶ್ನೆ ಮಾಡಿದರು. How he can ಎಂದು, ನಮಗೆಲ್ಲರಿಗೂ ಕೂಡ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ಸ್ವೀಕಾರ ಮಾಡುವ ದಿವಸ Governor ರವರು ವೇದಿಕೆಯ ಮೇಲೆ ಬಂದಿರುತ್ತಾರೆ. Who will call the meeting to order? The Chief Secretary will ask the Government and he will start the proceedings. Chief Secretary is the head of the executive ಅದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. And he has the honour, he has the responsibility, he has the duty to follow the well established system. ಯಾರು ಅಧಿಕಾರಿಗಳನ್ನು ಮೀಟಿಂಗ್‌ಗೆ ಕರೆಯಬೇಕು? ಅಧಿಕಾರಿಗಳು ಯಾರು ಮಾಹಿತಿಗಳನ್ನು ತೆಗೆದುಕೊಳ್ಳಬೇಕು? ನಮಗೆ ಗೊತ್ತು. ಇವತ್ತು ಅಧಿಕಾರಿಗಳನ್ನು ಮೀಟಿಂಗ್‌ಗಳಿಗೆ ಹೇಗೆ ಓಡಾಡಿಸುತ್ತೇವೆ. ಅದು ಅವರಿಗೆ ಒಂದು ಒಳ್ಳೆಯ ಕಾರಣವಾಗುತ್ತದೆಂಬುದು ನಮಗೆ ಗೊತ್ತಿದೆ. ಅಧಿಕಾರಿಗಳನ್ನು ಯಾವ ರೀತಿಯಾಗಿ ಮಾತನಾಡಿಸಬೇಕೆಂಬುದು ಒಂದು responsible ಇರುತ್ತದೆ. Ultimately, he has to keep the morale of the bureaucracy ಮೊನ್ನೆ ಒಂದು ಘಟನೆಯಾಗಿದೆ. I don't want to repeat. ಈ ಎಲ್ಲಾ ಹಿನ್ನಲೆಯಲ್ಲಿ ನಾವು British Parliament ಅದರ ಬಗ್ಗೆಯೂ ನೋಡಿ, ಕೇಂದ್ರ ಸರ್ಕಾರದ್ದು ಕೂಡ ನೋಡಿ, ಬೇರೆ ಬೇರೆ ರಾಜ್ಯ ಸರ್ಕಾರದಲ್ಲಿ ಏನೇನು ಇದೆಯೆಂಬುದನ್ನು

ನೋಡಿ. ನಮ್ಮದೇ practice ನಲ್ಲಿ ವಿರೋಧ ಪಕ್ಷದ ನಾಯಕರಿಗೆ ಹೇಗೆ resolution ಬಂದಿದೆಯೆಂಬುದನ್ನು ಕೇಳಿ and no body can prevent any person from seeking information. ಯಾರು ಯಾರನ್ನು ಕೂಡ prevent ಮಾಡುವುದಿಲ್ಲ. ಒಬ್ಬ ordinary ವ್ಯಕ್ತಿಯನ್ನು ಮಾಡುವ ಹಾಗೆ ಇಲ್ಲ. ನನ್ನ ಬಗ್ಗೆ ಒಂದು ಮಾಹಿತಿಯನ್ನು Right to Information Act ಕೆಳಗೆ ಕೇಳಿದ್ದರು. ಮಿನಿಸ್ಟರ್ ಮನೆಗಳಿಗೆ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂಬುದನ್ನು ಕೇಳಿದ್ದರು. My name appeared. That is a different thing ನಾನು ಹೇಗೆ counter ಮಾಡಿದೆಯೆಂದು. So any person can apply under Right to Information Act ಮಾಡಬಹುದು. ಹಾಗೆ ಇರುವಾಗ ವಿರೋಧ ಪಕ್ಷದ ನಾಯಕರಿಗೆ ಮತ್ತು ಸನ್ಮಾನ್ಯ ಸದಸ್ಯರುಗಳಿಗೆ information, ಮಾಹಿತಿ ತೆಗೆದುಕೊಳ್ಳುವುದಕ್ಕೆ ಯಾರೂ ಕೂಡ ನಿಲ್ಲಿಸುವುದಕ್ಕೆ ಹಕ್ಕು ಇಲ್ಲ. ನಮ್ಮ ಸರ್ಕಾರವಂತೂ ಅದಕ್ಕೆ ಕಡಿವಾಣ ಹಾಕುವುದಿಲ್ಲ. ಈ ಎಲ್ಲಾ ಹಿನ್ನಲೆಯಲ್ಲಿ ನಮ್ಮ ಸುತ್ತೋಲೆ ಹೊರಡಿಸಿರುವುದ ರಿಂದ ಯಾವುದೇ ಬಾಧಕ ಆಗಿಲ್ಲ, ಯಾವುದೇ ಹಕ್ಕುಚ್ಯುತಿ ಆಗಿಲ್ಲ, ಯಾರಿಗೂ ಕೂಡ ಅವಮಾನವಾಗಿಲ್ಲ, ಯಾರಿಗೂ ಮೊಟಕು ಮಾಡುವ ಪ್ರಯತ್ನ ನಮ್ಮಿಂದ ಆಗಿಲ್ಲ. ನಮ್ಮ ಏನು establish practice ಇದೆ, ಅದರ ಅನ್ವಯ ನಾವು ಈ ಸುತ್ತೋಲೆಯನ್ನು ಹೊರಡಿಸಿದ್ದೇವೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರು ಹಿಂದೆ ನಡೆದಿರುವಂಥ ಘಟನೆಗಳನ್ನೇಲ್ಲಾ ಉಲ್ಲೇಖ ಮಾಡಿ 25ನೇ ಜೂನ್ ಅಂದು emergency ಯನ್ನು declare ಮಾಡಿದಂಥ ದಿವಸವಾಗಿದೆ. ಅವರು ಅದನ್ನು ಜ್ಞಾಪಕ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ. ಅವತ್ತು ಆ ಸನ್ನಿವೇಶದಲ್ಲಿ emergency ಬಂದಿರುವಂಥದ್ದನ್ನು defend ಮಾಡಿಕೊಂಡು ನಾವು ಸಹ ಆ ರೀತಿ ಮಾಡುತ್ತೇವೆಂದರೆ ನನ್ನದೇನು ತಕರಾರು ಇಲ್ಲ. ನಾವು ಹಾಗೆ ಮಾಡುತ್ತೇವೆ, ನಾವು ಹಾಗೆ ನಡೆದು ಕೊಳ್ಳುತ್ತೇವೆ, ಅಂದರೆ ಅವತ್ತು ಏನಾಗಿದೆ ಅದೆಲ್ಲಾ ಕೋರ್ಟ್‌ಗೆ ಹೋಗಿವೆ. ಎಲ್ಲಾ ಆಗಿವೆ, ಸುಪ್ರೀಂ ಕೋರ್ಟ್‌ನ decision ಆಗಿದೆ, ದೆಹಲಿ ಹೈಕೋರ್ಟ್ decision ಆಗಿವೆ. ಕೆಲವು ಘಟನೆಗಳೆಲ್ಲಾ ಮುಗಿದು ಹೋಗಿವೆ. ಈಗ ನಾವು ಅದೇ ರೀತಿಯಲ್ಲಿ ಮಾಡುತ್ತೇವೆಂದು ಮಾಡುವುದಾದರೆ ಹಾಗೆ ಮಾಡಿ. We have no objection. ನಾವು ಹಾಗೆ ಮಾಡುವುದು, ನಾವು ಇನ್ನೊಂದು emergencyಯನ್ನು ತರುತ್ತೇವೆಂದರೆ ತೆಗೆದುಕೊಂಡು ಬನ್ನಿ. We have no objection. 25ನೇ

ತಾರೀಖಿನಂದೇ ತರುತ್ತೇವೆಂದರೆ, ನೀವು ಅದನ್ನು ಜ್ಞಾಪಕದಲ್ಲಿಟ್ಟುಕೊಂಡೇ ಈ ರೀತಿ ಮೊಟಕು ಮಾಡುವಂಥದ್ದನ್ನು ಮಾಡಿದ್ದೀರೋ? ಹಿಂದೆ ದಿನಾಂಕ 25–6–1975ರಲ್ಲಿ ಆಗಿದ್ದು ಎಂದು ಇದನ್ನು ಮಾಡಿದ್ದಿರಾ? ಅದು ಜ್ಞಾಪಕಕ್ಕೆ ಬಂದು ಕೋಪದಿಂದ ಮಾಡಿದ್ದಿರೋ, ಹೇಗೆ? ನೀವು ಜೈಲಿಗೆ ಹೋಗಿದ್ದಿರಲ್ಲಾ, ಮಾನ್ಯ ಯಡಿಯೂರಪ್ಪನವರು ಜೈಲಿಗೆ ಹೋಗಿದ್ದರೋ, ಇಲ್ಲವೋ, ನನಗೆ ಗೊತ್ತಿಲ್ಲ. ನಾವು ಎಲ್ಲಾ arrest ಆಗಿದ್ದೆವಲ್ಲಾ, ಅವತ್ತಿನದು ಜ್ಞಾಪಕ ಇಟ್ಟುಕೊಂಡು, ಆ paper ಅನ್ನು ಇಟ್ಟುಕೊಂಡು ಏನಾದರೂ ಮಾಡಿದ್ದಿರಾ? ಆ ರೀತಿ ಏನಾದರೂ ಮಾಡಿದ್ದರೆ ಹೇಳಿಬಿಡಿ. ಪತ್ರಿಕೆಯಲ್ಲಿ KHBಗೆ ಸಂಬಂಧಪಟ್ಟಂತೆ ಸಂಪಾದಕೀಯ ಬಂದಿದೆ, ಅದನ್ನು ನೀವು ಒಪ್ಪಿಕೊಳ್ಳಲಿಲ್ಲ. ಇಲ್ಲಿ ಮಾತ್ರ ನೀವು quote ಮಾಡುತ್ತಿದ್ದೀರಿ.

ಶ್ರೀ ಎಸ್. ಸುರೇಶ್ ಕುಮಾರ್: One at a time. ನೀವು ಓದಬೇಕು ಇಲ್ಲ ನಾನು ಓದಬೇಕು. ನೀವು ಓದಲಿಲ್ಲ, ನಾನು ಇವತ್ತು ಓದಿದೆ.

ಶ್ರೀ ಸಿದ್ಧರಾಮಯ್ಯ: ಅದನ್ನು ಒಪ್ಪಿಕೊಳ್ಳುವಿರಾ? K.H.B. ಹಗರಣದ ಬಗ್ಗೆ ಇದೇ 'ಪ್ರಜಾವಾಣಿ' ಪತ್ರಿಕೆಯಲ್ಲಿ ಸಂಪಾದಕೀಯ ಬಂದಿದೆ. ಅದನ್ನೂ ಒಪ್ಪಿಕೊಳ್ಳಿ. C.B.I. enquiry ಮಾಡಿ. ಅದನ್ನು ನೀವು ಒಪ್ಪಿಕೊಳ್ಳುವುದಿಲ್ಲ. ಏಕೆಂದರೆ ಅದು ನಿಮಗೆ ಅನುಕೂಲಕರವಾಗಿಲ್ಲ. ಆ editorial ನಿಮಗೆ ಅನುಕೂಲಕರವಾಗಿಲ್ಲ. ಆದ್ದರಿಂದ ಅದನ್ನು ಒಪ್ಪಿಕೊಳ್ಳಲು ನೀವು ತಯಾರಿಲ್ಲ. ನನಗೆ ಇನ್ನೂ ಜ್ಞಾಪಕ ಇದೆ, ಇದೇ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಎಲ್ಲ ಅಧಿಕಾರಿಗಳನ್ನು ಅರ್ಕಾವತಿ ಲೇಔಟ್‌ಗೆ ಕರೆದುಕೊಂಡು ಹೋಗಿ meeting ಮಾಡಿರುವುದು ನಮಗೆ ಗೊತ್ತಿಲ್ಲವೇ? ನಾವು ಅಧಿಕಾರದಲ್ಲಿದ್ದಾಗ, ವಿರೋಧ ಪಕ್ಷದ ನಾಯಕರಾಗಿದ್ದವರಲ್ಲಿ ಯಾರ್‍ಯಾರು ಅಧಿಕಾರಿಗಳನ್ನು ಕರೆದು information ತೆಗೆದುಕೊಳ್ಳಲು interaction ಮಾಡಿರುವಂಥ ಎಷ್ಟೊಂದು ನಿದರ್ಶನಗಳಿವೆ. ಅದು ಹೊಸದೆ? ಎಲ್ಲ ವಿರೋಧ ಪಕ್ಷಗಲ ನಾಯಕರುಗಳು ಕೂಡ ಇದನ್ನು ಮಾಡಿಕೊಂಡು ಬಂದಿದ್ದಾರೆ. ಶಿವಪ್ಪನವರ ಕಾಲದಿಂದಲೂ ಮಾಡಿಕೊಂಡು ಬಂದಿದ್ದಾರೆ. It is not a new thing. ಖರ್ಗೆಯವರು ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಇವತ್ತು ಅವರು ಕೇಂದ್ರದ ಮಂತ್ರಿಗಳಾಗಿದ್ದಾರೆ. ಅವರ ಜೊತೆಯಲ್ಲೂ ನಾನು ಮಾತನಾಡಿದ್ದೇನೆ. ನಾನು ಯಾವತ್ತೂ ಕೂಡ ಅಧಿಕಾರಿಗಳಿಗೆ meeting notice ಕಳುಹಿಸಿ meeting ಕರೆದಿಲ್ಲ. ಅಧಿಕಾರಿಗಳ ಜೊತೆ ಚರ್ಚೆ ಎಂದು ನಾನು tour

programme ನಲ್ಲಿ ಹಾಕಿ, ಅವರಿಗೆ ಕಳುಹಿಸಿಕೊಟ್ಟಿದ್ದೇನೇ ಹೊರತು ನಾನು meeting ಅನ್ನೇನು ಕರೆದಿಲ್ಲ. Review meeting is different from discussing with the officers. Review meeting ಎಂದು ನಾನು ಕರೆದಿಲ್ಲ. I know my limitations. ನಿಮ್ಮ ಪಾಡಿಗೆ ನೀವೇ, meeting ಕರೆದಿದ್ದರು ಎಂದು ಊಹಿಸಿಕೊಂಡು ಬಿಟ್ಟು, ಅಧಿಕಾರಿಗಳಿಗೆ ನೀವು ಯಾರೂ ಹೋಗಬಾರದು ಎಂದು ಮಾಡಿದಿರಿ. ನಾನು ಯಾವ ಅಧಿಕಾರಿಗಳಿಗೂ, ನೀವು ಬರಲೇಬೇಕು ಅನ್ನಲಿಲ್ಲ. ನಾನು D.C.ಗೆ ಕಳುಹಿಸಿದ್ದೆ. ಏಕೆಂದರೆ ಅವರು District Magistrate ಆಗಿದ್ದಾರೆ. He is the custodiam of the whatever money we are going to pass here. ಏನು ಮಾಡಿದಿರಿ ಎಂದು ಕೇಳುವುದಕ್ಕೆ ಹೋಗಿದ್ದೆ. ಬರಗಾಲ ಬಂದಿರುತ್ತದೆ ಎಂದಿಟ್ಟುಕೊಳ್ಳೋಣ. ಆಗ, ಮಳೆ ಬಿದ್ದಿದೆಯೇ, ಇಲ್ಲವೇ ಎಂದು ಯಾರನ್ನು ಕೇಳುವುದು? Either it should be discussed with the Joint Director of the Agriculture or with the D.C. of the district. ಯಾವುದೋ ಒಂದು clash ಆಗಿರುತ್ತದೆ. ಆಗ ಯಾರನ್ನು ಕೇಳಬೇಕು? S.P. ಯವರನ್ನು ಕೇಳಬೇಕೋ, ಬೇಡವೋ? ಅವರು ಅವರ ಜೊತೆ ಅಧಿಕಾರಿಗಳನ್ನು ಕರೆದುಕೊಂಡು ಬಂದರೆ ಅದನ್ನು ನೀವು meeting ಎಂದು ಕರೆಯುವಿರಾ? Can you call it as a review meeting? Review meeting ಮಾಡುವುದಕ್ಕೆ ನನಗೆ ಅಧಿಕಾರ ಕೊಡಿ ಎಂದು ನಾನು ಯಾವತ್ತೂ ಕೇಳಿಲ್ಲ ಅಥವಾ ಮೇಲ್ಮನೆಯ ವಿರೋಧ ಪಕ್ಷದ ನಾಯಕರಾದ ಉಗ್ರಪ್ಪನವರು ಕೇಳಿದ್ದಾರೆ ಎಂದು ನನಗನ್ನಿಸುವುದಿಲ್ಲ. Review Meeting ಮಾಡುತ್ತೇವೆ ಎಂದು ಹೇಳಿಲ್ಲ. ಆದರೆ M.L.A. ಗಳು ಅವರವರ constituency ಯಲ್ಲಿ meeting ಮಾಡುತ್ತಾರಲ್ಲ. ನಾನು ರಾಜಸ್ತಾನ ಮತ್ತು ಬೇರೆಬೇರೆ ರಾಜ್ಯಗಳ ಮಾಹಿತಿಯನ್ನು ತರಿಸಿದ್ದೇನೆ. ವಿರೋಧ ಪಕ್ಷದವರು ಅಧಿಕಾರಿಗಳ ಜೊತೆ ಮಾತನ್ನೇ ಆಡಬೇಡಿ, ಏನಿದ್ದರೂ ಪತ್ರ ವ್ಯವಹಾರ ಮಾಡಿ ಎಂದು ಮಾಡಿಬಿಡಿ. ನೀವು ಅಂಥ ಒಂದು ಹೊಸ ಸಂಪ್ರದಾಯವನ್ನು ಹುಟ್ಟು ಹಾಕಿ. ವಿರೋಧ ಪಕ್ಷದವರು ಅಧಿಕಾರಿಗಳ ಜೊತೆ ಮಾತನಾಡಕೂಡದು, ಮಾತನಾಡಿದ ತಕ್ಷಣ executive interference ಆಗಿ ಹೋಗಿ ಬಿಡುತ್ತದೆ. ನನ್ನನ್ನು appoint ಮಾಡಿರತಕ್ಕಂಥದ್ದು ಸಭಾಧ್ಯಕ್ಷರು. It is he, who recognized me as a leader of the opposition. Is it not an interference with my rights? Is it not interference with the Legislature? I am part of the Legislature. The very circular issued by the Executive is an interference with the

Legislature. It amounts to breach of privilege. ಬ್ಯೂರೋಕ್ರೆಟ್ಸ್ ಅನ್ನು ಪ್ರಶ್ನೆಯನ್ನೇ ಮಾಡುವ ಹಾಗಿಲ್ಲ. ಯಾರ ಮೇಲೂ ಏನನ್ನು ಹೇಳಲೇಬೇಡಿ ಎಂದು ಇನ್ನೂ ಒಂದು ತಂದು ಬಿಡಿ. ಹೀಗಾದರೆ, leader of the opposition effective ಆಗಿ ಕೆಲಸ ಮಾಡುವುದು ಹೇಗೆ? ಪರಸ್ಪರ mutual co-operation ಇರಬೇಕು. ಮಾವಳಂಕರ್‌ರವರು ಬಹಳ ಅನುಭವ ಇದ್ದಂಥವರು, ಈ ದೇಶದಲ್ಲಿ ಒಳ್ಳೆಯ speaker ಎಂದು ಹೇಳಿಸಿಕೊಂಡ ಅವರು ಹೇಳಿರುವುದು ಸರಿಯಿಲ್ಲವೇ? ಅವರು ಹೇಳಿರುವುದನ್ನು ಇನ್ನೊಂದು ಸಾರಿ repeat ಮಾಡಲೆ? ಇನ್ನೊಂದು ಸಾರಿ ಓದಲೆ? ಯಾವುದೇ ಒಂದು ಪತ್ರಿಕೆಯಿಂದ ತೆಗೆದು ಹೇಳಿದಂಥದ್ದಲ್ಲ ಇದು. ಮಾವಳಂಕರ್‌ವರೇ ಬರೆದಿರತಕ್ಕಂಥದ್ದನ್ನು ಓದಿದ್ದೇನೆ. ನೋಡಿ ಅವತ್ತು ನಾನು ಈ ಪುಸ್ತಕದಿಂದಲೇ ಓದಿದ್ದು. ಆವತ್ತು ಅದನ್ನು ಪೇಪರ್‌ನಲ್ಲಿ ಬರೆದುಕೊಂಡು ಓದಿದ್ದೆ. "For real democracy one has to look not merely in the provisions of the Constitution or the Rules and Regulations made for the conduct of the business in the Legislatures. But one has to master a real democratic spirit in those who form the Legislature. If this fundamental is borne in mind, it will be clear that though questions would be decided by majorities, parliamentary government will not be possible if it is just a mere counting of heads or hands. If we are going to merely by majority, we shall be fostering the seeds of fascism." ಈ ಪದವನ್ನು ಬಳಸಿದ್ದು ನಾನಲ್ಲ. ಅವರು ಹೇಳಿರುವ ಪದವನ್ನು ನಾನು ಹೇಳಿದ್ದೇನೆ. ಅವರ statement ಅನ್ನೇ ನಾನು ಇಲ್ಲಿ quote ಮಾಡಿದ್ದು. Seeds of fascism, ಅದನ್ನು ಮಾಡುವಿರಾ? ಮಾಡಬೇಕೆಂದರೆ ನೀವು ಮಾಡಿ. "Violence and revolt, if on the other hand we could help to foster a spirit of tolerance, a spirit of freedom of discussion and a spirit of understanding, we shall be fostering the spirit of democracy" ಇದನ್ನು ನಾನು ಹೇಳಿರುವುದು. ನಾನು ಇದನ್ನು ಹೇಳಿದರೆ, fascism ಎಂದು ನೀವು ಹೇಳುತ್ತೀರಿ, ನಮ್ಮ ಹಕ್ಕುಗಳನ್ನು ಕಿತ್ತುಕೊಳ್ಳುತ್ತೀರಿ ಎಂದು ಹೇಳುತ್ತೀರಿ. ನಾನು ಇವರು ಹೇಳಿರತಕ್ಕಂಥದ್ದರಲ್ಲಿ ನಂಬಿಕೆ ಇಟ್ಟುಕೊಂಡು ಹೇಳಿದ್ದೇನೆ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವರು ಅತ್ಯಂತ ಅನುಭವದಿಂದ ಯೋಗ್ಯವಾದ ಮಾತುಗಳನ್ನು ಹೇಳಿದ್ದಾರೆ. ಇದನ್ನು ಯಾರೂ dispute ಮಾಡುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. Nobody will dispute. ನಿಮಗೆ ಪ್ರಜಾಪ್ರಭುತ್ವ

ವ್ಯವಸ್ಥೆಯಲ್ಲಿ ನಂಬಿಕೆಯಿಲ್ಲ ಎನ್ನುವುದಾದರೆ, ಸಂಸದೀಯ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲ ಎನ್ನುವುದಾದರೆ ನೀವು ಏನು ಬೇಕಾದರೂ ಮಾಡಿ. ಆದರೆ, ನನ್ನ ಹಕ್ಕುಗಳನ್ನು ನೀವು ಕಿತ್ತುಕೊಳ್ಳುವುದಕ್ಕೆ ಆಗುವುದಿಲ್ಲ. Because, I am also elected by the people. I am recognized by the Hon'ble Speaker. ನಾನು ನನ್ನ ಹಕ್ಕುಗಳನ್ನು ಮೀರಿ ಹೋಗಿರುವೆನಾ ಎಂದು he has to decide. ಅಥವಾ ಅಧಿಕಾರಿಗಳ ಜೊತೆ interaction ಮಾಡಲಿಕ್ಕೆ ನನಗೆ ಹಕ್ಕುಗಳಿಲ್ಲ ಎನ್ನತಕ್ಕಂಥದ್ದನ್ನು ನೀವು (ಸಭಾಧ್ಯಕ್ಷರು) ತೀರ್ಮಾನ ಮಾಡಿ. It is not the Executive. I am the part of the Legislature. ನನ್ನ ಹಕ್ಕುಗಳನ್ನು ತೀರ್ಮಾನ ಮಾಡವುದು Chief Secretary ಅಲ್ಲ. ಸರ್ಕಾರವೂ ಅಲ್ಲ. ಅದನ್ನು ನೀವು ತೀರ್ಮಾನ ಮಾಡಬೇಕು. You have to protect my rights. ಅದನ್ನು ಬಿಟ್ಟು ನೀವು ಕಥೆಯೆಲ್ಲ ಹೇಳಿದರೆ ಏನೂ ಪ್ರಯೋಜನವಾಗುವುದಿಲ್ಲ, ನಮಗೆ ಅದರ ಅಗತ್ಯವೂ ಇಲ್ಲ. ಅದು ಇಲ್ಲಿ relevant ಸಹಾ ಅಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, 1996ರಲ್ಲಿ ತಾವೂ ಇದ್ದಿರಿ. ಮಾನ್ಯ ನಂಜೇಗೌಡರು ಬಿ.ಜೆ.ಪಿ. ಶಾಸಕರಾಗಿ ಮಾತನಾಡುವಾಗ, L.H. ಹೊಸ building ಕಟ್ಟುವ ವಿಚಾರದಲ್ಲಿ judiciary interfere ಆಗಿತ್ತು. ಆಗಿನ Judge ರವರ ಬಗ್ಗೆಯೇ ಇಲ್ಲಿ ಚರ್ಚೆಯಾಗಿತ್ತು. Judiciary Legislatureನ್ನು enroachಮಾಡುವುದಕ್ಕೆ ಆಗುವುದಿಲ್ಲ, ಅವರ ಮೇಲೆ ಪ್ರಭಾವ ಬೀರುವುದಕ್ಕೆ ಆಗುವುದಿಲ್ಲ ಎನ್ನುವ ಬಗ್ಗೆ ಈ ಸದನದಲ್ಲಿ ದಿನಗಟ್ಟಲೆ ಚರ್ಚೆಯಾಗಿದೆ. ಈಗ ನೀವು executiveಗೆ ಅಷ್ಟೊಂದು importance ಕೊಟ್ಟಮೇಲೆ legislature ಗೆ ಸಂಬಂಧಪಟ್ಟ ಹಾಗೆ ಇನ್ನು judiciaryಗೆ ಕೆಲಸ ಏನಿದೆ?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಸಭಾಧ್ಯಕ್ಷರೆ, ದ್ವೇಷ ಸಾಧನೆ ಮಾಡುವುದಕ್ಕೆ ನಾಗರಹಾವಿಗೆ 12 ವರ್ಷ. ಆದರೆ ಬಿ.ಜೆ.ಪಿ.ಗೆ. 30 ವರ್ಷ ಎಂದು ನಮಗೆ ಗೊತ್ತಾಗಿದ್ದು ಇವತ್ತೇ. ಏಕೆಂದರೆ, ನಾವು ಏನೋ ಒಂದು ವಿಚಾರವನ್ನು ತಂದರೆ, ಅದಕ್ಕೆ ನೀವು ಜೂನ್ 25, 1975ರಲ್ಲಿ ಹೀಗಾಗಿತ್ತು ಎಂದು ಹೇಳುತ್ತಿರತಕ್ಕಂಥ ಧಾಟಿ ನೋಡಿದರೆ, ವಿರೋಧ ಪಕ್ಷದ ನಾಯಕರೇ, ಇವತ್ತು ಬರೀ ಅಧಿಕಾರವನ್ನು ಮೊಟಕು ಮಾಡಿದ್ದೇವೆ, ಇನ್ನು ಮುಂದೆ ಇನ್ನೂ ಹೆಚ್ಚಿನದ್ದು ಕಾದಿದೆ ಎನ್ನುವ ಅರ್ಥದಲ್ಲಿ ನೀವು ಮಾತನಾಡುತ್ತಿದ್ದೀರಿ. ನೀವು ಹೇಳಿದ ಅರ್ಥ ಅದೇ ಅಲ್ಲವೇ? 30 ವರ್ಷದ ಹಿಂದೆ ಆಗಿದ್ದನ್ನು ನೀವು

ಹೇಳುತ್ತಿದ್ದೀರಿ. ಆವತ್ತು ಸಂವಿಧಾನ ಇರಲಿಲ್ಲ, ಅದು ಆಯಿತು. ಆವತ್ತು ಸಂವಿಧಾನ ಇರಲಿಲ್ಲ ಎಂದರೆ suspend ಮಾಡಿದ್ದರು. ಇವತ್ತು ಎಲ್ಲವೂ ಇದ್ಯಾಗ್ಯೂ ಕೂಡ ಹೀಗೆ ಮಾಡುತ್ತೇವೆ ಎಂದರೆ ಇದು ಪರೋಕ್ಷವಾಗಿ ವಿರೋಧ ಪಕ್ಷದ ನಾಯಕರಿಗೆ ನೀವು ಕೊಡುತ್ತಿರತಕ್ಕಂಥ ಎಚ್ಚರಿಕೆಯೇ ಇದು? ಇದು ಏನೆಂದು ನನಗೆ ಅರ್ಥವಾಗುವುದಿಲ್ಲ. ನೀವು ಅದನ್ನೇ ಸಾಬೀತು ಮಾಡಬೇಕು. ಒಟ್ಟಿನಲ್ಲಿ ವಿರೋಧ ಪಕ್ಷದ ನಾಯಕರ ಸ್ಥಾನ ಅಥವಾ ಪ್ರತಿಪಕ್ಷದ ನಾಯಕತ್ವದ ಸ್ಥಾನಕ್ಕೆ ಘನತೆ, ಗೌರವ ಬರಬೇಕು, ಸಂಸದೀಯ ನಡವಳಿಕೆಗಳಿಗೆ ಹೆಚ್ಚು ಲಾಭವಾಗಬೇಕು ಎನ್ನುವ ಉದ್ದೇಶ ನಿಮ್ಮಲ್ಲಿ ಇಲ್ಲ ಎಂದು ನನಗನ್ನಿಸುತ್ತದೆ. ನಾವು ಹೇಳಿರತಕ್ಕಂಥದ್ದು ಏನೆಂದರೆ, ನಮಗೆ ಮಾನ್ಯತೆ ಮಾಡಿರತಕ್ಕಂಥವರು ಸ್ಪೀಕರ್‌ರವರು. ಸ್ಪೀಕರ್‌ರವರು ಅದನ್ನು ನಮಗೆ ಭೋದನೆ ಮಾಡಬೇಕು. ಹೆಚ್ಚು ಕಡಿಮೆ ಆದಂಥ ಸಂದರ್ಭದಲ್ಲಿ ಸಭಾನಾಯಕರು ವಿರೋಧ ಪಕ್ಷದ ನಾಯಕರ ಹತ್ತಿರ ಮಾತನಾಡಬಹುದಿತ್ತು, ಚರ್ಚೆ ಮಾಡಬಹುದಿತ್ತು. ಚರ್ಚೆ ಮುಖೇನ ಇತ್ಯರ್ಥ ಮಾಡಬಹುದಿತ್ತು. ಏನೋ ದೊಡ್ಡ ಪ್ರಮಾದ ಆಗಿ ಹೋಗಿ ಬಿಟ್ಟಿತ್ತೇನು? ಅದೇನೋ ಬಹಳ ದೊಡ್ಡದಾಗಿಬಿಟ್ಟಿದೆ ಎನ್ನುವ ರೀತಿಯಲ್ಲಿ ಒಂದು ದೊಡ್ಡ ಆದೇಶವನ್ನು ತೆಗೆದುಕೊಂಡು ಹೋಗಿ ಏಕೆ Chief Secretary ಯವರನ್ನು ಆ ಮಟ್ಟಕ್ಕೆ involve ಮಾಡಿದ್ದೀರಿ? ನಿಮಗೆ ಬೇಕು ಎಂದಿದ್ದರೆ Legislature Secretary ಅದನ್ನು ಮಾಡಬಹುದಾಗಿತ್ತು. ಇದನ್ನು ನೀವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಏನೇನೋ ಉದಾಹರಣೆಗಳನ್ನು ಕೊಡುವುದಾದರೆ ಅದಕ್ಕೆ ಅರ್ಥ ಬರುವುದಿಲ್ಲ. ಇದರಲ್ಲಿ ಕೇವಲ Executive ಅನ್ನು ಮಾತ್ರ involve ಮಾಡಿಲ್ಲ. ನೀವು ಇದರಲ್ಲಿ Speaker ರವರನ್ನು involve ಮಾಡಿದ್ದೀರಿ. ಮೇಲ್ಮನೆಯ ಸಭಾಪತಿಯವರನ್ನು involve ಮಾಡಿದ್ದೀರಿ. ನಿಮ್ಮ ಆದೇಶದಲ್ಲಿ ಅವರನ್ನು consult ಮಾಡಿದ್ದೇವೆಂದು ಹೇಳಿದ್ದೀರಿ. ನೀವು Speaker, Chairman ರವರನ್ನು consult ಮಾಡಿದ್ದೀರಾ? ಈ circular ಬಗ್ಗೆ ಅವರಿಗೆ ಒಪ್ಪಿಗೆ ಇದೆಯೇ? ಆ ಸಂಪ್ರದಾಯ ಇದೆಯೇ? ಸಲಹೆ ಕೊಟ್ಟಿದ್ದಾರೆಯೇ? ಏನಿದು? ನೀವು ಸ್ವೇಚ್ಛೆಯಾಗಿ ಈ ರೀತಿಯಾದ ಕೆಲಸವನ್ನು ಮಾಡಿದರೆ ಏನಾಗಬೇಕು? ಲೆಕ್ಕಾಚಾರವಾಗಿ ಇದರಲ್ಲಿ ಮಾನ್ಯ ಸಭಾಧ್ಯಕ್ಷರ ಹೆಸರನ್ನು ತೆಗೆದುಕೊಂಡಿದ್ದೀರಿ ಎನ್ನುವ ಕಾರಣಕ್ಕೋಸ್ಕರ ನಾವು ಬಹಳ ಮಿತವಾಗಿ ಮಾತನಾಡುತ್ತಿದ್ದರೆ ನೀವು 30 ವರ್ಷಗಳ ಹಿಂದಿನ ಉದಾಹರಣೆಯನ್ನು ಕೊಡುತ್ತಿದ್ದೀರಲ್ಲಾ ಇದು ಸರಿಯೇ? ನೀವು ಇವತ್ತು ಆ

ಭಾಗದಲ್ಲಿ ಕುಳಿತು speaker ಸ್ಥಾನವನ್ನು ಮತ್ತು chairman ರವರ ಸ್ಥಾನವನ್ನು ಎಲ್ಲಿಗೆ ತೆಗೆದುಕೊಂಡು ಹೋಗಿದ್ದೀರಿ? ನೀವು Chief Secretary ಯವರ ಕೆಳಗಿನ ಹಂತಕ್ಕೆ ತೆಗೆದುಕೊಂಡು ಹೋಗಿದ್ದೀರಲ್ಲಾ ಇದು ಸರಿಯೇ? ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಈ ರೀತಿ ಮಾಡುವುದಕ್ಕೆ ಅವಕಾಶವಿದೆಯೇ? ನಿಮಗೆ ಅಧಿಕಾರ ಕೊಟ್ಟವರು ಯಾರು? ಅದಕ್ಕೆ ನೀತಿ, ನಿಯಮ ಬೇಡವೇ? ನಾವು ಇಲ್ಲಿ ಪ್ರಾಸ್ತಾವಿಕವಾಗಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದೆವು ಎಂದರೆ ಅದನ್ನು ತಾರ್ಕಿಕವಾಗಿ ಯಾವ ರೀತಿ ತೆಗೆದುಕೊಳ್ಳಬೇಕೆನ್ನುವುದನ್ನು ನೀವು ಯೋಚನೆ ಮಾಡಬೇಕು. ನಮಗೆ ಯಾರ ಮೇಲೆ ವಿಶ್ವಾಸ ಇಲ್ಲದಿದ್ದರೂ ನೀವು ಈ circular ಅನ್ನು withdraw ಮಾಡಿಕೊಳ್ಳುತ್ತೀರಿ ಎಂದು ನಿಮ್ಮ ಮೇಲೆ ನಮಗೆ ವಿಶ್ವಾಸವಿತ್ತು. ಆದರೆ, ನೀವು ಆ ರೀತಿ ಮಾಡಲಿಲ್ಲ. ಆದ್ದರಿಂದ, ನನಗನಿಸುವುದೇನೆಂದರೆ, ಇವರು circular ಅನ್ನು withdraw ಮಾಡದೆ ಉದ್ಧಟತನ ತೋರಿಸುತ್ತಿರುವುದರಿಂದ ಮಾನ್ಯ ಅಧ್ಯಕ್ಷರೆ ತಾವು ಈ circule ಅನ್ನು reject ಮಾಡಬೇಕಾಗುತ್ತದೆ. ಇದು ಸದಸ್ಯರ ಗೌರವದ ಪ್ರಶ್ನೆ, ವಿರೋಧ ಪಕ್ಷದ ಮರ್ಯಾದೆ ಪ್ರಶ್ನೆ ಆಗುತ್ತದೆ. ಇದರಲ್ಲಿ ನಿಮ್ಮನ್ನೂ ಕೂಡ involve ಮಾಡಿದ್ದಾರೆಂದರೆ ಈ ಬಗ್ಗೆ ನಿಮ್ಮನ್ನು ಯಾವ ರೀತಿ involve ಮಾಡಿದ್ದಾರೆ ಎನ್ನುವ ಬಗ್ಗೆ ಇವತ್ತು ನಿಮ್ಮ ಕುರ್ಚಿಯಿಂದ ಸ್ಪಷ್ಟೀಕರಣ ಬರಲಿ. ಸಭಾನಾಯಕರಾದ ತಕ್ಷಣವೇ, ನಮಗೆ ಬಹುಮತವಿದೆ ಎನ್ನುವ ಕಾರಣಕ್ಕೋಸ್ಕರ ನಾವು ಏನು ಬೇಕಾದರೂ ಆದೇಶ ಮಾಡಬಹುದು, ಯಾರ ಹೆಸರನ್ನೂ ಬೇಕಾದರೂ ತೆಗೆದುಕೊಳ್ಳಬಹುದೆನ್ನುವ ದೃಷ್ಟಿಯಿಂದ ಮಾಡಿದರೆ ಇದು ಸರಿಯೇ? ಇಂಥ circularಗಳನ್ನು ನಾವು ನೋಡಿ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದೆಯೇ? ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮನ್ನು ಕೇಳುತ್ತಿದ್ದೇನೆ. ತಮ್ಮ ಪೀಠದಿಂದ ನಾವು ನ್ಯಾಯವನ್ನು ಕೇಳುತ್ತಿದ್ದೇವೆ, ನಮಗೆ ಈ ರೀತಿಯಾದ circular ಹೊರಡಿಸುವುದರಿಂದ ಆ ಸ್ಥಾನಕ್ಕೆ ಆ ಗೌರವ ಕಡಿಮೆಯಾಗಿದೆ ಎಂದು ಭಾವಿಸಬೇಕಾಗುತ್ತದೆ. ಸಂವಿಧಾನದ ಬಗ್ಗೆ ನಾವು ಇವರಿಂದ ಪಾಠ ಕಲಿಯಬೇಕಾಗಿಲ್ಲ. ಅದು ನಮಗೂ ಗೊತ್ತಿದೆ. ದೊಡ್ಡ ಆದೇಶ ಎನ್ನುವ ರೀತಿಯಲ್ಲಿ ಹೊರಡಿಸಿ, ಮಂತ್ರಿಯವರಿಗೆ ಕೊಟ್ಟ ಅಧಿಕಾರವನ್ನು ನಾವು ಕೊಟ್ಟಿಲ್ಲ ಎನ್ನುವ ಒಂದು ಸಾಲು ಹೇಳುವುದಕ್ಕೆ ಇಷ್ಟು ದೊಡ್ಡ circular ಬೇಕೇ? ಇಷ್ಟೊಂದು ದೊಡ್ಡ news ಮಾಡುವ ಅವಶ್ಯಕತೆ ಇತ್ತೇ? ಅದಕ್ಕೆ Chief Secretarty ಯವರನ್ನು involve ಮಾಡುವ ಅಗತ್ಯವಿತ್ತೇ

ಎನ್ನುವುದನ್ನು ತಾವು ಯೋಚನೆ ಮಾಡಿ. ಮಾನ್ಯ ಸಭಾಧ್ಯಕ್ಷರೆ, ತಮ್ಮ ಪೀಠದಿಂದ ಇವತ್ತು ಇದಕ್ಕೊಂದು ಅಂತಿಮವಾದ ತೀರ್ಪು ಬೇಕು. ಇನ್ನು ಮುಂದೆ ಇದು ಮರುಕಳಿಸಬಾರದು. ಇವತ್ತು ನಾವಿಲ್ಲಿ ಮಾಡಿದ್ದು ಸರಿಯೋ ಅಥವಾ ಇನ್ನೊಂದೋ ಎನ್ನುವುದ ಬೇಡ. ಇದನ್ನು Privilege Committeeಗೆ ಒಪ್ಪಿಸಿ, ಅಲ್ಲಿ ಇದು ಇತ್ಯರ್ಥವಾಗಲಿ. ಅಲ್ಲಿಂದ ಸಲಹೆ ಬರಲಿ ನೋಡೋಣ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಜಯಚಂದ್ರರವರು ಹೇಳಿರುವುದನ್ನು ನಾನು ಕೂಡ ಒಪ್ಪುತ್ತೇನೆ. ಇದರ ಮೇಲೆ jurisdiction ಇರುವುದು ಯಾರಿಗೆ? Upper Houseನಲ್ಲಿ jurisdiction ಇರುವುದು ಯಾರಿಗೆ? ಇಲ್ಲಿ jurisdiction ಇರುವುದು ಯಾರಿಗೆ? ಇಲ್ಲಿ ಇರುವುದು ಸಭಾಧ್ಯಕ್ಷರಾದ ತಮಗೆ, ಸರ್ಕಾರಕ್ಕಲ್ಲ. ಮೇಲ್ಮನೆಯಲ್ಲಿ ಸಭಾಪತಿಯವರಿಗೆ jurisdiction ಇದೆ. ನಿಮ್ಮ jurisdiction ನಲ್ಲಿ ಈ ತರಹ ಆಗುತ್ತಿದೆಯಲ್ಲಾ, ಸರ್ಕಾರ interfere ಆಗುತ್ತಿದೆಯಲ್ಲಾ ಎಂದು ನಾವು ನಿಮಗೆ appeal ಮಾಡುತ್ತಿದ್ದೇವೆ. ಯಾವುದೋ ಒಂದು ಹಳೆಯದು emergency ಬಂದಿತ್ತು ಅದಕ್ಕೋಸ್ಕರ ಮಾಡಿದೆವು ಎಂದು ಸರ್ಕಾರ ಹೇಳುತ್ತದೆ. ಆದರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಇದು ಬಹಳ ಸ್ಪಷ್ಟವಾಗಿದೆ. ಮಾನ್ಯ ಸಭಾಧ್ಯಕ್ಷರೆ ತಮಗೆ ಈ ಅಧಿಕಾರ ಇರುವಂಥದ್ದು. ಅವರಿಗೆ ಸಂಬಂಧಪಟ್ಟಿದ್ದು ಇದ್ದರೆ, ಅವರಿಗೆ ಅಧಿಕಾರವಿದ್ದಿದ್ದರೆ ನಮ್ಮ ಭಾಷೆಯೇ ಬೇರೆ ತರಹ ಇರುತ್ತಿತ್ತು. ಹೇಳುವ ಪದಗಳ ಪ್ರಯೋಗವೇ ಬೇರೆ ಇರುತ್ತಿತ್ತು. ಸರ್ಕಾರದ circular ನಲ್ಲಿ ಮಾನ್ಯ ಸಭಾಧ್ಯಕ್ಷರ ಮತ್ತು ಸಭಾಪತಿಯವರ ಹೆಸರನ್ನು ತಂದಿದ್ದಾರೆ. ಅವರ ಜೊತೆ ನಾವು ಚರ್ಚೆ ಮಾಡಿದ್ದೇವೆ. ಒಂದು ದೊಡ್ಡ emergency ಆದೇಶವನ್ನು issue ಮಾಡುತ್ತಿದ್ದೇವೆ ಎಂದು ಹೇಳಿದರು. ಪೇಪರ್‌ಗಳಲ್ಲಿ ಬಂದಿರುವುದೆಲ್ಲ ಅದೇ ಎಂದು ಹೇಳುತ್ತೀರಿ. ನಿಮಗೆ ಬೇಕಾದಾಗ ನಿಮಗೆ ಹೇಗೆ ಬೇಕೋ ಹಾಗೆ ಉಪಯೋಗಿಸಿಕೊಳ್ಳುತ್ತೀರಿ. ಇಲ್ಲಿ ನಿಮಗೆ ಅನುಕೂಲವಾಗುವುದಾದರೆ ಅದನ್ನು ಉಪಯೋಗಿಸಿಕೊಳ್ಳುವುದು. ಅನುಕೂಲವಾಗಲಿಲ್ಲವೆಂದರೆ ಅದು fourth pillar ಎಂದು ಇಲ್ಲಿ ಹೇಳುತ್ತೀರಿ. KHB ಬಗ್ಗೆ ಪತ್ರಿಕೆಯವರು ಬರೆದಾಗ ಅದು fourth pillar ಅಲ್ಲವೇ? ಆಗ ಅದು fifth pillar ಆಯಿತೆ? ಅದನ್ನು ಹಾಗೆಯೇ ತೆಗೆದುಕೊಳ್ಳಬೇಕಲ್ಲವೇ? ಆ KHB ಹಗರಣದ ಬಗ್ಗೆ ಬರೆದಾಗ ಅದು fourth pillar ಅಲ್ಲವೇ? It is a clear case of ನಮಗೆ breach of privilege ಆಗಿದೆ. ಇಲ್ಲಿ ನನಗೊಬ್ಬನಿಗೇ ಅಲ್ಲ ಇಲ್ಲಿರುವ ಎಲ್ಲ ಸದಸ್ಯರಿಗೆ, Institution ಗೆ breach of privilege ಆಗಿದೆ.

ನೀವು ಇದನ್ನು ರಕ್ಷಣೆ ಮಾಡಬೇಕು. Opposition, Leader of the Oppositionಗೆ ಮರ್ಯಾದೆ ಇಲ್ಲದ ಹಾಗಾಗುತ್ತದೆ. ಈ ಸ್ಥಾನಕ್ಕೆ ಮರ್ಯಾದೆ ಹೋದ ಮೇಲೆ ಏಕೆ ಇಲ್ಲಿ ಕೆಲಸ ಮಾಡಬೇಕು? ನಾವು ಇಲ್ಲಿ facilities ಕೊಡಿ ಎಂದು ಕೇಳುವುದಕ್ಕೆ ಬಂದಿಲ್ಲ. ಇನ್ನೂ facilities ಹೆಚ್ಚು ಮಾಡಿ ಎಂದು ಕೇಳುವುದಕ್ಕೆ ಇಲ್ಲಿ ಬಂದಿಲ್ಲ. Rules ಮಾಡುವ ಅಧಿಕಾರ ಇರುವುದು ಆ ಕಡೆ ಇರುವವರಿಗೆ. ತೀರ್ಮಾನ ಮಾಡಬೇಕಾಗಿರುವುದು ಅವರು. ಮುಖ್ಯ ಮಂತ್ರಿಯವರು 3 ಬಾರಿ Leader of the Opposition ಆಗಿ ಕೆಲಸ ಮಾಡಿದ್ದಾರೆ, ಅದನ್ನು ವಾಪಸ್ ತೆಗೆದುಕೊಳ್ಳುತ್ತೇವೆ, ಈ ಸ್ಥಾನಕ್ಕೆ ಗೌರವ ಉಳಿಸುವ ಕೆಲಸ ಏನು ಮಾಡಬೇಕೋ ಅದನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡುತ್ತಾರೆಂದು ನಾನು ಭಾವಿಸಿದ್ದೆ. ಆದರೆ, ಅವರ ಉತ್ತರ ನೋಡಿದರೆ ಉದ್ಧಟತನ ಕಂಡು ಬರುತ್ತದೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ನೀಡಿದ ಉತ್ತರವನ್ನು ಗಮನಿಸಿದರೆ, ಜವಾಬ್ದಾರಿಯಿಂದ ಉತ್ತರ ಕೊಟ್ಟ ಹಾಗೆ ಕಾಣಿಸುವುದಿಲ್ಲ, ಜವಾಬ್ದಾರಿಯಿಂದ ಉತ್ತರ ಕೊಟ್ಟ ಹಾಗಾಗುವುದಿಲ್ಲ. ತಾವು careless ಆಗಿ ಉತ್ತರ ಕೊಟ್ಟಿದ್ದೀರಿ. ಯಾವಾಗಲೂ ಸರ್ಕಾರ ನಡೆಸುವವರೆ, ಹೆಚ್ಚು ಜವಾಬ್ದಾರಿಯಿಂದ ಉತ್ತರ ಕೊಡಬೇಕು. On the basis of the facts, on the basis of the evidence ಉತ್ತರ ಕೊಡಬೇಕು. ಅದು ಬಿಟ್ಟು, ಯಾವುದೋ ಹಳೆಯ ಕಾಲದ ಉದಾಹರಣೆಯನ್ನು ತೆಗೆದುಕೊಂಡು defend ಮಾಡಿಕೊಳ್ಳಲಿಕ್ಕೆ, ಮಾಡಿರತಕ್ಕಂಥ ತಪ್ಪನ್ನು ಮುಚ್ಚಿಕೊಳ್ಳಲಿಕ್ಕೆ, defend ಮಾಡಿಕೊಳ್ಳಲಿಕ್ಕೆ ಮಾಡತಕ್ಕಂಥದ್ದು ಸರಿ ಇಲ್ಲ. ನಾವು ಇದನ್ನು ವಿರೋಧ ಮಾಡುತ್ತೇವೆ. ಈ ವಿಷಯವನ್ನು Privilege Committeeಗೆ ವಹಿಸಬೇಕು. ಮಾನ್ಯ ಸಭಾಧ್ಯಕ್ಷರೆ, ತಮಗೆ ಅಗೌರವ ತೋರಿಸಬೇಕೆಂದು ಈ ಸದನದ ಬಾವಿಗೆ ನಾವು ಬರುತ್ತಿಲ್ಲ. ಇದು ನಿಮ್ಮ ವಿರುದ್ಧವಲ್ಲ. ನೀವು ಈ ವಿಷಯದಲ್ಲಿ interfere ಆಗಬೇಕು. ಆ ಆದೇಶವನ್ನೇನು ಹೊರಡಿಸಿದ್ದಾರೆ, ಅದನ್ನು ಸಭಾಧ್ಯಕ್ಷರಾದ ತಾವೇ reject ಮಾಡಿಸಬೇಕು ಮತ್ತು ನೀವು ನಮಗೆ ರಕ್ಷಣೆ ಕೊಡುವ ಕೆಲಸ ಮಾಡಬೇಕು. ಅದಕ್ಕೋಸ್ಕರ ಸರ್ಕಾರದವರೇನು ಉದ್ಧಟತನದಿಂದ ಉತ್ತರ ಕೊಟ್ಟಿದ್ದಾರೆ ಅದನ್ನು ನಾನು ವಿರೋಧ ಮಾಡುತ್ತೇನೆ, ಖಂಡಿಸುತ್ತೇನೆ, ಈ ಸರ್ಕಾರಕ್ಕೆ ಜವಾಬ್ದಾರಿ ಇಲ್ಲ, ಪ್ರಜಾಪ್ರಭುತ್ವದಲ್ಲಿ ಗೌರವವಿಲ್ಲ, ವಿರೋಧ ಪಕ್ಷಗಳಿಗಿಂತಲೂ ಮೂರು ಕಾಸಿನ ಗೌರವ ಕೊಡುತ್ತಿಲ್ಲ, ಇವರಿಗೆ ಸಂಸದೀಯ ವ್ಯವಸ್ಥೆಯಲ್ಲೂ

ನಂಬಿಕೆ ಇಲ್ಲವೆಂದು ಇಡೀ ರಾಜ್ಯದ ಜನರ ಮುಂದೆ ಹೇಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಇದನ್ನು ಪ್ರತಿಭಟಿಸಿ, ಸದನ ಬಾವಿಯಲ್ಲಿ ಧರಣಿ ನಡೆಸುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾದರು)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ದಿನಾಂಕ 25–6–2009ರ ಆದೇಶದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 69ರಡಿಯಲ್ಲಿ ಚರ್ಚಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರ ಕೊಡುವ ಸಮಯದಲ್ಲಿ ಕೆಲವು ಘಟನೆಗಳ ಬಗ್ಗೆ ವಿವರಣೆ ನೀಡಿದರು. ಒಂದು ಘಟನೆ ಏನೆಂದರೆ, ದಿನಾಂಕ 25–6–1975ರಲ್ಲಿ ಈ ದೇಶದಲ್ಲಿ emergency ಅನ್ನು declare ಮಾಡಿದವರು ಯಾರು? ಅಂದರೆ, 1975ರಲ್ಲಿ ನೀವು emergency ಜಾರಿಗೆ ತಂದಿರಿ, ಅದೇ ರೀತಿ ವಿರೋಧ ಪಕ್ಷ ಮತ್ತು ಶಾಸಕರ ಹಕ್ಕನ್ನು ನಾವೂ ಒಂದು emergency ಮುಖೇನ ತರುತ್ತೇನೆ ಎನ್ನುವ message ಅನ್ನು ಇವತ್ತು ಇಡೀ ರಾಜ್ಯದ ಅಧಿಕಾರಿಗಳಿಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಸದನದ ಮುಖೇನ ತಿಳಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇದಲ್ಲದೆ, ಅವರು ಕೆಲವು ಉದಾಹರಣೆಗಳನ್ನು ಕೊಟ್ಟರು. ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಹೀಗೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿರುವ ವಿಷಯವನ್ನು ಅವರುquote ಮಾಡಿದ್ದಾರೆ. ಆಗ quote ಮಾಡುವಾಗ ಅವರು ಒಂದು ಮಾತು ಹೇಳುತ್ತಾ, ಏನಾದರೂ ವಿರೋಧ ಪಕ್ಷದ ಶಾಸಕರಿಗೆ ಬೇಕಿದ್ದರೆ ಪತ್ರ ಬರೆದು ಕೇಳಲಿ ಕೊಡುತ್ತೇವೆಂದು ಹೇಳಿದರೆಂದು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಿದೆ ಎಂದು ಒಂದು ಕಡೆ ಹೇಳುತ್ತಾರೆ. ಕೊನೆಯಲ್ಲಿ ಉತ್ತರ ಕೊಡುವಾಗ ನಾವು 2 ಲಕ್ಷ ಜನರಿಂದ ಚುನಾಯಿತರಾದ ಸದಸ್ಯರು, ಸಭಾಧ್ಯಕ್ಷರಾದ ತಮ್ಮ ಅಧೀನದಲ್ಲಿದ್ದೇವೆ, ನಮಗೆ ಅವರು ಸಾಮಾನ್ಯ ಜನರ ಹಾಗೆ Right to Inofrmation Actನಲ್ಲಿ ಅರ್ಜಿ ಕೊಟ್ಟು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಆ ತರಹ ನಮ್ಮನ್ನು ಆ ಮಟ್ಟಕ್ಕೆ ಇಳಿಸುತ್ತಿದ್ದಾರೆಂದರೆ ಸಭಾಧ್ಯಕ್ಷರೆ, ಈ ಸರ್ಕಾರಕ್ಕೆ ಆತ್ಮ ಗೌರವ ಏನಾದರೂ ಇದೆಯೇ ಎಂದು ಕೇಳಬೇಕಾಗುತ್ತದೆ. ಅವರು ಆ ಹೇಳಿಕೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಏಕೆಂದರೆ, ಒಂದು ಕಡೆ ವಿರೋಧ ಪಕ್ಷದ ನಾಯಕರ ಹಕ್ಕು, ಮತ್ತೊಂದು ಕಡೆ ಸದಸ್ಯರ ಹಕ್ಕು

ಇವರೆಡನ್ನೂ ಈ ಸರ್ಕಾರ ದಮನ ಮಾಡಬೇಕೆನ್ನುವ ನಿರ್ಣಯಕ್ಕೆ ಬಂದಿದೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ, ನಾವು emergency ಮುಖೇನ ಈ ಸರ್ಕಾರದ ಯಾವುದೇ ಲೋಪದೋಷಗಳನ್ನು ಕೇಳಬೇಕಾದರೆ, ಚುನಾಯಿತ ಜನಪ್ರತಿನಿಧಿಗಳಾದ ನಾವು Right to Information Act ಅಡಿಯಲ್ಲಿ ಅರ್ಜಿ ಹಾಕಿಕೊಂಡು ನಿಂತುಕೊಳ್ಳಬೇಕಾಗುತ್ತದೆ. Right to Information Act ಅಡಿಯಲ್ಲಿ ನಾವು ಅರ್ಜಿ ಹಾಕಿಕೊಂಡು ಸ್ವಾಮಿ, ದಯಮಾಡಿ ಎಂದು ಕೇಳಿಕೊಂಡು ಇರಬೇಕೇ? ಈ ಸರ್ಕಾರಿ ಆದೇಶದಲ್ಲಿ ಇನ್ನೊಂದು ವಿಷಯ ಹೇಳುತ್ತಾರೆ. ಯಾರ್ಯಾರು ವಿರೋಧ ಪಕ್ಷದ ನಾಯಕರೋ ಅಥವಾ ಸದಸ್ಯರೋ ಯಾರಾದರೂ ಕೇಳಬೇಕಾದರೆ, ಸಚಿವರ ಹತ್ತಿರ ಅರ್ಜಿ ಹಾಕಿಕೊಳ್ಳಬೇಕು. ಈ ಸರ್ಕಾರ ಮಾಡಿದ್ದು ಯಾವುದಾದರೂ ರೆಕಾರ್ಡ್ ಬೇಕಾಗಿದ್ದರೆ ನಾವು ಎಲ್ಲಾ ಸಮಯದಲ್ಲಿ ಸಭಾಧ್ಯಕ್ಷರ ಹತ್ತಿರ ಅರ್ಜಿ ಹಾಕಿಕೊಳ್ಳಬೇಕೆಂದು ಕಾನೂನು ಮಾಡಿ ಬಿಟ್ಟರೆ ನಾವು ನಿಮ್ಮ ಕಡೆಯಿಂದಲೇ ತರಿಸಿಕೊಳ್ಳುತ್ತೇವೆ. ಇದು ಸದಸ್ಯರ ಹಕ್ಕು. 1975ರಲ್ಲಿ ಯಾವ ರೀತಿ emergency ತರಲಾಗಿತ್ತೋ ಅದೇ ರೀತಿ ರಾಜ್ಯದಲ್ಲಿ ನಾವು emergency ತರುತ್ತೇವೆನ್ನುವ ಮಟ್ಟಕ್ಕೆ ಸರ್ಕಾರ ಹೋಗಿದೆ. ಇದು ನಿಜವಾಗಿಯೂ ಸದಸ್ಯರ ಮತ್ತು ವಿರೋಧ ಪಕ್ಷದ ಸದಸ್ಯರ ಹಕ್ಕುಚ್ಯುತಿಗೆ ಕಾರಣವಾಗಿದೆ. ಇದನ್ನು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಬೇಕೆಂದು ಹೇಳಿ ನಾವು ಈ ಧರಣಿಯಲ್ಲಿ ಭಾಗವಹಿಸುತ್ತಿದ್ದೇವೆ. ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಗೌರವ ಇಲ್ಲ ಎನ್ನುವ ಭಾವನೆ ಇಡೀ ರಾಜ್ಯದ ಜನತೆಗೆ ಈ ಸದನದ ಮುಖೇನ ಇವತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಕೊಟ್ಟಂಥ ಕೊಡುಗೆ ಏನಾದರೂ ಇದ್ದರೆ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ Housing Board ಉದಾಹರಣೆಯೊಂದನ್ನು ನಾವು ಕೊಟ್ಟೆವು. ರೈತರಿಗೆ 5 ಲಕ್ಷ ರೂ. ಮಂತ್ರಿ ಅಣ್ಣನಿಗೆ 45 ಲಕ್ಷ ರೂ. ಇಂಥವಕ್ಕೆಲ್ಲ ಹೇಗೆ ಕೊಟ್ಟಿರಿ ಎಂದು ಕೇಳಬೇಡಿ ಎಂದರೆ ಈ ರೀತಿ ಲೂಟಿ ಮಾಡುವುದಾದರೆ ಇದನ್ನು ಖಂಡಿಸಿ ನಾವೂ ಸಹ ಇವತ್ತು ಧರಣಿ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಜೆಡಿ (ಎಸ್) ಪಕ್ಷದ ಸದಸ್ಯರು ಸದನದ ಬಾವಿಗೆ ಆಗಮಿಸಿ ಧರಣಿ ನಿರತರಾದರು)

ಅಧ್ಯಕ್ಷರು: Well ನಲ್ಲಿ ನಿಂತು ಮಾತನಾಡುವುದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. (ಗೊಂದಲ) ಮಾನ್ಯ ಸಚಿವರು ಏನೋ ಉತ್ತರ ಹೇಳುತ್ತಿದ್ದಾರೆ. ಕೇಳಿ.

(ಗೊಂದಲ)

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು): ದಮನಕಾರಿ ಧೋರಣೆ ಈಗ ಯಾರದು? ವಿರೋಧ ಪಕ್ಷದವರದೇ ಅಥವಾ ಆಡಳಿತ ಪಕ್ಷದವರದೇ ಎನ್ನುವುದು ಈಗ ಇವರ ವರ್ತನೆಯಿಂದ ಗೊತ್ತಾಗುತ್ತಿದೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಯಾರೂ ಕೂಗಬಾರದು. ತಾವು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಏನಾದರೂ ಮಾತನಾಡುವುದಿದ್ದರೆ ಮಾತನಾಡಿ. (ಗೊಂದಲ) ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು ಸಂಜೆ 4.45 ಗಂಟೆಗೆ ಮುಂದೂಡಲ್ಪಟ್ಟಿತು)

ಸಭೆಯು ಪುನಃ ಸಂಜೆ 6 ಗಂಟೆ 43 ನಿಮಿಷಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು

(ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಶಾಸಕರುಗಳು ಬಾವಿಯಲ್ಲಿ ಧರಣಿ ಹೂಡಿದ್ದರು)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ,

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ, ನಾನು ಆಗ ಮಾತನಾಡುತ್ತಿದ್ದೆ.

ಅಧ್ಯಕ್ಷರು: ಆಮೇಲೆ ಮಾತನಾಡಿ.

ಶ್ರೀ ಅರವಿಂದ ಲಿಂಬಾವಳಿ: ಮಾನ್ಯ ಅಧ್ಯಕ್ಷರೆ..

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಅವರನ್ನು ಸ್ವಲ್ಪ ಸುಮ್ಮನೆ ಇರಲು ಹೇಳುತ್ತೀರಾ? ದಯಮಾಡಿ ಅವರು ಒಂದು ನಿಮಿಷ ಈಲ್ಡ್ ಆಗುವುದಾದರೆ, ಈ ಸರ್ಕಾರಕ್ಕೆ ನಿಮ್ಮ ಮೇಲೂ ನಂಬಿಕೆ ಇಲ್ಲದಂತಾಗಿದೆ. ನಾನು ಮಾನ್ಯ ಸಿದ್ದರಾಮಯ್ಯ ಸಾಹೇಬರಿಗೆ request ಮಾಡಿದೆ. ಅವರೇನು order ಮಾಡಿದ್ದಾರೆ ಅದನ್ನು ವಾಪಸ್ ತೆಗೆದಕೊಂಡು, ಈ ಸದನದ ಸದಸ್ಯರ ಹಕ್ಕೇನಿದೆ ಅದನ್ನು ಕಾಪಾಡುವಂಥ ಅಧಿಕಾರ ಮಾನ್ಯ speaker ಸಾಹೇಬರಿಗೆ ಇರುವುದಿಂದ, ತಮ್ಮ ಅಧ್ಯಕ್ಷತೆಯಲ್ಲೇ ಒಂದು ಸಮಿತಿ ಮಾಡಲಿ, ಅದರಲ್ಲಿ ವಿರೋಧ ಪಕ್ಷದ ನಾಯಕರನ್ನೂ ಹಾಕಿಕೊಳ್ಳಿ, ಅದಕ್ಕೂ ಮೊದಲು ತಾವು ಮಾಡಿರುವ ಈ orderನ್ನು ವಾಪಸ್ ತೆಗೆದುಕೊಳ್ಳಿ. ಮಾಹಿತಿ ಬೇಕಾಗಿದ್ದರೆ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಆರ್.ಟಿ.ಐ. ಗೆ ಅರ್ಜಿ ಹಾಕಿ ನಿಂತುಕೊಳ್ಳಬೇಕು ಎನ್ನುವುದಾದರೆ, ಈ ಮೆಸೇಜ್‌ನ್ನು ರಾಜ್ಯದ ಜನತೆಗೆ ಕಳುಹಿಸುವುದಾದರೆ ಈ ಸರ್ಕಾರಕ್ಕೆ ಭ್ರಷ್ಟಚಾರವನ್ನು ಮುಚ್ಚಿ ಹಾಕಬೇಕು ಎಂಬ

ಒಂದೇ ಒಂದು ಉದ್ದೇಶ ಇದ್ದಂತಿದೆ. ಇವರ ಭ್ರಷ್ಟಾಚಾರವನ್ನು ಯಾವುದೇ ಕಾರಣಕ್ಕೂ ಅಧಿಕಾರಿಗಳು ಕೊಡಬೇಡಿ, ಬೀರುವಿನಲ್ಲಿ ಇಟ್ಟು ಬೀಗ ಹಾಕಿ ಇಟ್ಟುಕೊಳ್ಳಿ ಎನ್ನುವ ಮೆಸೇಜನ್ನು ಸಂಸದೀಯ ವ್ಯವಹಾರಗಳ ಸಚಿವರು ರಾಜ್ಯದ ಜನತೆಗೆ ಕಳಿಸಿಕೊಡುತ್ತಿದ್ದಾರೆ. ಇದನ್ನು ರಾಜ್ಯದ 5 ಕೋಟಿ ಜನರು ನೋಡಿಕೊಳ್ಳಿ ಎಂದು ಕಳಿಸಿಕೊಡುತ್ತಿದ್ದಾರೆ. ವಿರೋಧ ಪಕ್ಷದ ನಾಯಕರಿಗೆ ಆರ್.ಟಿ.ಐ.ಗೆ. ಹೋಗಿ ಮಾಹಿತಿ ತೆಗೆದುಕೊಳ್ಳಿ ಎನ್ನುವ ಮಟ್ಟಕ್ಕೆ ತೆಗೆದುಕೊಂಡು ಹೋಗುವುದಾದರೆ ನಮಗೆ ಇನ್ನೇನು ಉಳಿದಿದೆ? ಮಾನ್ಯ ಅಧ್ಯಕ್ಷರೇ, ನಿಮಗೂ ಬೆಲೆ ಇಲ್ಲದಂತಾಗಿದೆ. ವಿರೋಧ ಪಕ್ಷದ ನಾಯಕರಿಗೆ ಏನು ಹಕ್ಕುಗಳು ಕೊಡಬೇಕು, ಶಾಸಕರಿಗೇನು ಹಕ್ಕುಗಳನ್ನು ಕೊಡಬೇಕು ಎಂಬ ಬಗ್ಗೆ ನಿಮ್ಮ ಅಧ್ಯಕ್ಷತೆಯಲ್ಲೇ ಒಂದು ಸಮಿತಿ ಮಾಡಿ. ಎರಡು ಲಕ್ಷ ಜನರಿಂದ ನಾವು ಓಟು ತೆಗೆದುಕೊಂಡು ಗೆದ್ದು ಬಂದು ಆರ್.ಟಿ.ಐ.ಗೆ ಅರ್ಜಿಯನ್ನು ಹಾಕಿಕೊಂಡು ಹೋಗಬೇಕೇ? ಸರ್ಕಾರದಿಂದ ಯಾವುದಾದರು ಮಾಹಿತಿ ಬೇಕಾಗಿದ್ದರೆ ಅದಕ್ಕೆ ಆರ್.ಟಿ.ಐ.ಗೆ ಅರ್ಜಿ ಹಾಕಿಕೊಂಡು ಹೋಗಬೇಕೆಂದರೆ ನಾವೇಕೆ ಶಾಸಕರಾಗಿ ಇರಬೇಕು. ಇವತ್ತು common man ಸಹ ಅರ್ಜಿಯನ್ನು ಹಾಕಿಕೊಳ್ಳುತ್ತಾನೆ. ಇದು ಭ್ರಷ್ಟಾಚಾರದ ಸರ್ಕಾರವೋ ಅಥವಾ ಪಾರದರ್ಶಕ ಸರ್ಕಾರವೋ ಎಂಬ ಬಗ್ಗೆ ರಾಜ್ಯದ ಜನತೆಗೆ ಇವರು ಹೇಳಿಕೊಳ್ಳಬೇಕಾಗುತ್ತದೆ. ಇವರದ್ದು ಮಾನ ಮರ್ಯಾದೆ ಇಲ್ಲದ ಸರ್ಕಾರವೆಂದು ಹೇಳಿಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, unparliamentary ಪದಗಳನ್ನು ಉಪಯೋಗಿಸುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ತಾವೂ ಕೂಡ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿರುವವರು. ಸರ್ಕಾರ ಈ ರೀತಿಯ circularನ್ನು ಯಾವ ಕಾಲದಲ್ಲಾದರೂ ಕೊಟ್ಟಿದ್ದಾರೆಯೇ? ಅದು ನಿಮ್ಮ ಕಾಲದಲ್ಲಿ ಇರಬಹುದು ಅಥವಾ ಯಾರ ಕಾಲದಲ್ಲಾದರೂ ಆಗಿರಬಹುದು. Leader of the Opposition ರವರಿಗೆ ಒಂದು ಕಡೆ ಕಾನೂನಿನ ಪ್ರಕಾರ Privileges, facilities and rights ಎಲ್ಲವನ್ನು ಕೊಟ್ಟು ಇನ್ನೊಂದು ಕಡೆ ಅವುಗಳೆಲ್ಲವನ್ನೂ ಕಿತ್ತುಕೊಳ್ಳುವ ಪ್ರಯತ್ನವನ್ನು ಈ circular ಮೂಲಕ ಮಾಡಿದ್ದಾರೆ. ನನಗೆ facilities ಬೇಕು ಎಂದು ನಾನು ಕೇಳುವುದಿಲ್ಲ. ಆದರೆ, ಈ Institution ಏನಿದೆ ಇದರ ಗೌರವ, ಘನತೆ

ಹಾಳಾಗಬಾರದು. ಇವರು ಇಷ್ಟ ಮಟ್ಟಿಗೆ ಪ್ರಜಾಪ್ರಭುತ್ವಕ್ಕೆ ಮರ್ಯಾದೆ ಕೊಡದೆಯೇ, ಯಾರಿಗೆ ಮತ್ತು ಯಾವ ಸರ್ಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ಗೌರವ, ನಂಬಿಕೆ ಇಲ್ಲ ಅವರು ವಿರೋಧ ಪಕ್ಷಕ್ಕೂ ಗೌರವ ಕೊಡುವುದಿಲ್ಲ. ಇದನ್ನೇ ಫ್ಯಾಸೀಸಂ ಎಂದು ಕರೆಯುವುದು. ಇದನ್ನೇ Fascism attitude ಎಂದು ಕರೆಯುವುದು. Those who don't believe in democracy, those who don't believe in Parliamentary system of democracy ಅವರನ್ನೆ ಈ ರೀತಿ ಕರೆಯುವುದು. ಮಾವಳಂಕರ್ ಸಹ ಅದನ್ನೆ ಹೇಳಿರುವುದು. Proper co-operation between the Government and the Opposition party otherwise it leads to fascism and revolt. ಎಂದು ಅವರು ಹೇಳಿರತಕ್ಕದ್ದು. ಇವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲ ಎಂದು ಹೇಳುವುದಾದರೆ ಇವರಿಗೆ ಸರ್ಕಾರ ನಡೆಸಲು ಯೋಗ್ಯತೆ ಇಲ್ಲವೆಂದು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ನೀವು ಸಹ ಸಭೆ ಕರೆದಿದ್ದೀರಿ. ನಾವು ಸಹ ಬಂದಿದ್ದೆವು. ಅವರು ಇದನ್ನು ಬಹಳ prestige ಮಾಡಿಕೊಂಡು ವಿರೋಧ ಪಕ್ಷದವರಿಗೆ ಮರ್ಯಾದೆ ಕೊಡಲೇ ಬಾರದು ಎನ್ನತಕ್ಕ ಹಠಕ್ಕೆ ಬಂದಿದ್ದಾರೆ. ಆದ್ದರಿಂದ ನಾವೂ ನಮ್ಮ ನಿಲುವಿನಲ್ಲಿ ನಿಂತುಕೊಳ್ಳಬೇಕಾಗುತ್ತದೆ. ನಮಗೇನು facilities ಹಣ ಕೊಡಿಯೆಂದು ಕೇಳುತ್ತಿಲ್ಲ. ಇವತ್ತು ಕಾನೂನು ರೀತ್ಯ ಒಂದೂ ನಡೆಯುತ್ತಿಲ್ಲ. ಎಂ.ಎಲ್.ಎ. ಗಳಿಗೆ ಅವರಿಗೆ ಇಷ್ಟ ಬಂದಂತೆ ಗ್ರಾಂಟ್ಸ್‌ನ್ನು ಕೊಟ್ಟುಕೊಳ್ಳುತ್ತಾರೆ, ಹಣವನ್ನು release ಮಾಡಿಕೊಳ್ಳುತ್ತಾರೆ. ಆದರೆ, 105 ಜನ ಸದಸ್ಯರಿರುವ ವಿರೋಧ ಪಕ್ಷದವರ ಕ್ಷೇತ್ರಗಳಿಗೆ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಅಲ್ಲಿ ಆಗಿರುವ ಕೆಲಸಗಳಿಗೆ ಎಲ್.ಒ.ಸಿ. ಬಿಡುಗಡೆ ಮಾಡುವುದಿಲ್ಲ. ಈ ರೀತಿ ತಾರತಮ್ಯ ಮಾಡಿ ಇವರು ರಾಜ್ಯ ಅಭಿವೃದ್ಧಿ ಮಾಡುತ್ತಾರೆಯೇ? ಇವರಿಗೆ ಪಾರದರ್ಶಕತೆಯ ಮೇಲೆ ನಂಬಿಕೆ ಇದೆಯೇ? ಪ್ರಜಾತಂತ್ರ ವ್ಯವಸ್ಥೆಯಲ್ಲಿ officers, legislators, executive ಎನ್ನತಕ್ಕಂಥದ್ದರ ಬಗ್ಗೆ ಅರ್ಥ ತಿಳಿದುಕೊಳ್ಳಬೇಕೋ, ಬೇಡವೋ? ಸಂವಿಧಾನದ ಬಗ್ಗೆ ಗೌರವ ಕೊಡುವುದಿಲ್ಲ, Parliamentary practice ಮೇಲೆ ನಂಬಿಕೆ ಇಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕು. ಏಕೆಂದರೆ ನಮ್ಮನ್ನು Leader of the Opposition ಎಂದು recognize ಮಾಡಿರುವುದು ನೀವು ತಾನೆ. On what basis you have recognized me? ಇಲ್ಲಿರತಕ್ಕಂಥ conventions, customs, ನಿಮಗೇನು ಕೆಲಸವಿಲ್ಲವೆಂದು ಹೇಳಿಬಿಡಿಯಷ್ಟೆ, ನೀವು ಕೇವಲ ಎಂ.ಎಲ್.ಎ. ಎಂದು ನೀವು ಹೇಳಿಬಿಡಿಯಷ್ಟೆ. Whatever MLA's got ಅಷ್ಟೇ ನಿಮ್ಮದು

ಕೂಡ ಎಂದು ಹೇಳಿಬಿಡಿ. ಎಲ್ಲವನ್ನೂ ನಿಮಗೆ ವಾಪಸ್ ಕೊಟ್ಟುಬಿಡೋಣ. ಈಗ ಹೇಗಾಗಿದೆಯೆಂದರೆ ನಾವೂ ಕೂಡ ಮಾಹಿತಿಗಾಗಿ Information Act ಅಡಿಯಲ್ಲಿ ಒಂದು ಅರ್ಜಿಯನ್ನು ಹಾಕಿ ಸುಮ್ಮನೆ ಕುಳಿತುಕೊಳ್ಳಬೇಕಾಗಿದೆ. ಸಾಮಾನ್ಯ ಜನರಂತೆ ವಿರೋಧ ಪಕ್ಷದ ನಾಯಕರು ಕೂಡ ಇರಬೇಕು. ನಾವು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡುವುದಿಲ್ಲ, ನಾವು information ಕೇಳಿದರೆ ತಿಂಗಳು ಗಟ್ಟಲೆ information ಕೊಡುವುದಿಲ್ಲ. ಈ ರೀತಿ ಆದರೆ How to function? ಎಂದು ನೀವೇ ಹೇಳಿ. As a responsible opposition, How to discharge my duties? It is not possible. ಹನ್ನೆರಡು ದಿವಸ assembly ಕರೆಯುತ್ತೀರಿ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಟಿ.ಬಿ. ಜಯಚಂದ್ರರವರು ಮತ್ತು ಆ ಕಡೆ ಇನ್ನಿತರರು ಮಾತನಾಡಿದ್ದೆಲ್ಲವನ್ನೂ ನಾನು ಕೇಳಿದ್ದೇನೆ. ಅಧ್ಯಕ್ಷರಾದ ತಮ್ಮ ಮೇಲೆ ಅಪಾರ ಗೌರವವಿದೆ. ಹೀಗಿರುವಾಗ They are tracking for confrontation issue in this house.

ಶ್ರೀ ಸಿದ್ದರಾಮಯ್ಯ: No, you are trapping for confrontation.

ಶ್ರೀ ಬಿ.ಎನ್. ಬಚ್ಚೇಗೌಡ: What is this going on? ತಮ್ಮನ್ನು ತೆಗೆದುಕೊಂಡು ಬಂದು Executive ನಲ್ಲಿ ನಿಲ್ಲಿಸಿ you are custodian of this House. ಹೀಗಿರುವಾಗ ತಮ್ಮನ್ನು Executiveನಲ್ಲಿ ನಿಲ್ಲಿಸಿದ್ದಾರೆ. ಇದನ್ನು ತಾವು ಕೇಳಿ.

ಶ್ರೀ ಸಿದ್ಧರಾಮಯ್ಯ: ನೀವಲ್ಲ, ನೀವಲ್ಲ not you, not you Mr. Bachegowda.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ನೀವು ದಯಮಾಡಿ ಕೇಳಿ. ಮಾನ್ಯ ಸಭಾಧ್ಯಕ್ಷರಿಗೆ ಅಪಾರ ಗೌರವವಿದೆ. Don't trap speaker to these things.

ಶ್ರೀ ಸಿದ್ದರಾಮಯ್ಯ: ಯಾರು? ಏನು ನೀವು ಪರ್ಮನೆಂಟಾಗಿ ಗೂಟ ಹೊಡೆದುಕೊಂಡು ಕುಳಿತುಕೊಳ್ಳುತ್ತೀರೇನು?

(ಗೊಂದಲ)

ಅಧ್ಯಕ್ಷರು: ಸದನದ ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದೂ ದಾಖಲೆಗೆ ಹೋಗುವುದಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ಬಚ್ಚೇಗೌಡರೆ, ಸ್ಪೀಕರ್‌ರವರನ್ನು trap ಮಾಡಿರುವವರು ನಾವೇ? ಸ್ಪೀಕರ್‌ರವರನ್ನು trap ಮಾಡಿರುವುದು ಸರ್ಕಾರ.

ಶ್ರೀ ಬಿ.ಎನ್. ಬಚ್ಚೇಗೌಡ: ದಯಮಾಡಿ Mix up ಮಾಡಬೇಡಿ. Don't mix up the issue Mr. Shivakumar. ನಮಗೂ ಗೊತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್: ಸ್ಪೀಕರ್ ಛೇರ್‌ನ, upper House Leader ರವರನ್ನು use ಮಾಡಿದವರು ಅವರು. ಈಗ ಇವರು ನಮಗೆ ಹೇಳುತ್ತಿದ್ದಾರೆ ಸ್ಪೀಕರ್‌ರವರನ್ನು trap ಮಾಡುತ್ತೀದ್ದೀರೆಂದು.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ: ಈ ರೀತಿಯಲ್ಲಿ ಹೊರಡಿಸಿರುವುದು ಮೊದಲಿನಿಂದಲೂ ಇದೆ. ಹಿಂದಿನಿಂದಲೂ ಇದೇ ಪದ್ಧತಿ ಬಂದಿರುವುದು. ನಾವು ಕೂಡ ಈ ಹೌಸ್‌ನಲ್ಲಿ ಕೆಲಸ ಮಾಡಿದ್ದೇವೆ.

(ಸದನದ ಬಾವಿಯಿಂದ ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಪಕ್ಷದ ಶಾಸಕರುಗಳು ಸರ್ಕಾರದ ವಿರುದ್ಧ ಧಿಕ್ಕಾರವನ್ನು ಕೂಗುತ್ತಿದ್ದರು).

ಶ್ರೀ ಬಸವರಾಜ ಬೊಮ್ಮಾಯಿ: ಇದು ಒಂದು responsible opposition ಆಗಿದೆಯೇ? ರಸ್ತೆಯಲ್ಲಿ ಕುಳಿತುಕೊಂಡು ಧಿಕ್ಕಾರ ಕೂಗುವ ರೀತ ಧಿಕ್ಕಾರವನ್ನು ಕೂಗುತ್ತಿದ್ದೀರಿ. ಸದನದ ಬಾವಿಯಲ್ಲಿ ಮಾತನಾಡಲೇ ಬಾರದು. ಹೀಗಿರುವಾಗ ನೀವು ರಸ್ತೆಯಲ್ಲಿ ಕುಳಿತುಕೊಂಡು ಧಿಕ್ಕಾರ ಕೂಗಿದಂತೆ ಧಿಕ್ಕಾರವೆಂದು ಕೂಗುತ್ತಿದ್ದೀರಿ. ಈ ರೀತಿ ಮಾಡಿ ನೀವು ಸದನದ ಘನತೆಯನ್ನು ಕಡಿಮೆ ಮಾಡುತ್ತಿದ್ದೀರಿ. Is it a responsible opposition? ರಸ್ತೆಯಲ್ಲಿ ಕೂಗಿದ ಹಾಗೆ ಕೂಗಿ ಈ ಸದನದ ಘನತೆಯನ್ನು ಕಡಿಮೆ ಮಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು: ಸದನದ ಬಾವಿಯಲ್ಲಿ ನಿಂತು ಮಾತನಾಡುವುದು ಯಾವುದೂ ಕೂಡ ದಾಖಲೆಗೆ ಬರುವುದಿಲ್ಲ.

ಶ್ರೀ ಆರ್. ಅಶೋಕ್: ವಿರೋಧ ಪಕ್ಷ ಎಂದರೆ ಏನು ಎಂದು ಇವರಿಗೆ ಈಗ ಜ್ಞಾಪಕಕ್ಕೆ ಬರುತ್ತಿದೆ. ಅದರ ಅಧಿಕಾರಗಳೇನು, ಅದರ ಸವಲತ್ತುಗಳು ಏನು ಎಂದು ಈಗ ಇವರು ಹುಡುಕುತ್ತಿದ್ದಾರೆ. ಇಲ್ಲಿ ಕುಳಿತಿದ್ದಾಗ ಅವರಿಗೆ ಇದರ ಬಗ್ಗೆ ಮಾತೇ ಬರಲಿಲ್ಲ.

ಅಧ್ಯಕ್ಷರು: ಕಾನೂನು ಸಚಿವರು ಏನೋ ಮಾತನಾಡುತ್ತಾರಂತೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಮತ್ತು ನಾವು ಈ ಸದನದ ಗೌರವವನ್ನು ಕಾಪಾಡಬೇಕು. ಅದೇ ರೀತಿ ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ಯಾವ ಗೌರವವಿದೆಯೋ ಅದನ್ನು ಕೂಡ ನೀವು ಕಾಪಾಡಬೇಕು. ಅದಕ್ಕೆ ಅಗೌರವ ಬರುವ ರೀತಿಯಲ್ಲಿ ನಡೆದುಕೊಳ್ಳಬಾರದು. ಇದು ನಮ್ಮ ಡಿಬೆಟ್, ಅದನ್ನು ಬಿಟ್ಟು We are not asking any facilities. ನೀವು ಬೇಕಾದರೆ ನನಗೆ ಕೊಟ್ಟಿರುವ ಎಲ್ಲ ಸೌಲಭ್ಯಗಳನ್ನು ವಾಪಸ್ ತೆಗೆದುಕೊಳ್ಳಿ. ಮನೆ, ಕಾರು, ಸರ್ಕಾರ ಕೊಟ್ಟಿರುವುದೆಲ್ಲವನ್ನೂ ಬೇಕಾದರೆ ನೀವು ವಾಪಸ್ ತೆಗೆದುಕೊಳ್ಳಿ. ಎಲ್ಲವನ್ನೂ ವಾಪಸ್ ತೆಗೆದುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಸಚಿವರು): ಈಗಾಗಲೇ ಈ ಸುತ್ತೋಲೆ ಮೇಲೆ ಇವತ್ತು ಬಹಳ ದೀರ್ಘವಾಗಿ ಚರ್ಚೆಯಾಗಿದೆ. ತಾವೂ ಮಾತನಾಡಿದ್ದೀರಿ. ಅದಕ್ಕೆ ಸರ್ಕಾರ ಕೂಡ ಉತ್ತರ ಕೊಟ್ಟಿದೆ. ಈಗ ಸರ್ಕಾರ ಮತ್ತು ಶಾಸಕಾಂಗ ಎಂದು ಎರಡಿದೆ.

ಶ್ರೀ ಸಿದ್ದರಾಮಯ್ಯ: ಅದು ಎಲ್ಲರಿಗೂ ಗೊತ್ತಿದೆ ಬಿಡಿ ಸ್ವಾಮಿ. Constitution ಬಗ್ಗೆ ನಾವೂ ಓದಿಕೊಂಡೇ ಬಂದಿದ್ದೀವಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರ ಅಧಿಕಾರವೇನಿದೆ ಅದನ್ನು ಯಾವುದೇ ರೀತಿಯಲ್ಲಿ ಸರ್ಕಾರ ಮೊಟಕು ಮಾಡುತ್ತಿಲ್ಲ. ಅವರು ಮಾಹಿತಿಯನ್ನು ತರಿಸಿಕೊಳ್ಳಬಹುದು. ಇದರ ಆಧಾರದ ಮೇಲೆಯೇ ತಾವು ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಇದು ಭಂಡ ಸರ್ಕಾರ.

(ಸದನದ ಬಾವಿಯಿಂದ ವಿರೋಧ ಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ಧಿಕ್ಕಾರವನ್ನು ಕೂಗುತ್ತಿದ್ದರು).

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಅವರ ವರ್ತನೆ ಈ ಸದನದ ಗೌರವವನ್ನು ಕಡಿಮೆ ಮಾಡುತ್ತಿದೆ. It is an irresponsible behavior of opposition. ಈ ರೀತಿ ಮಾಡಿದರೆ ಅವರಿಗೂ ಕೂಡ ಗೌರವ ತರುವುದಿಲ್ಲ. Responsible oppositionನವರು ಮಾಡುವ ಕೆಲಸವಲ್ಲವಿದು.

(ಗೊಂದಲ)

ಅಧ್ಯಕ್ಷರು: ಆಯಿತು. ಈಗ ಈ ವಿಷಯವನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ. ದಯವಿಟ್ಟು ಬಾವಿಯಲ್ಲಿರುವವರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ಇನ್ನೂ Demands ಮೇಲೆ ಚರ್ಚೆ ಮಾಡುವುದಿದೆ. ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. Demands ಮೇಲೆ ಚರ್ಚೆ ತೆಗೆದುಕೊಳ್ಳೋಣ.

(ಗೊಂದಲ)

ಅಧ್ಯಕ್ಷರು: ಈ ರೀತಿಯಾದರೆ ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ. ಅನಿವಾರ್ಯವಾಗಿ ನಾನು ಸದನವನ್ನು ನಾಳೆಗೆ ಮುಂದಕ್ಕೆ ಹಾಕಬೇಕಾಗುತ್ತದೆ. ಏಕೆಂದರೆ ಈ ರೀತಿಯ ವಾತಾವರಣದಲ್ಲಿ ಬೇರೆ ವಿಷಯಗಳ ಬಗ್ಗೆ ಕೂಡ ಚರ್ಚೆಯನ್ನು ಮಾಡುವುದಕ್ಕಾಗುವುದಿಲ್ಲ. ಈ ಸಬ್ಜೆಕ್ಟ್ ಏನಿದೆ ಅದನ್ನು ಇಲ್ಲಿಗೇ ಕ್ಲೋಸ್ ಮಾಡೋಣ. Next Subjectನಲ್ಲಿ Demands ಮೇಲೆ ಚರ್ಚೆ ಪ್ರಾರಂಭ ಮಾಡೋಣ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ. ನೀವು ಹೋಗದಿದ್ದರೆ ಅನಿವಾರ್ಯವಾಗಿ ಈ ಸದನವನ್ನು ನಾಳೆಗೆ ಮುಂದಕ್ಕೆ ಹಾಕಬೇಕಾಗುತ್ತದೆ. ಬೇರೆ ದಾರಿಯೇ ಇಲ್ಲ.

ಶ್ರೀ ಸಿದ್ದರಾಮಯ್ಯ: Demands ಮೇಲೆ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ.

ಅಧ್ಯಕ್ಷರು: ಹಾಗಾದರೆ, ಬಾವಿಯಲ್ಲಿರತಕ್ಕಂಥವರು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ಬೇರೆ proceedings ನಡೆಸೋಣ. ಈ ಸದನದ ಕಲಾಪ ನಾಳೆ ಮತ್ತು ನಾಡಿದ್ದು ಎರಡು ದಿವಸ ಮಾತ್ರವಿದೆ. ಈ ವಿಷಯವನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ. ಮುಂದಿನ ವಿಷಯಗಳನ್ನು ನಾವು ತೆಗೆದುಕೊಳ್ಳೋಣ. ಸಾಕಷ್ಟು business ಇದೆ. ದಯವಿಟ್ಟು ನಿಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಕಲಾಪವನ್ನು ನಾಳೆಗೆ ದಯವಿಟ್ಟು ಮುಂದೂಡಬೇಡಿ.

ಅಧ್ಯಕ್ಷರು: ಮತ್ತೆ ಏನು ಮಾಡೋಣ ಹೇಳಿ. ಈಗಾಗಲೇ ವಿರೋಧ ಪಕ್ಷದ ನಾಯಕರಾದ ತಾವು ಹೇಳಿದ್ದೀರಿ. ಅದನ್ನು ಸರ್ಕಾರ ಕೂಡ ಉತ್ತರವನ್ನು ಕೊಟ್ಟಿದೆ. ಸರ್ಕಾರದ ಇದರ ಬಗ್ಗೆ ಒಂದು ರೀತಿಯ stand ತೆಗೆದುಕೊಂಡಿದೆ. ಇಲ್ಲಿಗೆ ಈ subject ಅನ್ನು close ಮಾಡೋಣ. ಈಗ Demands ಮೇಲೆ ಚರ್ಚೆಯನ್ನು ಮಾಡೋಣ. ಇನ್ನೂ ಸಾಕಷ್ಟು

ವಿಚಾರಗಳಿವೆ. Calling attentions ಇವೆ. ಈಗ ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡೋಣ.

ಶ್ರೀ ಬಸವರಾಜ ಬೊಮ್ಮಾಯಿ: ಇದು ಬಜೆಟ್ ಮೇಲೆ ಕರೆದಿರುವ ಅಧಿವೇಶನ, ಕಳೆದ ಒಂದು ವರ್ಷದಿಂದ ಸರಿಯಾಗಿ ಬಜೆಟ್ ಮೇಲೆ ಚರ್ಚೆಯಾಗಿಲ್ಲ. ಈ ವರ್ಷವಾದರೂ ಬಜೆಟ್ ಮೇಲೆ ಚರ್ಚೆ ಮಾಡುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಇವರು ಈ ತರಹದ ವಿಷಯಗಳನ್ನು ತಂದು ಜನರ ಸಮಸ್ಯೆಗಳಿಗೆ ಸ್ಪಂದಿಸದೇ ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡದೇ ಗೊಂದಲದ ವಾತಾವರಣ ಸೃಷ್ಟಿ ಮಾಡುತ್ತಿದ್ದಾರೆ.

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 59 ನಿಮಿಷಕ್ಕೆ ಮುಕ್ತಾಯವಾಗಿ ಮತ್ತೆ ದಿನಾಂಕ 28ನೇ ಜುಲೈ 2009ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು).

* * * * *